24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 136 | ನವದೆಹಲಿ | ಬೆಲೆ ₹10 | ನವಂಬರ್ 13, 2026, ಶುಕ್ರವಾರ



ಶ್ರೀ ಡಿ.ಕೆ. ಶಿವಕುಮಾರ್
ಮುಖ್ಯಮಂತ್ರಿಗಳು, ಕರ್ನಾಟಕ

ಪ್ರಗತಿಯ ಪಥದಲ್ಲಿ ಕರ್ನಾಟಕ ಚಲನಶೀಲತೆಗೆ ಮತ್ತಷ್ಟು ವೇಗ



ಶ್ರೀ ನರೇಂದ್ರ ಮೋದಿ
ಪ್ರಧಾನ ಮಂತ್ರಿಗಳು

₹15,600 ಕೋಟಿಗೂ ಅಧಿಕ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ, ರಾಷ್ಟ್ರಕ್ಕೆ ಸಮರ್ಪಣೆ, ಶಂಕುಸ್ಥಾಪನೆ ಮತ್ತು ಹಸಿರು ನಿಶಾನೆ

ಇವರಿಂದ
ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು






ಉದ್ಘಾಟನೆ

- ನಮ್ಮ ಮೆಟ್ರೋವಿನ 7.5 ಕಿ.ಮೀ. ಎತ್ತರಿಸಿದ ಗುಲಾಬಿ ಮಾರ್ಗ
- ಕರ್ನಾಟಕದ ಕೊಪ್ಪಳ–II (ಹಂತ ಎ&ಬಿ) ಹಾಗೂ ಗದಗ–II ರಲ್ಲಿ (ಹಂತ–ಎ) ನವೀಕರಿಸಬಹುದಾದ ಇಂಧನ ವಲಯ (ಹಂತ–2) ಸಂಯೋಜನೆಗಾಗಿ ವಿದ್ಯುತ್ ಪ್ರಸರಣ ಯೋಜನೆ
- ಕರ್ನಾಟಕದ ಬೀದರ್‌ನಲ್ಲಿ (2500 ಮೆ.ವ್ಯಾ.) ಸೌರಶಕ್ತಿ ವಲಯದ ವಿದ್ಯುತ್ ಪ್ರಸರಣ ಯೋಜನೆ
- ಪುನರಾಭಿವೃದ್ಧಿಪಡಿಸಿದ ನಾಲ್ಕು ಅಮೃತ್ ನಿಲ್ದಾಣಗಳು – ಚಾಮರಾಜನಗರ, ಚಿಕ್ಕಮಗಳೂರು, ಸಕಲೇಶಪುರ ಮತ್ತು ಸುಬ್ರಹ್ಮಣ್ಯ ರಸ್ತೆ

ರಾಷ್ಟ್ರಕ್ಕೆ ಸಮರ್ಪಣೆ

- ದ್ವಿಪಥೀಕರಿಸಿದ ಬಾಗಲಕೋಟೆ – ವಂದಾಲ ನಡುವಿನ ರೈಲು ಮಾರ್ಗ (45 ಕಿ.ಮೀ.)
- ಸಕಲೇಶಪುರ – ಸುಬ್ರಹ್ಮಣ್ಯ ರಸ್ತೆ (ಘಾಟ್ ರೈಲ್ ಸೆಕ್ಷನ್) ನಡುವೆ 55 ಕಿ.ಮೀ. ವಿದ್ಯುದೀಕರಣ
- ಎಂಆರ್‌ಪಿಎಲ್ ಸಂಸ್ಥೆಯ ದೇವನಗೊಂತಿ ಮಾರ್ಕೆಟಿಂಗ್ ಟರ್ಮಿನಲ್, ಬೆಂಗಳೂರು
- ಹೆಚ್‌ಪಿಸಿಎಲ್ ಸಂಸ್ಥೆಯ 80 TMT LPG Cavern, ಮಂಗಳೂರು

ಶಂಕುಸ್ಥಾಪನೆ

- ಕರ್ನಾಟಕದ ದಾವಣಗೆರೆ /ಚಿತ್ರದುರ್ಗ ಮತ್ತು ಬಳ್ಳಾರಿಯಲ್ಲಿ ನವೀಕರಿಸಬಹುದಾದ ಇಂಧನ ವಲಯಗಳ ಸಂಯೋಜನೆಗಾಗಿ ವಿದ್ಯುತ್ ಪ್ರಸರಣ ಯೋಜನೆ
- ದಾವಣಗೆರೆ (0.25 ಗಿ.ವ್ಯಾ) ಮತ್ತು ಬಳ್ಳಾರಿಯಲ್ಲಿ (2.75 ಗಿ.ವ್ಯಾ) ನವೀಕರಿಸಬಹುದಾದ ಇಂಧನದ ಹೆಚ್ಚುವರಿ ಸಾಮರ್ಥ್ಯದ ಸಂಯೋಜನೆಗಾಗಿ ವಿದ್ಯುತ್ ಪ್ರಸರಣ ಯೋಜನೆಯ ಬಲವರ್ಧನೆ
- ಗೇಲ್ ಸಂಸ್ಥೆಯ ಸಂಕ್ಷೇಪಿತ ಜೈವಿಕ ಅನಿಲ ಸ್ಥಾವರ, ಬೆಂಗಳೂರು

ಹಸಿರು ನಿಶಾನೆ

- ಬೆಂಗಳೂರು – ಮಂಗಳೂರು – ಮಡಗಾಂವ್ ವಂದೇ ಭಾರತ್ ಎಕ್ಸ್‌ಪ್ರೆಸ್

ಯೋಜನೆಯ ಅನುಕೂಲಗಳು

- ಉತ್ತರ ಬೆಂಗಳೂರು ಮತ್ತು ದಕ್ಷಿಣ ಬೆಂಗಳೂರು ನಡುವೆ ಸಂಪರ್ಕ ಸುಧಾರಣೆ
- ವಾಣಿಜ್ಯ ಕೇಂದ್ರಗಳು, ಶಿಕ್ಷಣ ಸಂಸ್ಥೆಗಳು, ಆರೋಗ್ಯ ಕೇಂದ್ರಗಳು ಮತ್ತು ವಸತಿ ಪ್ರದೇಶಗಳೊಂದಿಗೆ ತ್ವರಿತ ಸಂಪರ್ಕ
- ಪ್ರಮುಖ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಇಳಿಕೆ, ಮಾಲಿನ್ಯ ಮುಕ್ತ ಪರಿಸರ ನಿರ್ಮಾಣ, ವಾಯು ಗುಣಮಟ್ಟದಲ್ಲಿ ಸುಧಾರಣೆ
- ಮೆಟ್ರೋ ಜಾಲದ ಕಾರ್ಯಾಚರಣೆಯ ವ್ಯಾಪ್ತಿ 92 ನಿಲ್ದಾಣಗಳನ್ನು ಒಳಗೊಂಡಂತೆ 104 ಕಿ.ಮೀ.ವರೆಗೆ ವಿಸ್ತರಣೆ
- ಪ್ರಯಾಣಿಕರಿಗೆ ಹೆಚ್ಚಿನ ಸೌಕರ್ಯ, ಅನುಕೂಲ ಮತ್ತು ಅತ್ಯುತ್ತಮ ಪ್ರಯಾಣದ ಅನುಭವ ಒದಗಿಸುವ ಅತ್ಯಾಧುನಿಕ ನಿಲ್ದಾಣ ಕೇಂದ್ರಗಳು
- ದ್ವಿಪಥ ರೈಲು ಮಾರ್ಗದಿಂದ ಉತ್ತರ ಕರ್ನಾಟಕ ಹಾಗೂ ಸುತ್ತಲಿನ ಪ್ರದೇಶಗಳೊಂದಿಗಿನ ಸಂಪರ್ಕದಲ್ಲಿ ಮತ್ತಷ್ಟು ಬಲವರ್ಧನೆ
- ರೈಲು ಮಾರ್ಗ ವಿದ್ಯುದೀಕರಣವು ರೈಲು ಕಾರ್ಯಾಚರಣೆಯಲ್ಲಿ ದಕ್ಷತೆಗೆ ಶಕ್ತಿ ಮತ್ತು ಡೀಸೆಲ್ ಇಂಧನದ ಬಳಕೆಗೆ ಮುಕ್ತಿ
- ವಂದೇ ಭಾರತ್ ಎಕ್ಸ್‌ಪ್ರೆಸ್ ಪರಿಚಯಿಸುವ ಮೂಲಕ ಕರ್ನಾಟಕ ಮತ್ತು ಗೋವಾ ನಡುವಿನ ಆರ್ಥಿಕ, ವಾಣಿಜ್ಯ ಹಾಗೂ ವ್ಯವಹಾರಿಕ ಬಾಂಧವ್ಯದಲ್ಲಿ ಬಲವರ್ಧನೆ
- ಕೋಟ್ಯಂತರ ಮನೆಗಳಿಗೆ ಎಲ್‌ಪಿಜಿ ಪೂರೈಕೆಯಿಂದ ಜನರ ದೈನಂದಿನ ಜೀವನಮಟ್ಟ ಸುಧಾರಣೆ ಮತ್ತು ಸ್ವಚ್ಛ ಪರಿಸರದ ನಿರ್ಮಾಣ
- ಸಮರ್ಪಕ ಘನತ್ಯಾಜ್ಯ ನಿರ್ವಹಣೆ ಮತ್ತು ಸರ್ಕ್ಯುಲರ್ ಎಕಾನಮಿ ಮೂಲಕ "ಕಸದಿಂದ ರಸ" (Waste-to-Wealth) ಪರಿಕಲ್ಪನೆಗೆ ಉತ್ತೇಜನ.
- ವಿಶ್ವಾಸಾರ್ಹ, ಸುಸ್ಥಿರ ಮತ್ತು ಪರಿಸರಸ್ನೇಹಿ ಗ್ರೀನ್ ವಿದ್ಯುತ್‌ನ್ನು ಉತ್ತೇಜಿಸುವತ್ತ ಕರ್ನಾಟಕದ ವಿದ್ಯುತ್ ಮೂಲಸೌಕರ್ಯಗಳಲ್ಲಿ ಸುಧಾರಣೆ

ಘನ ಉಪಸ್ಥಿತಿ

ಡಾ. ಸುಧಾ ಯಾದವ್
ರಾಜ್ಯಪಾಲರು, ಕರ್ನಾಟಕ

ಶ್ರೀ ಡಿ.ಕೆ. ಶಿವಕುಮಾರ್
ಮುಖ್ಯಮಂತ್ರಿಗಳು, ಕರ್ನಾಟಕ

ಶ್ರೀ ಮನೋಹರ್ ಲಾಲ್
ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳು ಮತ್ತು ಇಂಧನ ಸಚಿವರು

ಶ್ರೀ ಅಶ್ವಿನಿ ವೈಷ್ಣವ್
ಕೇಂದ್ರ ರೈಲ್ವೆ ಸಚಿವರು

ಶ್ರೀ ಹರ್ದೀಪ್ ಸಿಂಗ್ ಪುರಿ
ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವರು

ಶ್ರೀ ಕೃಷ್ಣ ಬೈರೇಗೌಡ
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ತೇಜಸ್ವಿ ಸೂರ್ಯ
ಲೋಕಸಭಾ ಸದಸ್ಯರು
ಬೆಂಗಳೂರು ದಕ್ಷಿಣ

13ನೇ ನವೆಂಬರ್, 2026, ಶುಕ್ರವಾರ ಮಧ್ಯಾಹ್ನ 12:30 ಗಂಟೆಯನಂತರ
ಐಐಎಂ ಬೆಂಗಳೂರು ಆಡಿಟೋರಿಯಂ, ಬನ್ನೇರುಘಟ್ಟ ರಸ್ತೆ, ಬಿಳೇಕಹಳ್ಳಿ, ಬೆಂಗಳೂರು, ಕರ್ನಾಟಕ

ಕಾರ್ಯಕ್ರಮವು DD News ನಲ್ಲಿ ನೇರಪ್ರಸಾರವಾಗುವುದು

ನಿತ್ಯ ಪಂಚಾಂಗ 13.11.2026 ಶುಕ್ರವಾರ



ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯನ ಶರದ್ ಋತು/ ಚಾಂದ್ರಮಾನ ಆಶ್ವಯುಜ-ಕಾರ್ತಿಕ ಮಾಸ

ಕಾರ್ತಿಕ ಶುದ್ಧ, ಚೌತಿ, ಮೂಲ ನಕ್ಷತ್ರ, ಚಿನಾಯಕೀ ಚತುರ್ಥಿ, ಶ್ರೀಜೀಯಾರ್ ತಿರುನಕ್ಷತ್ರ

ದಿನ	ರಾಹುಕಾಲ	ಯಮಗಂಡ	ಗುಳಿಕಕಾಲ
ಭಾನು	4.30 – 6.00	12.00 – 1.30	3.00 – 4.30
ಸೋಮ	7.30 – 9.00	10.30 – 12.00	1.30 – 3.00
ಮಂಗಳ	3.00 – 4.30	9.00 – 10.30	12.00 – 1.30
ಬುಧ	12.00 – 1.30	7.30 – 9.00	10.30 – 12.00
ಗುರು	1.30 – 3.00	6.00 – 7.30	9.00 – 10.30
ಶುಕ್ರ	10.30 – 12.00	3.00 – 4.30	7.30 – 9.00
ಶನಿ	9.00 – 10.30	1.30 – 3.00	6.00 – 7.30

ಡಿಕೆಶಿ ಮಾತು, ಕೃತಿಯ ಬಗ್ಗೆ ಚರ್ಚೆ ಬೇಡ: ಎಚ್.ಡಿ. ಕುಮಾರಸ್ವಾಮಿ

ಯಾರಿಗೂ ಕೆಟ್ಟದ್ದನ್ನು ಬಯಸಲ್ಲ ಎಂಬ ಸಿಎಂ ಹೇಳಿಕೆಗೆ ಕೇಂದ್ರ ಸಚಿವರ ಲೇವಡಿ

ಬೆಂಗಳೂರು, ನ.12: ನಾನು ಯಾರಿಗೂ ಕೆಟ್ಟದ್ದನ್ನು ಬಯಸಲ್ಲ ಎಂಬ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆಗೆ ತಿರುಗೇಟು ನೀಡಿರುವ ಕೇಂದ್ರ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು, ಅಯ್ಯೋ ಪಾಪ, ಡಿ.ಕೆ. ಶಿವಕುಮಾರ್ ಯಾರಿಗೂ ಕೆಟ್ಟದ್ದನ್ನು ಬಯಸಿಯೇ ಇಲ್ಲ ಎಂದು ಲೇವಡಿ ಮಾಡಿದ್ದಾರೆ.



ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಏನೇನು ಮಾತನಾಡಿದ್ದಾರೆ ಎಂದು ನೋಡಿದ್ದೇನೆ. ಅವರ ಮಾತು, ಕೃತಿಯ ಬಗ್ಗೆ ಚರ್ಚೆ ಬೇಡ. ಎಲ್ಲದ್ದಕ್ಕೂ ನಾನು ಉತ್ತರ ಕೊಡುವುದಕ್ಕೆ ಹೋಗಲ್ಲ. ನಾನು ಮುಖ್ಯಮಂತ್ರಿಯಾಗಿದ್ದಾಗ ಡಿ.ಕೆ. ಶಿವಕುಮಾರ್ ಅವರಿಗೆ ಏನು ಸಹಾಯವಾಗಿದೆ, ಅವರಿಂದ ನನಗೆ ಏನು ಸಹಾಯವಾಗಿದೆ ಎಲ್ಲವೂ ಇತಿಹಾಸ. ಜೆಡಿಎಸ್ 12 ಶಾಸಕರನ್ನು ಕೊಂಡುಕೊಂಡಿದ್ದೇನೆ ಎಂದು ಹೇಳಿದ್ದರು. ಹೀಗಿರುವಾಗ ನನಗೆ ಒಳ್ಳೆಯದನ್ನು ಬಯಸುತ್ತಾರಾ, ಜೆಡಿಎಸ್ ಪಕ್ಷವನ್ನು ಮುಗಿಸಲು ಹೊರಟವರು ಡಿ.ಕೆ. ಶಿವಕುಮಾರ್ ಎಂದು ಕಿಡಿಕಾರಿದರು.

ಜೆಡಿಎಸ್ ಸಂಘಟನೆ ಮುಖ್ಯ

ಕಾಂಗ್ರೆಸ್‌ನಲ್ಲಿ ಅಸಮಾಧಾನಗೊಂಡಿರುವ 25-30 ಕ್ಕೂ ಹೆಚ್ಚು ಶಾಸಕರು ಜೆಡಿಎಸ್‌ಗೆ ಬರಲು ಸಿದ್ಧರಿದ್ದಾರೆ ಎಂಬ ಸುದ್ದಿಗಳಿವೆಯಲ್ಲ ಎಂಬ ಪ್ರಶ್ನೆಗೆ ಉತ್ತರ ನೀಡಿದ ಕುಮಾರಸ್ವಾಮಿ, ನಾನು ಅವರು ಬರುತ್ತಾರೆ, ಇವರು ಬರುತ್ತಾರೆ ಎಂದು ತಲೆ ಕೆಡಿಸಿಕೊಳ್ಳಲ್ಲ. ನನ್ನ ಪಕ್ಷದ ಸಂಘಟನೆಯಾಗಬೇಕು. ರಾಜಕೀಯವಾಗಿ ಒಳ್ಳೆಯದು ಮಾಡಲು ಪ್ರಯತ್ನ ಪಡುತ್ತಿದ್ದೇನೆ ಎಂದರು.

ಮುಂದೆನೂ ನಾನು ರಾಜಕೀಯದಲ್ಲಿ ಸಾಧ್ಯವಾದಷ್ಟು ಒಳ್ಳೆಯದನ್ನು ಮಾಡುತ್ತೇನೆ. ಇವತ್ತೂ ಅದನ್ನೇ ಮಾಡುತ್ತೇನೆ ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದರು. ಹಿರಿಯೂರು ಉಪ ಚುನಾವಣೆ ಅಭ್ಯರ್ಥಿ ಆಯ್ಕೆ 2-3 ದಿನಗಳಲ್ಲಿ ಅಂತಿಮಗೊಳಿಸಲಾಗುವುದು ಎಂದು ಹೇಳಿದರು.

ನಮ್ಮ ಮೆಟ್ರೋಗೆ ಯುಪಿಎ ಸರ್ಕಾರ ಹಾಕಿದ ಬುನಾದಿ, ನೀಡಿದ ಸಹಕಾರ ಮರೆಯಬಾರದು: ಸಚಿವ ರಾಮಲಿಂಗಾರೆಡ್ಡಿ



ಬೆಂಗಳೂರು, ನ.12: ಬೆಂಗಳೂರು ಮೆಟ್ರೋ ಅಭಿವೃದ್ಧಿಗೆ ಯುಪಿಎ ಸರ್ಕಾರ ಹಾಕಿದ ಬುನಾದಿ, ಕರ್ನಾಟಕದಲ್ಲಿ ಸತತವಾಗಿ ಅಧಿಕಾರ ನಡೆಸಿದ ಸರ್ಕಾರಗಳ ನಿರಂತರ ಪ್ರಯತ್ನಗಳು ಹಾಗೂ ನಂತರದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಕಾರವನ್ನು ಇತಿಹಾಸ ಮರೆಯಬಾರದು ಎಂದು ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಅವರು, ನಮ್ಮ ಮೆಟ್ರೋದ ಪಿಂಕ್ ಲೈನ್‌ನ 7.5 ಕಿ.ಮೀ ಉದ್ದದ ಮೊದಲ ಕಾರ್ಯಾಚರಣಾ ವಿಭಾಗದ ಉದ್ಘಾಟನೆಯನ್ನು ಶುಕ್ರವಾರ (ನ.13)ದಂದು ಪ್ರಧಾನಮಂತ್ರಿ ನರೇಂದ್ರ ಮೋದಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ ಜಿ. ಪರಮೇಶ್ವರ್, ಸಂಸತ್ ಸದಸ್ಯರು, ಸಚಿವರು ಮತ್ತು ಶಾಸಕರ ಉಪಸ್ಥಿತಿಯಲ್ಲಿ ನಡೆಯುತ್ತಿರುವುದು ಅತ್ಯಂತ ಸಂತೋಷದ ವಿಷಯವಾಗಿದೆ ಎಂದಿದ್ದಾರೆ.



ನಮ್ಮ ಮೆಟ್ರೋ ಎಂಬುದು ಕನ್ನಡಿಗರ ತೆರಿಗೆ ಕೊಡುಗೆಗಳ, ಕರ್ನಾಟಕ ಸರ್ಕಾರದ ಆರ್ಥಿಕ ವಾಗ್ದಾನದ, ಬೆಂಗಳೂರು ಜನರ ಕನಸುಗಳ ಮತ್ತು ಹಲವಾರು ದಶಕಗಳ ಅಭಿವೃದ್ಧಿ ಪಯಣದ ಸಂಕೇತವಾಗಿದೆ. ಪಿಂಕ್ ಲೈನ್ ಉದ್ಘಾಟನೆಯು ಬೆಂಗಳೂರಿನ ಅಭಿವೃದ್ಧಿಯಲ್ಲಿ ಮತ್ತೊಂದು ಮೈಲಿಗಲ್ಲಾಗಲಿ. ನಮ್ಮ ಮೆಟ್ರೋ ನಿರ್ಮಾಣದಲ್ಲಿ ಕರ್ನಾಟಕ ಸರ್ಕಾರ ಮತ್ತು ಕನ್ನಡಿಗರ ಕೊಡುಗೆಯು ತಕ್ಕ ಗೌರವ ಹಾಗೂ ಮಾನ್ಯತೆಯನ್ನು ಪಡೆದುಕೊಳ್ಳಬೇಕು. ಬೆಂಗಳೂರು ಬೆಳೆದರೆ, ಕರ್ನಾಟಕ ಬೆಳೆಯುತ್ತದೆ. ಕರ್ನಾಟಕ ಬೆಳೆದರೆ, ದೇಶ ಬೆಳೆಯುತ್ತದೆ.

– ರಾಮಲಿಂಗಾರೆಡ್ಡಿ,
ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಇಲಾಖೆ ಸಚಿವ

ಕಾಳೇನ ಅಗ್ರಹಾರದಿಂದ ತಾವರೆಕೆರೆಗೆ ಸಂಪರ್ಕ ಕಲ್ಪಿಸುವ ಈ ಮಾರ್ಗವು ದಕ್ಷಿಣ ಬೆಂಗಳೂರಿನ ಸಾರಿಗೆ ವ್ಯವಸ್ಥೆಗೆ ಹೊಸ ಉತ್ತೇಜನ ನೀಡಲಿದೆ. ಬೆಂಗಳೂರಿನ ಸಾರ್ವಜನಿಕ ಸಾರಿಗೆ ಜಾಲವನ್ನು ಬಲಪಡಿಸುವ ಈ ಯೋಜನೆಯನ್ನು ಸ್ವಾಗತಿಸುತ್ತೇನೆ. ಪ್ರಮುಖ ಸಂಗತಿಯೆಂದರೆ, ಯುಪಿಎ ಸರ್ಕಾರದ ಅವಧಿಯಲ್ಲಿ 2014ರ ಜನವರಿ 30ರಂದು ಕೇಂದ್ರ ಸಂಪುಟವು ನಮ್ಮ ಮೆಟ್ರೋ ಹಂತ-2ಕ್ಕೆ ಅನುಮೋದನೆ ನೀಡಿತು. ಗೊಟ್ಟಿಗೆರೆ-ನಾಗವಾರ ಕಾರಿಡಾರ್ ಕೂಡ ಈ ಯೋಜನೆಯ ಭಾಗವಾಗಿತ್ತು. ಇಂದಿನ ಪಿಂಕ್‌ಲೈನ್ ಆಗಿ ಅಭಿವೃದ್ಧಿ ಪಡಿಸುತ್ತಿರುವುದು ಇದೇ ಯೋಜನೆಯಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಇಂದು ಉದ್ಘಾಟನೆಗೊಳ್ಳುತ್ತಿರುವ ಪಿಂಕ್‌ಲೈನ್‌ನ ಮೂಲ ಯೋಜನೆಗೆ ಅಗತ್ಯವಿದ್ದ ಕೇಂದ್ರ ಮಟ್ಟದ ಅನುಮೋದನೆಯು ಯುಪಿಎ ಸರ್ಕಾರದ ಅವಧಿಯಲ್ಲಿ ದೊರೆತಿದೆ.

ಪಿಂಕ್‌ಲೈನ್ ಯೋಜನೆ ವೆಚ್ಚದ ಹಿಂದಿನ ಸತ್ಯ

ಕಾಳೇನ ಅಗ್ರಹಾರದಿಂದ ನಾಗವಾರದವರೆಗಿನ 21.26 ಕಿ.ಮೀ ಪಿಂಕ್‌ಲೈನ್ ಯೋಜನೆಯ ಮೂಲ ಅಂದಾಜು ವೆಚ್ಚ 8,730 ಕೋಟಿಗಳಾಗಿದ್ದವು. ನಂತರದ ಪರಿಷ್ಕೃತ ಅಂದಾಜಿನ ಪ್ರಕಾರ, ಈ ವೆಚ್ಚವು 17,346 ಕೋಟಿಗಳಿಗೆ ಏರಿಕೆಯಾಗಿದೆ. ಇದರಲ್ಲಿ ರಾಜ್ಯ ಸರ್ಕಾರದ ಪಾಲು ಸರಿಸುಮಾರು 12,000 ಕೋಟಿಗಳಾಗಿವೆ. ನಮ್ಮ ಮೆಟ್ರೋದ ಹಂತ-1, ಹಂತ-2, ಹಂತ-2ಎ, ಹಂತ-2ಬಿ ಮತ್ತು ಹಂತ-3ರ ಒಟ್ಟು ಯೋಜನೆ ವೆಚ್ಚ/ಅಂದಾಜು ವೆಚ್ಚವು 77,891 ಕೋಟಿಗಳಾಗಿವೆ. ಕರ್ನಾಟಕ ಸರ್ಕಾರದ ಕೊಡುಗೆ: 65,291 ಕೋಟಿಗಳು (83.8%) ಹಾಗೂ ಕೇಂದ್ರ ಸರ್ಕಾರದ ಕೊಡುಗೆ: 12,600 ಕೋಟಿಗಳು (16.2%) ಎಂದು ರಾಮಲಿಂಗಾರೆಡ್ಡಿ ವಿವರ ನೀಡಿದ್ದಾರೆ.

ಪ್ರಧಾನಿ ಮೋದಿ ರಾಜ್ಯ ಭೇಟಿಯಿಂದ ಹೆಚ್ಚಿನ ನಿರೀಕ್ಷೆಯಿಲ್ಲ: ಸಚಿವ ಪ್ರಿಯಾಂಕ್ ಖರ್ಗೆ



ಬೆಂಗಳೂರು, ನ.12: ಪ್ರಧಾನಿ ಮೋದಿ ಅವರ ನಾಳಿನ ರಾಜ್ಯ ಭೇಟಿಯಿಂದ ಯಾವುದೇ ನಿರೀಕ್ಷೆಗಳಿಲ್ಲ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮೋದಿ ಬಂದು ಏನು ಮಾಡುತ್ತಾರೆ. ಎರಡು ಟೆಲಿಪ್ರಾಂಪ್ಟರ್ ಇಟ್ಟುಕೊಂಡು ಅದರಲ್ಲಿ ಏನಿದೆಯೋ ಅದನ್ನು ಓದುತ್ತಾರೆ. ಕನ್ನಡದಲ್ಲಿ ಒಂದೆರಡು ಲೈನ್ ನಮಸ್ಕಾರ, ಶುಭಾಶಯಗಳನ್ನು ಹೇಳುತ್ತಾರೆ. ಅದು ಬಿಟ್ಟರೆ ಬೇರೆ ಏನೂ ಇಲ್ಲ ಎಂದು ವ್ಯಂಗ್ಯವಾಡಿದರು

ಬೆಂಗಳೂರು ಮೆಟ್ರೋಗೆ ಕೇಂದ್ರದ ಪಾಲು ಹೆಚ್ಚಿದೆ ಎಂಬ ಬಿಜೆಪಿ ನಾಯಕರ ಹೇಳಿಕೆಯನ್ನು ತಳ್ಳಿಹಾಕಿದ ಅವರು, ಈ ಸಂಬಂಧ ಈಗಾಗಲೇ ಅಂಕಿ-ಅಂಶಗಳನ್ನು ನೀಡಿದ್ದೇವೆ.

ಅದರ ಮೇಲೆ ಚರ್ಚೆ ಮಾಡಿ. ಗಾಳಿಯಲ್ಲಿ ಗುಂಡು ಹಾರಿಸಿದರೆ ಅದಕ್ಕೆ ಉತ್ತರ ಕೊಡುವ ಅವಶ್ಯಕತೆ ಇಲ್ಲ. ಮೆಟ್ರೋಗೆ ಶೇ.80% ಅನುದಾನವನ್ನು ರಾಜ್ಯ ಸರ್ಕಾರವೇ ನೀಡುತ್ತಿದೆ. ಕೇಂದ್ರವು ನೀಡುವ ಶೇ. 15-16% ಅನುದಾನಕ್ಕೆ, ಬುಲೆಟ್ ಟ್ರೈನ್ ಕೊಟ್ಟಂತೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ ರಾಷ್ಟ್ರೀಯ ವಿಪತ್ತು ಘೋಷಣೆ ಮಾಡಬೇಕು ಎಂಬ ಬೇಡಿಕೆಯನ್ನು ನಾಳೆ ಪ್ರಧಾನಿ ಮೋದಿ ಅವರ ಮುಂದೆ ಪ್ರಸ್ತಾಪಿಸುವುದಾಗಿ ಸಚಿವ ಖರ್ಗೆ ತಿಳಿಸಿದ್ದಾರೆ. ಈ ಮೂಲಕ ರಾಜ್ಯದ ಬರ ಪರಿಸ್ಥಿತಿಗೆ ಕೇಂದ್ರದಿಂದ ಹೆಚ್ಚಿನ ನೆರವು ಪಡೆಯುವ ಪ್ರಯತ್ನ ನಡೆಯಲಿದೆ.



ಸಂಸದ ಬಸವರಾಜ ಬೊಮ್ಮಾಯಿ, ಅವರ ಪತ್ನಿ ಚೆನ್ನಮ್ಮ ಅವರು ಗುರುವಾರ ರಾಜ್ಯಪಾಲೆ ಡಾ.ಸುಧಾ ಯಾದವ್ ಅವರನ್ನು ಲೋಕಭವನದಲ್ಲಿ ಭೇಟಿಮಾಡಿ ತಮ್ಮ ಪುತ್ರಿಯ ಮದುವೆಗೆ ಆಹ್ವಾನ ನೀಡಿದರು.

ಬರ ಪರಿಹಾರ ವಿಚಾರದಲ್ಲಿ ರಾಜಕೀಯದ ಅವಶ್ಯಕತೆಯಿಲ್ಲ: ಸಂಸದ ಬಸವರಾಜ ಬೊಮ್ಮಾಯಿ

ಬೆಂಗಳೂರು, ನ.12: ಬರ ಪರಿಹಾರದ ವಿಚಾರದಲ್ಲಿ ರಾಜ್ಯ ಸರ್ಕಾರ ನಡೆ ಸರಿಯಿಲ್ಲ. ಬರ ಪರಿಹಾರದ ವಿಚಾರದಲ್ಲಿ ರಾಜಕೀಯ ಮಾಡುವ ಅವಶ್ಯಕತೆ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಕೇಂದ್ರ ಸಚಿವ ಕುಮಾರಸ್ವಾಮಿ ಅವರನ್ನು ಜೆಪಿ ನಗರದ ಅವರ ನಿವಾಸದಲ್ಲಿ ಭೇಟಿ ಮಾಡಿ ಮಗಳ ಮದುವೆ ಆಮಂತ್ರಣ ನೀಡಿ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬರ ಪರಿಹಾರಕ್ಕೆ ಅದರದ್ದೇ ಆದಂತ ಮಾನದಂಡ ಇದೆ. ಎಸ್‌ಡಿಆರ್‌ಎಫ್‌ನಲ್ಲಿ ಮುಂಗಡ ಮೊದಲೇ ಕೊಟ್ಟಿರುತ್ತಾರೆ. ಜಿಲ್ಲಾಧಿಕಾರಿಗಳ ಬಳಿಯೂ ಸಾಕಷ್ಟು ಹಣ ಇದೆ. ರೈತರಿಗೆ ಪರಿಹಾರ ನೀಡುವಾಗ ಸರ್ಕಾರದ ಬೊಕ್ಕಸದಿಂದ ನೀಡಬೇಕು ಆಮೇಲೆ ಕೇಂದ್ರದಿಂದ ಬರುತ್ತದೆ ಎಂದು ಹೇಳಿದ್ದಾರೆ.

ನಾನು ಮುಖ್ಯಮಂತ್ರಿ ಆಗಿದ್ದಾಗ ನೆರೆ ಬಂದಿತ್ತು. ಕೂಡಲೇ ಸರ್ಕಾರದಿಂದ ಹಣ ಬಿಡುಗಡೆ



ಮಾಡಲಾಗಿತ್ತು. ಒಣ ಬೇಸಾಯಕ್ಕೆ ಕೇಂದ್ರ ಸರ್ಕಾರ 6500 ಕೊಟ್ಟರೆ ನಾವು 13000 ನೀಡಿದ್ದೇವೆ ನೀರಾವರಿಗೆ ಅವರು 12500 ಕೊಟ್ಟರೆ ನಾವು 25000 ಕೊಟ್ಟಿದ್ದೆವು. ಆಗ ಕೇಂದ್ರದಲ್ಲಿ ನಮ್ಮದೇ ಸರ್ಕಾರ ಇದ್ದರೂ ಕೂಡ ಕಾಯಲಿಲ್ಲ. ಸಂಕಷ್ಟ ಇದ್ದಾಗ ಧಾವಿಸಿದರೆ ಮಾತ್ರ ಅದು ಪರಿಹಾರ ಸಮಸ್ಯೆ ಬಗೆಹರಿದು ಮುಂಗಾರು ಹಿಂಗಾರು ಎಲ್ಲ ಮುಗಿದ ನಂತರ ಬಂದರೆ ಅದು ಸಂವೇದನಶೀಲ ಅಲ್ಲ ಎಂದು ಹೇಳಿದರು.

ಮೆಟ್ರೋ ಯೋಜನೆಗೆ ಕೇಂದ್ರ-ರಾಜ್ಯದಿಂದ 50:50

ನಮ್ಮ ಮೆಟ್ರೊ ಅನುದಾನ ಬಿಡುಗಡೆ ಕುರಿತು ಪ್ರತಿಕ್ರಿಯಿಸಿ, ಮೆಟ್ರೊ ಯೋಜನೆಗೆ ಪ್ರತ್ಯೇಕವಾಗಿ ಶೇ.60 ರಿಂದ 65ರಷ್ಟು ಸಾಲ ಇದೆ. ಅದು ಮೆಟ್ರೋ ಆದಾಯದಿಂದ ಬರುತ್ತದೆ. ಅದರಲ್ಲಿ ಕೊಡುತ್ತಾರೆ. ರಾಜ್ಯ ಸರ್ಕಾರ ದಾರಿ ತಪ್ಪಿಸುವಂತಹ, ಜನರ ಕಣ್ಣಿಗೆ ಮಣ್ಣು ಎರಚುವಂತಹ ಕೆಲಸ ಮಾಡಬಾರದು ಎಂದರು. ಸಾಲ ಮರುಪಾವತಿ ಸರ್ಕಾರ ಮಾಡಲ್ಲ, ಜನ ಮಾಡುತ್ತಾರೆ. ಮೆಟ್ರೋ ಟಿಕೆಟ್‌ನಿಂದ ಬರುವ ಹಣದಿಂದ ಸಾಲ ಮರುಪಾವತಿ ಆಗುತ್ತದೆ. ಸರ್ಕಾರದ ಬೊಕ್ಕಸದಿಂದ ಸಾಲ ತೀರಿಸುವುದಿಲ್ಲ. ಸಾಲಕ್ಕೆ ಕೇಂದ್ರ ಸರ್ಕಾರದ ಗ್ಯಾರಂಟಿ ನೀಡಿದ ನಂತರವಷ್ಟೇ ಸಾಲ ದೊರೆಯುತ್ತದೆ. ನಾನು ಮುಖ್ಯಮಂತ್ರಿ ಆಗಿದ್ದಾಗ ಆರೆಂಜ್ ಲೈನ್‌ಗೆ ಎರಡೂವರೆ ಸಾವಿರ ಕೋಟಿ ರೂಪಾಯಿ ಕೊಟ್ಟಿದ್ದೆ. ರಾಜ್ಯದ ದೃಷ್ಟಿಯಿಂದ ಮೆಟ್ರೋ ಲೈನ್‌ಗೆ ಏನು ಅನುಮತಿ ಬೇಕೋ ಅದನ್ನು ಕೊಡಿಸುತ್ತೇವೆ. ಮೆಟ್ರೋ ಯೋಜನೆಗೆ ಕೇಂದ್ರ ಹಾಗೂ ರಾಜ್ಯದ ಪಾಲು 50:50 ಇರುತ್ತದೆ ಎಂದು ಬೊಮ್ಮಾಯಿ ಹೇಳಿದ್ದಾರೆ.

ನನ್ನ ಮಾತನ್ನು ಕಟ್ ಮಾಡಬಹುದು, ಬೆಂಗಳೂರಿನ ಅಭಿವೃದ್ಧಿ ನಿಲ್ಲಿಸಲು ಆಗಲ್ಲ



ಬೆಂಗಳೂರು, ನ.12: ಮೆಟ್ರೋ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಲು ಸಮಯಾವಕಾಶ ಕಲ್ಪಿಸಿಲ್ಲ. ಇದು ತಾನು ಕರ್ನಾಟಕ ರಾಜ್ಯಕ್ಕೆ ನ್ಯಾಯ ಕೇಳಿದ್ದಕ್ಕೆ ಸಿಕ್ಕ ಬಹುಮಾನ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಟೀಕಿಸಿದ್ದಾರೆ. ಈ ಬಗ್ಗೆ ತಮ್ಮ 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಮೆಟ್ರೋ ಉದ್ಘಾಟನೆಯ ಸಭಾ ಕಾರ್ಯಕ್ರಮದ ಡ್ರಾಫ್ಟ್‌ನಲ್ಲಿ ನನ್ನ ಭಾಷಣಕ್ಕೆ ಅವಕಾಶ ನಿಗದಿಯಾಗಿತ್ತು. ಬುಧವಾರ ರಾತ್ರಿ ಬಂದ ಅಂತಿಮ ಪಟ್ಟಿಯಲ್ಲಿ ಸಚಿವರ ಮಾತಿಗೆ ಕತ್ತರಿ ಮಾಡಲಾಗಿದೆ ಎಂದು ಕಾರ್ಯಕ್ರಮದ ಡ್ರಾಫ್ಟ್ ಮತ್ತು ಅಂತಿಮ ಪಟ್ಟಿಯ ಪ್ರತಿಯನ್ನು ಹಾಕಿದ್ದಾರೆ. ಬಹುತೇಕ ಬಂಡವಾಳ ಖರ್ಚು ನಮ್ಮದು. ಕರ್ನಾಟಕಕ್ಕೆ ನ್ಯಾಯಯುತ ಪಾಲು ಕೇಳಿದರೆ ಈ ರೀತಿ ಶಿಕ್ಷೆ. ಪರವಾಗಿಲ್ಲ, ನೀವು ನನ್ನ ಮಾತನ್ನು ಕಟ್ ಮಾಡಬಹುದು. ಆದರೆ ಬೆಂಗಳೂರಿನ ಅಭಿವೃದ್ಧಿಗೆ ಕೆಲಸ ಮಾಡೋದನ್ನ ನಿಲ್ಲಿಸಲಿಕ್ಕೆ ಆಗೋದಿಲ್ಲ. ಇನ್ನೂ ಹೆಚ್ಚಿನ ಪರಿಶ್ರಮದಿಂದ ಕೆಲಸ ಮಾಡುತ್ತೇವೆ ಎಂದು ಹೇಳಿದ್ದಾರೆ.

ಗೃಹ ಇಲಾಖೆಗೆ ಕೊಳಕು ತಂತ್ರಗಳ ಇಲಾಖೆ ಎಂದು ಮರುನಾಮಕರಣ ಮಾಡಿ: ರವಿಕುಮಾರ್ ವ್ಯಂಗ್ಯ

ಬೆಂಗಳೂರು, ನ.12: ಗೃಹ ಇಲಾಖೆಯ ಹೆಸರನ್ನು ಕೊಳಕು ತಂತ್ರಗಳ ಇಲಾಖೆ ಎಂದು ಬದಲಾಯಿಸುವಂತೆ ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಒತ್ತಾಯಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಅವರು, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಎಐ ಮೂಲಕ ಸೃಷ್ಟಿಸಿದ ಹಾಗೂ ತಿರುಚಿದ ಚಿತ್ರಗಳನ್ನು ಬಳಸಿಕೊಂಡು ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ (ಆರ್‌ಎಸ್‌ಎಸ್) ಕೆಟ್ಟ ಹೆಸರು ತರಲು ಕೀಳುಮಟ್ಟದ ಕಿಡಿಗೇಡಿತನದ ಕೃತ್ಯಗಳಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿದ್ದಾರೆ.


ಇತ್ತೀಚೆಗೆ ಖರ್ಗೆ ಜೂನಿಯರ್ ಅವರು ಬಿಹಾರ ಮತ್ತು ಹರಿಯಾಣದಲ್ಲಿ ಆರ್‌ಎಸ್‌ಎಸ್ ಸ್ವಯಂಸೇವಕರು 44,000 ಕೆ.ಜಿ. ಮದ್ದುಗುಂಡುಗಳನ್ನು ಸಾಗಿಸುತ್ತಿದ್ದಾರೆ ಎಂಬಂತೆ ಬಿಂಬಿಸುವ ನಕಲಿ ಎಐ ಚಿತ್ರಗಳನ್ನು ಪ್ರಸಾರ ಮಾಡಿದ್ದಾರೆ.

ಈ ಮೂಲಕ ಖರ್ಗೆ ಜೂನಿಯರ್ ತಮ್ಮ ಕೀಳು ಮನಸ್ಥಿತಿಯನ್ನು ಸಾಬೀತುಪಡಿಸಿದ್ದಾರೆ ಎಂದು ರವಿಕುಮಾರ್ ಟೀಕಿಸಿದ್ದಾರೆ.

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಜ್ಯದ ಅತ್ಯಂತ ಪ್ರಮುಖವಾದ ಕಾನೂನು ಮತ್ತು ಸುವ್ಯವಸ್ಥೆ ಸೇರಿದಂತೆ ಗೃಹ ಇಲಾಖೆಯ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವ ಬದಲು ಆರ್‌ಎಸ್‌ಎಸ್ ವಿರುದ್ಧ ಆರೋಪ ಮಾಡುವುದರಲ್ಲೇ ತಮ್ಮ ಸಮಯ ಮತ್ತು ಶಕ್ತಿಯನ್ನು ವ್ಯರ್ಥ ಮಾಡುತ್ತಿದ್ದಾರೆ ಎಂದು ರವಿಕುಮಾರ್ ಹೇಳಿದ್ದಾರೆ.

ಖರ್ಗೆ ಜೂನಿಯರ್ ಅವರ ಇಂತಹ ಕೀಳುಮಟ್ಟದ ಕಿಡಿಗೇಡಿ ಚಟುವಟಿಕೆಗಳನ್ನು ಪರಿಗಣಿಸಿ ಗೃಹ ಇಲಾಖೆಯ ಹೆಸರನ್ನು ಕೊಳಕು ತಂತ್ರಗಳ ಇಲಾಖೆ ಎಂದು ಮರುನಾಮಕರಣ ಮಾಡುವಂತೆ ಮುಖ್ಯಮಂತ್ರಿಗೆ ಒತ್ತಾಯಿಸುತ್ತೇನೆ ಎಂದು ತಿಳಿಸಿದ್ದಾರೆ.

ವೈಟ್ ಹೌಸ್ ಬಳಿ ನಾಲ್ವರ ಮೇಲೆ ಗುಂಡಿನ ದಾಳಿ



ವಾಷಿಂಗ್ಟನ್, ನ. 12: ಗುರುವಾರ ಮುಂಜಾನೆ ಶ್ವೇತಭವನದ ಬಳಿ ನಾಲ್ಕು ಜನರೆಡೆಗೆ ಗುಂಡು ಹಾರಿಸಲಾಗಿದೆ ಎಂದು ಅಲ್ಲಿನ ಪೊಲೀಸರು ತಿಳಿಸಿದ್ದಾರೆ. ಶ್ವೇತಭವನದ ಉತ್ತರಕ್ಕೆ 1 ಮೈಲಿ ದೂರದಲ್ಲಿರುವ ಲೋಗನ್ ಸರ್ಕಲ್‌ನಲ್ಲಿ ಗುಂಡಿನ ದಾಳಿಗಳು ವರದಿಯಾಗಿವೆ. ಚಿತ್ರೀಕರಣದ ನಿಖರವಾದ ಸ್ಥಳ ಸೇರಿದಂತೆ ಯಾವುದೇ ಇತರ ವಿವರಗಳು ತಕ್ಷಣವೇ ಲಭ್ಯವಿಲ್ಲ ಎಂದು ಪೊಲೀಸ್ ಅಧಿಕಾರಿ ನಾಥನ್ ಕ್ಲಾರ್ಕ್ ಹೇಳಿದ್ದಾರೆ.

ವಿಐಡಿಎ ಫಿಟ್‌ನೆಸ್ ಸೆಂಟರ್, ಸೇಂಟ್ ಲ್ಯೂಕ್ಸ್ ಎಪಿಸ್ಕೋಪಲ್ ಚರ್ಚ್ ಮತ್ತು ನಿವಾಸಗಳನ್ನು ಒಳಗೊಂಡಿರುವ ಮತ್ತು ಹೋಲ್ ಫುಡ್ಸ್ ಸೂಪರ್‌ಮಾರ್ಕೆಟ್‌ನಿಂದ ಮೂಲೆಯ ಸುತ್ತಲೂ ಇರುವ 15ನೇ ಬೀದಿಯ 1500 ಬ್ಲಾಕ್‌ನ ಪ್ರದೇಶವನ್ನು ತಪ್ಪಿಸಲು ಪೊಲೀಸರು ಜನರನ್ನು ಒತ್ತಾಯಿಸಿದರು. ಬ್ಲಾಕ್‌ನ ಬಹುಭಾ ಗವನ್ನು ಸುತ್ತುವರಿಯಲಾಯಿತು. ಘಟನೆ ನಡೆದ ಸ್ಥಳದ ಸಮೀಪದ ಶಾಲೆಗಳಿಗೆ ಬೀಗ ಹಾಕಲಾಗಿದೆ.

ಘಟನಾ ಸ್ಥಳಕ್ಕೆ ಭಾರಿ ಪೊಲೀಸ್ ಪ್ರತಿಕ್ರಿಯೆಯ ಸಮಯದಲ್ಲಿ ಪ್ರದೇಶದ ಸುತ್ತಲಿನ ಬೀದಿಗಳನ್ನು ಸಹ ನಿರ್ಬಂಧಿಸಲಾಗಿದೆ. ಫೆಡರಲ್ ಬ್ಯೂರೋ ಆಫ್ ಆಲ್ಕೋಹಾಲ್, ತಂಬಾಕು, ಬಂದೂಕುಗಳು ಮತ್ತು ಸಹಾಯ ಮಾಡಲು ಏಜೆಂಟ್‌ಗಳನ್ನು ಘಟನಾ ಸ್ಥಳಕ್ಕೆ ಕಳುಹಿಸಿದೆ ಎಂದು ಹೇಳಿದರು.

2025ರ ಆಗಸ್ಟ್ ಆರಂಭದಲ್ಲಿ, ಭಾನುವಾರದ ಮುಂಜಾನೆ ಲೋಗನ್ ಸರ್ಕಲ್ ಪ್ರದೇಶದಲ್ಲಿ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 'ಸರ್ಕಾರಿ ದಕ್ಷತಾ ಇಲಾಖೆ'ಯ ಮಾಜಿ ಸದಸ್ಯರೊಬ್ಬರ ಮೇಲೆ ಹದಿಹರೆಯದವರ ಗುಂಪೊಂದು ಹಲ್ಲೆ ನಡೆಸಿತ್ತು. ಈ ಗುಂಪು ಆ ವ್ಯಕ್ತಿ ಮತ್ತು ಅವರೊಂದಿಗೆ ಇದ್ದ ಮಹಿಳೆಯೊಬ್ಬರಿಂದ ಕಾರನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದಿನಗಳ ನಂತರ, ಟ್ರಂಪ್ ಸ್ಥಳೀಯ ಅಧಿಕಾರವನ್ನು ಬೈಪಾಸ್ ಮಾಡುವ ಬೆದರಿಕೆಯನ್ನು ಪೂರೈಸಿದರು ಮತ್ತು ನಗರದ ಮೇಲೆ ನೇರ ಫೆಡರಲ್ ನಿಯಂತ್ರಣವನ್ನು ವಿಧಿಸಿದರು, ಅಪರಾಧವನ್ನು ಕಡಿಮೆ ಮಾಡಲು ನೂರಾರು ರಾಷ್ಟ್ರೀಯ ಗಾರ್ಡ್ ಸದಸ್ಯರನ್ನು ಕಳುಹಿಸಿದರು. ಆ ನಿಯೋಜನೆ ಇಂದಿಗೂ ಮುಂದುವರಿದಿದೆ.

ಪೆಟ್ರೋಲ್‌ನಲ್ಲಿ ಎಥೆನಾಲ್ ಬೆರೆಸಿ ಕೇಂದ್ರ ಸರ್ಕಾರ ಕಳ್ಳತನ ಮಾಡ್ತಿದೆ: ಡಾ.ಆನಂದಕುಮಾರ್

ಬೆಂಗಳೂರು, ನ. 12: ಬಿಜೆಪಿ ನೇತೃತ್ವದ ಕೇಂದ್ರ ಎನ್‌ಡಿಎ ಸರ್ಕಾರ, ಪೆಟ್ರೋಲ್‌ನಲ್ಲಿ ಅಧಿಕ ಪ್ರಮಾಣದ ಎಥೆನಾಲ್ ಬೆರೆಸುವ ಮೂಲಕ ಗ್ರಾಹಕರಿಗೆ ವಂಚನೆ ಮಾಡುವ ಮೂಲಕ ದೇಶದಾದ್ಯಂತ ಪೆಟ್ರೋಲ್ ಕಳ್ಳತನ ಮಾಡುತ್ತಿದೆ ಎಂದು ಎಐಸಿಸಿ ಎಸ್‌ಸಿ ಘಟಕದ ರಾಷ್ಟ್ರೀಯ ಸಂಯೋಜಕ ಹಾಗೂ ಮಹಾರಾಷ್ಟ್ರ ಉಸ್ತುವಾರಿ ಡಾ.ಆನಂದಕುಮಾರ್ ಅವರು ಆರೋಪಿಸಿದ್ದಾರೆ.

ಕೇಂದ್ರ ಸರ್ಕಾರ ಪೆಟ್ರೋಲ್‌ನಲ್ಲಿ ಹೆಚ್ಚುವರಿ ಎಥೆನಾಲ್ ಬೆರೆಸುತ್ತಿರುವ ಬಗ್ಗೆ ಕರ್ನಾಟಕ ಸರ್ಕಾರ ದಾಖಲೆಗಳ ಸಮೇತ ಸಾಬೀತುಪಡಿಸಿದ್ದು, ಗ್ರಾಹಕರ ಕಣ್ಣಿಗೆ ಮಣ್ಣೆರಚಿ ಶೇ.31.2 ರಷ್ಟು ಎಥೆನಾಲ್ ಬೆರೆಸಿರುವುದು ಕಂಡು ಬಂದಿದೆ. ಇಷ್ಟೊಂದು ಪ್ರಮಾಣದಲ್ಲಿ ಎಥೆನಾಲ್ ಬೆರೆಸುವ ಮೂಲಕ ಗ್ರಾಹಕರಿಗೆ ಹೊರೆ ಮಾಡುತ್ತಿದೆ. ತೈಲ ಕಂಪನಿಗಳಿಗೆ ಈ ಪ್ರಮಾಣದ ಎಥೆನಾಲ್ ಬೆರೆಸಲು ಅನುಮತಿ ನೀಡಿರುವುದು ಸಾರ್ವಜನಿಕ ಹಿತಾಸಕ್ತಿಗೆ ವಿರೋಧವಾಗಿದೆ ಎಂದು ತಿಳಿಸಿದ್ದಾರೆ.



ಪೆಟ್ರೋಲ್‌ನಲ್ಲಿ ಅಧಿಕ ಎಥೆನಾಲ್ ಬೆರೆಸುವುದರಿಂದ ವಾಹನಗಳು ಹಾಳಾಗುತ್ತಿವೆ. ಕೇಂದ್ರ ಸರ್ಕಾರವೇ ಇದಕ್ಕೆ ಹೊಣೆಯಾಗಿದ್ದು, ಪೆಟ್ರೋಲ್‌ನಲ್ಲಿ ಎಥೆನಾಲ್ ಬೆರಕೆ ಬಗ್ಗೆ ಯಾವುದೇ ವೈಜ್ಞಾನಿಕ ಕಾರಣಗಳಿಲ್ಲದೇ ವ್ಯವಹಾರ ನಡೆಸುತ್ತಿರುವು ದರಿಂದ ವಾಹನಗಳ ಮೈಲೇಜ್ ಕಡಿಮೆ ಯಾಗುತ್ತಿದೆ ಮತ್ತು ನಿರ್ವಹಣಾ ವೆಚ್ಚವೂ ಹೆಚ್ಚಾಗುತ್ತಿದೆ ಎಂದು ಆರೋಪಿಸಿದರು.

ಪ್ರತಿಯೊಂದು ಪೆಟ್ರೋಲ್ ಬಂಕ್‌ಗಳಿಂದ ಪೆಟ್ರೋಲ್ ಪಡೆದು ಪರೀಕ್ಷೆ ನಡೆಸಲಾಗಿದ್ದು, ಅಧಿಕ ಎಥೆನಾಲ್ ಬೆರಕೆ ಅಪರಾಧವಾಗಿದೆ. ಸಾರ್ವಜನಿಕರ ಲೂಟಿಯಾಗಿದೆ. ಕಾನೂನು ವಿರುದ್ಧ ನಡೆಸುತ್ತಿರುವ ಈ ಕೃತ್ಯಕ್ಕೆ ತೈಲ ಕಂಪನಿಗಳ ವಿರುದ್ಧ ಅಪರಾಧ ಪ್ರಕರಣ ದಾಖಲಿಸಿ ಸಂಬಂಧಿಸಿದವರು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದ್ದಾರೆ.


ಸಂದರ್ಶನದ ಮೂಲಕ 112 ಕೆಪಿಸಿಸಿ ಕಾರ್ಯದರ್ಶಿಗಳ ನೇಮಕ: ಬಿ.ಕೆ.ಹರಿಪ್ರಸಾದ್

ಬೆಂಗಳೂರು, ನ.12: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಸಂಘಟನೆಯನ್ನು ಪುನರ್‌ರಚಿಸಿ, ಬಲಪಡಿಸಲು ಹೊಸ ರೀತಿಯ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗಿದೆ. ಸಂದರ್ಶನ ಪ್ರಕ್ರಿಯೆಯ ಮೂಲಕ ಒಟ್ಟು 112 ಕೆಪಿಸಿಸಿ ಕಾರ್ಯದರ್ಶಿಗಳನ್ನು ಆಯ್ಕೆ ಮಾಡಲಾಗಿದೆ. ಆಯ್ಕೆಯಾದ 112 ಕಾರ್ಯದರ್ಶಿಗಳಿಗೆ ತಲಾ ಎರಡು ವಿಧಾನಸಭಾ ಕ್ಷೇತ್ರಗಳ ಉಸ್ತುವಾರಿ ನೀಡಲಾಗುತ್ತದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ ಕೆ ಹರಿಪ್ರಸಾದ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿ ಕೆ ಹರಿಪ್ರಸಾದ್ ಅವರು, ಈ ಕಾರ್ಯದರ್ಶಿಗಳು ತಮಗೆ ವಹಿಸಿರುವ ಕ್ಷೇತ್ರಗಳಲ್ಲಿ ಒಂದೂವರೆ ವರ್ಷಗಳ ಕಾಲ ಪೂರ್ಣ ಪ್ರಮಾಣದಲ್ಲಿ ಸಂಘಟನಾ ಕೆಲಸ ಮಾಡಬೇಕು. 112 ಕಾರ್ಯದರ್ಶಿಗಳ ಜೊತೆಗೆ 112 ಕೋಆರ್ಡಿನೇಟರ್‌ಗಳನ್ನೂ ನೇಮಕ ಮಾಡಲಾಗುತ್ತದೆ. ಜಿಲ್ಲಾ ಮಟ್ಟದಲ್ಲಿಯೂ ವಿವಿಧ ಮುಖಂಡರನ್ನು ನೇಮಕ ಮಾಡುವ ಉದ್ದೇಶದಿಂದ ಸಂದರ್ಶನ ಪ್ರಕ್ರಿಯೆ ಮುಂದುವರಿಸಲಾಗಿದೆ ಎಂದು ತಿಳಿಸಿದರು.

ಎಲ್ಲಾ ಅರ್ಜಿದಾರರನ್ನು ಸಂದರ್ಶನ ಮಾಡುವ ಜವಾಬ್ದಾರಿಯನ್ನು ಹಿರಿಯ ನಾಯಕರ ನೇತೃತ್ವದ ಸಮಿತಿಗೆ ವಹಿಸಲಾಗಿತ್ತು. ಈ ಸಂದರ್ಶನ ಸಮಿತಿಯಲ್ಲಿ ಡಾ. ಜಿ. ಪರಮೇಶ್ವರ್, ದಿನೇಶ್ ಗುಂಡೂರಾವ್, ಬಿ.ಎಲ್. ಶಂಕರ್, ಎಚ್.ಕೆ. ಪಾಟೀಲ್, ತುಕಾರಾಂ, ಲೋಕಸಭಾ ಸದಸ್ಯರು, ನಜೀರ್ ಅಹಮದ್ ಹಾಗೂ ರಾಣಿ ಸತೀಶ್ ಸೇರಿದಂತೆ ಹಿರಿಯ ನಾಯಕರು ಇದ್ದರು

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮಾದರಿಯಲ್ಲೇ ಕರ್ನಾಟಕದಲ್ಲಿಯೂ ಕೆಪಿಸಿಸಿ ಕಾರ್ಯದರ್ಶಿಗಳ ನೇಮಕಾತಿಗೆ ಪಾರದರ್ಶಕ ವಿಧಾನ ಅನುಸರಿಸಲಾಗಿದೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ದೇಶಾದ್ಯಂತ ಸುಮಾರು 800 ಮಂದಿಯನ್ನು ಆಹ್ವಾನಿಸಿ, ಕಾರ್ಯದರ್ಶಿ ಹುದ್ದೆಗಳಿಗೆ ಸಂದರ್ಶನ ನಡೆಸಿ ಈಗಾಗಲೇ ಪಟ್ಟಿ ಸಿದ್ಧಪಡಿಸಲಾಗಿದೆ. ಇದೇ ಮಾದರಿಯಲ್ಲಿ ಕೆಪಿಸಿಸಿ ಕಾರ್ಯದರ್ಶಿಗಳ ನೇಮಕಾತಿಗೆ ಬಹಿರಂಗವಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.



ರಾಜ್ಯದಾದ್ಯಂತ ಒಟ್ಟು 920 ಅರ್ಜಿಗಳು ಸಲ್ಲಿಕೆಯಾಗಿವೆ. ಈ ಪೈಕಿ ಬೆಂಗಳೂರಿನಿಂದಲೇ 308 ಅರ್ಜಿಗಳು ಸಲ್ಲಿಕೆಯಾಗಿರುವುದು ವಿಶೇಷ? ಎಂದರು.

ಇಂತಹ ಬಹಿರಂಗ ಸಂದರ್ಶನ ಮತ್ತು ಅರ್ಜಿ ಆಹ್ವಾನ ಪ್ರಕ್ರಿಯೆಯನ್ನು ಕಾಂಗ್ರೆಸ್ ಪಕ್ಷದಲ್ಲಿ ಮೊದಲ ಬಾರಿಗೆ ಅನುಸರಿಸಲಾಗುತ್ತಿದೆ. ಯಾವುದೇ ಗುಂಪುಗಾರಿಕೆ, ವ್ಯಕ್ತಿಗತ ಇಷ್ಟಾನಿಷ್ಟಗಳು ಅಥವಾ ಲೈಕ್ಸ್ ಅಂಡ್ ಡಿಸ್‌ಲೈಕ್‌ಗಳಿಗೆ ಅವಕಾಶ ನೀಡದೆ, ನಿಜವಾಗಿ ಕೆಲಸ ಮಾಡುವ ಸಾಮರ್ಥ್ಯ ಇರುವವರನ್ನು ಆಯ್ಕೆ ಮಾಡುವುದು ಈ ಪ್ರಕ್ರಿಯೆಯ ಉದ್ದೇಶವಾಗಿದೆ. ಈ ಹೊಸ ನೇಮಕಾತಿ ವಿಧಾನದಿಂದ ಪಕ್ಷದ ಸಂಘಟನೆ ಬಲಗೊಳ್ಳಲಿದೆ ಎಂಬ ವಿಶ್ವಾಸವಿದೆ ಎಂದರು.

ಇದು ಬಿಕೆ ಹರಿಪ್ರಸಾದ್ ಅವರ ಹೊಸ ಆಲೋಚನೆಯೇ ಇದು ಎಂದು ಕೇಳಿದಾಗ, ಕೆಲಸ ಮಾಡುವವರೆಲ್ಲರೂ ಒಂದಾಗಿ ಕೆಲಸ ಮಾಡಬೇಕು. ಓಬಿಸಿ ಪರಿಶಿಷ್ಟಜಾತಿ, ಪಂಗಡಗಳು ಶೇ 33 ರಷ್ಟು ಮಹಿಳೆಯರಿಗೂ ಮೀಸಲಾತಿ ಇರುತ್ತದೆ ಎಂದರು.

ನಿಗಮ ಮಂಡಳಿ ಸದಸ್ಯರ ನೇಮಕಾತಿ ಬಗ್ಗೆ ಕೇಳಿದಾಗ, ಎರಡನೇ ಪಟ್ಟಿ ಬಂದ ಬಳಿಕ ಇದು ಸಂಪೂರ್ಣವಾಗಲಿದೆ. ಈಗ ಮೊದಲನೇ ಪಟ್ಟಿ ಬಿಡುಗಡೆ ಮಾಡಲಾಗಿದೆ ಎಂದರು.

ಮಾಧ್ಯಮಗೋಷ್ಠಿಯಲ್ಲಿ ಕೆಪಿಸಿಸಿ ಉಪಾಧ್ಯಕ್ಷ ನಾರಾಯಣಸ್ವಾಮಿ, ಮಾಜಿ ಸಚಿವೆ ರಾಣಿ ಸತೀಶ್, ಮಾಜಿ ಪರಿಷತ್ ಸದಸ್ಯ ಹಾಗೂ ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷ ರಮೇಶ್‌ಬಾಬು, ಮಾಜಿ ಮೇಯರ್ ರಾಮಚಂದ್ರಪ್ಪ ಇದ್ದರು.

Managing Editor : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

ನವಂಬರ್ 13, 2026, ಶುಕ್ರವಾರ


ಒಳಪುಟಗಳಲ್ಲಿ

ಪಶ್ಚಿಮಘಟ್ಟದ ಹೊಸ ವಿದ್ಯುದ್ದೀಕೃತ ರೈಲು ಮಾರ್ಗಕ್ಕೆ ಶಕ್ತಿ ತುಂಬಿದ ಕೆಪಿಟಿಸಿಎಲ್ - ಪು.4

ವಿಶ್ವ ಕನ್ನಡ ಸಮ್ಮೇಳನ: ಶವಪೆಟ್ಟಿಗೆಯ ಮೇಲೆ ಹೂವು ಸುರಿದಂತೆ- ಟಿ.ಎ.ನಾರಾಯಣಗೌಡ - ಪು.5

ನ. 15 ರಂದು ರಾಜ್ಯಪಾಲೆ ಡಾ.ಸುಧಾ ಯಾದವ್ ಬಳ್ಳಾರಿ ಜಿಲ್ಲಾ ಪ್ರವಾಸ - ಪು.6

ಇಂದು ಕರ್ನಾಟಕಕ್ಕೆ ಪ್ರಧಾನಿ: 15,600 ಕೋಟಿ ರೂ. ಅಭಿವೃದ್ಧಿ ಯೋಜನೆಗಳಿಗೆ ಚಾಲನೆ



ಬೆಂಗಳೂರು, ನ.12: ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಕರ್ನಾಟಕಕ್ಕೆ ಭೇಟಿ ನೀಡಲಿದ್ದು, ರಾಜ್ಯದಲ್ಲಿ 15,600 ಕೋಟಿ ರೂ.ಗೂ ಅಧಿಕ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ. ನಗರ ಸಾರಿಗೆ, ರೈಲ್ವೆ, ವಿದ್ಯುತ್ ಪ್ರಸರಣ, ನವೀಕರಿಸಬಹುದಾದ ಇಂಧನ, ಪೆಟ್ರೋಲಿಯಂ, ತ್ಯಾಜ್ಯ ನಿರ್ವಹಣೆ ಸೇರಿದಂತೆ ಹಲವು ಕ್ಷೇತ್ರಗಳ ಪ್ರಮುಖ ಯೋಜನೆಗಳುಸೇರಿವೆ.

ಪ್ರಧಾನಿ ಮೋದಿ ಅವರು ಬೆಳಗ್ಗೆ 10.45ರ ಸುಮಾರಿಗೆ ಬೆಂಗಳೂರಿನ ಪ್ರಶಾಂತಿ ಕುಟೀರಂನಲ್ಲಿ ನಡೆಯಲಿರುವ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥೆಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಲಿದ್ದಾರೆ. ಬಳಿಕ ಮಧ್ಯಾಹ್ನ 12.45ರ ಸುಮಾರಿಗೆ ತಾವರೆಕೆರೆಯಿಂದ ಐಐಎಂ ಬೆಂಗಳೂರು ಮೆಟ್ರೋ ನಿಲ್ದಾಣದವರೆಗೆ ಮೆಟ್ರೋ ಸಂಚಾರಕ್ಕೆ ಚಾಲನೆ ನೀಡಲಿದ್ದು, ಸ್ವತಃ ಮೆಟ್ರೋದಲ್ಲಿ ಪ್ರಯಾಣಿಸಲಿದ್ದಾರೆ. ಮಧ್ಯಾಹ್ನ 1.15ರ ಸುಮಾರಿಗೆ 15,600 ಕೋಟಿ ರೂ.ಗೂ ಅಧಿಕ ಮೊತ್ತದ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ ಹಾಗೂ ರಾಷ್ಟ್ರಕ್ಕೆ ಸಮರ್ಪಣೆ ಕಾರ್ಯಕ್ರಮ ನಡೆಯಲಿದೆ. ಈ ಪೈಕಿ 3,470 ಕೋಟಿ ವೆಚ್ಚದ ಬೆಂಗಳೂರು ಮೆಟ್ರೋ ಪಿಂಕ್ ಲೈನ್‌ನ ಕಾಳೇನ ಅಗ್ರಹಾರ ತಾವರೆಕೆರೆ ಮಾರ್ಗ ಪ್ರಮುಖ ಯೋಜನೆಯಾಗಿದೆ.

ನವೀಕರಿಸಬಹುದಾದ ಇಂಧನಕ್ಕೆ ಬಲ: ಪ್ರಧಾನಿ ಮೋದಿ ಅವರು ಕೊಪ್ಪಳ–2 ಮತ್ತು ಗದಗ–2 ನವೀಕರಿಸಬಹುದಾದ ಇಂಧನ ವಲಯಗಳ ಪ್ರಸರಣ ಯೋಜನೆಯ ಹಂತ–2 ಅನ್ನು 4,450 ಕೋಟಿ ರೂ. ವೆಚ್ಚದಲ್ಲಿ ಪ್ರಧಾನಿ ಉದ್ಘಾಟಿಸಲಿದ್ದಾರೆ. ಈ ಯೋಜನೆಯಿಂದ 2 ಗೀಗಾವ್ಯಾಟ್ ನವೀಕರಿಸಬಹುದಾದ ಇಂಧನವನ್ನು ವಿದ್ಯುತ್ ಗ್ರಿಡ್‌ಗೆ ಸಾಗಿಸಲು ಸಾಧ್ಯವಾಗಲಿದೆ.

ಅದೇ ರೀತಿ 1,370 ಕೋಟಿ ವೆಚ್ಚದ ಬೀದರ್ ಸೌರಶಕ್ತಿ ವಲಯದ ಪ್ರಸರಣ ಯೋಜನೆಯಿಂದ 2.5 ಗೀಗಾವ್ಯಾಟ್ ಸೌರಶಕ್ತಿ ಸಾಗಣೆಗೆ ಅನುಕೂಲವಾಗಲಿದೆ.

ದಾವಣಗೆರೆ–ಚಿತ್ರದುರ್ಗ ಮತ್ತು ಬಳ್ಳಾರಿ ನವೀಕರಿಸಬಹುದಾದ ಇಂಧನ ವಲಯಗಳನ್ನು ಸಂಪರ್ಕಿಸುವ 3,450 ಕೋಟಿ ರೂ.ಗೂ ಅಧಿಕ ಮೊತ್ತದ ಪ್ರಸರಣ ಯೋಜನೆಗೂ ಶಂಕುಸ್ಥಾಪನೆ ನಡೆಯಲಿದೆ. ದಾವಣಗೆರೆ ಮತ್ತು ಬಳ್ಳಾರಿಯಲ್ಲಿ ಹೆಚ್ಚುವರಿಯಾಗಿ ಉತ್ಪಾದನೆಯಾಗುವ ನವೀಕರಿಸಬಹುದಾದ ಇಂಧನ ಸಾಮರ್ಥ್ಯವನ್ನು ಗ್ರಿಡ್‌ಗೆ ಸಂಯೋಜಿಸಲು 1,100 ಕೋಟಿ ರೂ.ಗೂ ಅಧಿಕ ವೆಚ್ಚದ ಪ್ರಸರಣ ವ್ಯವಸ್ಥೆ ಬಲವರ್ಧನೆ ಯೋಜನೆಗೂ ಚಾಲನೆ ದೊರೆಯಲಿದೆ.

ತ್ಯಾಜ್ಯದಿಂದ ಇಂಧನ ಉತ್ಪಾದನೆಗೆ ಹೆಜ್ಜೆ: ಬೆಂಗಳೂರಿನ ಹರಳಕುಂಟೆಯಲ್ಲಿ ಗೇಲ್ ಸ್ಥಾಪಿಸಲಿರುವ ಕಂಪ್ರೆಸ್ಡ್ ಬಯೋಗ್ಯಾಸ್ ಘಟಕಕ್ಕೂ ಶಂಕುಸ್ಥಾಪನೆ ನಡೆಯಲಿದೆ. ಪ್ರತಿದಿನ ಸುಮಾರು 300 ಟನ್ ಪುರಸಭೆಯ ಘನತ್ಯಾಜ್ಯವನ್ನು ಸಂಸ್ಕರಿಸಿ ಸುಮಾರು 12.6 ಟನ್ ಕಂಪ್ರೆಸ್ಡ್ ಬಯೋಗ್ಯಾಸ್ ಉತ್ಪಾದಿಸುವ ಗುರಿಯನ್ನು ಈ ಘಟಕ ಹೊಂದಿದೆ.

ಮೈಸೂರಿನಲ್ಲೂ ಪ್ರಧಾನಿ ಕಾರ್ಯಕ್ರಮ: ಕರ್ನಾಟಕ ಪ್ರವಾಸದ ಅಂತಿಮ ಹಂತದಲ್ಲಿ ಪ್ರಧಾನಿ ಮೋದಿ ಅವರು ಮೈಸೂರಿಗೆ ತೆರಳಲಿದ್ದು, ಮಧ್ಯಾಹ್ನ ಸುಮಾರು 3.30ಕ್ಕೆ 'ಏಕ್ ಪೇಡ್ ಮಾಕೆ ನಾಮ್' ಅಭಿಯಾನದ ಭಾಗವಾಗಿ ಭಾರತ ಒನ್‌ನಲ್ಲಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.ಮಿಯಾವಾಕಿ ತಂತ್ರಜ್ಞಾನವನ್ನು ಬಳಸಿಕೊಂಡು ಸ್ಥಳೀಯ ಸಸ್ಯ ಪ್ರಭೇದಗಳಿಂದ ದಟ್ಟವಾದ ನಗರ ಅರಣ್ಯ ಬೆಳೆಸುವುದು 'ಭಾರತ ವನ್'ನ ಉದ್ದೇಶವಾಗಿದೆ.

ನಾಲ್ಕು ರೈಲು ನಿಲ್ದಾಣಗಳಿಗೆ ಹೊಸ ರೂಪ

ಅಮೃತ್ ಭಾರತ್ ನಿಲ್ದಾಣ ಯೋಜನೆ ಅಡಿಯಲ್ಲಿ ಮರು ಅಭಿವೃದ್ಧಿಪಡಿಸಿರುವ ಚಾಮರಾಜನಗರ, ಚಿಕ್ಕಮಗಳೂರು, ಸಕಲೇಶಪುರ ಮತ್ತು ಸುಬ್ರಹ್ಮಣ್ಯ ರಸ್ತೆ ರೈಲು ನಿಲ್ದಾಣಗಳನ್ನು ಪ್ರಧಾನಿ ಉದ್ಘಾಟಿಸಲಿದ್ದಾರೆ.

ಮಂಗಳೂರಿನಲ್ಲಿ ಎಲ್‌ಪಿಜಿ ಸಂಗ್ರಹಣಾ ಘಟಕ ಸಮರ್ಪಣೆ

ಮಂಗಳೂರಿನಲ್ಲಿ 850 ಕೋಟಿ ರೂ.ಗೂ ಅಧಿಕ ವೆಚ್ಚದಲ್ಲಿ ನಿರ್ಮಿಸಲಾಗಿರುವ 80,000 ಮೆಟ್ರಿಕ್ ಟನ್ ಸಾಮರ್ಥ್ಯದ ಭೂಗತ ಎಲ್‌ಪಿಜಿ ಸಂಗ್ರಹಣಾ ಘಟಕವನ್ನು ಪ್ರಧಾನಿ ಮೋದಿ ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಇದು ದೇಶದ ಅತಿದೊಡ್ಡ ಭೂಗತ ಎಲ್‌ಪಿಜಿ ಸಂಗ್ರಹಣಾ ಘಟಕ ಎಂದು ಹೇಳಲಾಗಿದೆ. ಹೊಸ ಮಂಗಳೂರು ಬಂದರನ್ನು ಮುಖ್ಯ ಟರ್ಮಿನಲ್‌ಗೆ ಸಂಪರ್ಕಿಸುವ 9.4 ಕಿ.ಮೀ ಉದ್ದದ ಎಲ್‌ಪಿಜಿ ಪೈಪ್‌ಲೈನ್ ಕೂಡ ಯೋಜನೆಯ ಭಾಗವಾಗಿದೆ. ಇದರೊಂದಿಗೆ ಬೆಂಗಳೂರಿನಲ್ಲಿ 330 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವ ಎಂಆರ್‌ಪಿಎಲ್‌ನ ದೇವನಗೊಂದಿ ಮಾರ್ಕೆಟಿಂಗ್ ಟರ್ಮಿನಲ್‌ನ್ನೂ ರಾಷ್ಟ್ರಕ್ಕೆ ಸಮರ್ಪಿಸಲಾಗುತ್ತದೆ.

ಇಂದು ಗುಲಾಬಿ ಮಾರ್ಗ ಮೆಟ್ರೋ ರೈಲು ಸಂಚಾರಕ್ಕೆ ಮೋದಿ ಚಾಲನೆ

ಬೆಂಗಳೂರು, ನ.12: ಪ್ರಧಾನಮಂತ್ರಿ ಮೋದಿ ಶುಕ್ರವಾರ ತಮ್ಮ ಬೆಂಗಳೂರು ಭೇಟಿ ವೇಳೆ ನಮ್ಮ ಮೆಟ್ರೋದ ಗುಲಾಬಿ ಮಾರ್ಗದ ರೈಲುಸಂಚಾರಕ್ಕೆ ಚಾಲನೆ ನೀಡಲಿದ್ದಾರೆ. ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ 7.5 ಕಿ.ಮೀ. ಮಾರ್ಗದ ಮೆಟ್ರೋ ರೈಲಿನಲ್ಲಿ ಪ್ರಧಾನಿ ಸಂಚರಿಸಲಿದ್ದಾರೆ.

ಪ್ರಧಾನಿ ಜತೆ ರಾಜ್ಯದ ವಿಚಾರ ಪ್ರಸ್ತಾಪ



ಪ್ರಧಾನಮಂತ್ರಿಯವರು ರಾಜ್ಯಕ್ಕೆ ಆಗಮಿಸುತ್ತಿದ್ದು, ಅವರನ್ನು ಗೌರವಯುತವಾಗಿ ಸ್ವಾಗತಿಸಿ, ರಾಜ್ಯದ ವಿಚಾರವನ್ನು ಪ್ರಸ್ತಾಪಿಸುತ್ತೇನೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಕಾಸಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿ, ಕರ್ನಾಟಕ ದಿಂದ ದೇಶಕ್ಕೆ ಗೌರವ ಬರುವ ವಿಚಾರ ಇದೆ. ಹೀಗಾಗಿ ಅವರು ನಮಗೆ, ನಾವು ಅವರಿಗೆ ಸಹಕಾರ ನೀಡಬೇಕು ಎಂದರು.

ಬೆಂಗಳೂರಿನ ಮೆಟ್ರೊ ಪಿಂಕ್ ಲೈನ್ ಉದ್ಘಾಟನೆ ಕರ್ನಾಟಕದ ಹೆಮ್ಮೆ. ಇದರ ಉದ್ಘಾಟನೆಗೆ ಪ್ರಧಾನಿ ಆಗಮಿಸುತ್ತಿದ್ದಾರೆ. ಹಲವು ವಿಚಾರಗಳು ಇನ್ನೂ ಬಾಕಿ ಇವೆ. ಅಭಿವೃದ್ಧಿಯ ದೃಷ್ಟಿಯಿಂದ ಸಾಕಷ್ಟು ಕೆಲಸಗಳು ಆಗಬೇಕಿವೆ ಎಂದರು.

49ನೇ ಆಸಿಯಾನ್ ಶೃಂಗಸಭೆ: ನ.16ರಿಂದ ಪ್ರಧಾನಿ ಮನಿಲಾ ಪ್ರವಾಸ

ನವದೆಹಲಿ, ನ.12: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನವೆಂಬರ್ 16 ರಿಂದ 18 ರವರೆಗೆ ಮನಿಲಾಗೆ ಭೇಟಿ ನೀಡಲಿದ್ದಾರೆ. ಈ ವೇಳೆ ಅವರು 23ನೇ ಆಸಿಯಾನ್–ಭಾರತ ಶೃಂಗಸಭೆ ಮತ್ತು 21ನೇ ಪೂರ್ವ ಏಷ್ಯಾ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಬದಲಾಗುತ್ತಿರುವ ಪ್ರಾದೇಶಿಕ ಮತ್ತು ಜಾಗತಿಕ ಭೌಗೋಳಿಕ–ರಾಜಕೀಯ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಆಗ್ನೇಯ ಏಷ್ಯಾದೊಂದಿಗೆ ತನ್ನ ಕಾರ್ಯತಂತ್ರದ ಮತ್ತು ಆರ್ಥಿಕ ಬಾಂಧವ್ಯವನ್ನು ಬಲಪಡಿಸಲು ಭಾರತವು ಈ ಭೇಟಿಯನ್ನು ಬಳಸಿಕೊಳ್ಳಲಿದೆ. ಇಂಡೋನೇಷ್ಯಾ, ಮಲೇಷ್ಯಾ, ಫಿಲಿಪೈನ್ಸ್, ಸಿಂಗಾಪುರ, ಥೈಲ್ಯಾಂಡ್, ಬ್ರುನೈ, ವಿಯೆಟ್ನಾಂ, ಲಾವೋಸ್, ಮ್ಯಾನ್ಮಾರ್, ಕಾಂಬೋಡಿಯಾ ಮತ್ತು ಟಿಮೋರ್–ಲೆಸ್ಟೆ ದೇಶಗಳನ್ನು ಒಳಗೊಂಡಿರುವ ಈ 11 ಸದಸ್ಯ ರಾಷ್ಟ್ರಗಳ ಗುಂಪಿಗೆ ಭಾರತವು ಕಾರ್ಯತಂತ್ರದ ಪಾಲುದಾರನಾಗಿದೆ. ಈ ಭೇಟಿಯ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು ವಿಶ್ವದ ಹಲವು ನಾಯಕರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ (ಪೂರ್ವ) ರುದ್ರೇಂದ್ರ ಟಂಡನ್ ಗುರುವಾರ ತಿಳಿಸಿದ್ದಾರೆ.

ಹೈಕೋರ್ಟ್ ಆದೇಶ ಆಧರಿಸಿ ನಕಲಿ 129 ಬೆಟ್ಟಿಂಗ್ ವೆಬ್‌ಸೈಟ್‌ಗಳಿಗೆ ನಿರ್ಬಂಧ: ತನಿಖೆ ಆರಂಭ

ನವದೆಹಲಿ, ನ.12: ಕೃತಕ ಬುದ್ಧಿಮತ್ತೆ (ಎಐ) ಬಳಸಿ ಸೃಷ್ಟಿಸಲಾದ ನ್ಯಾಯಾಲಯದ ಆದೇಶಗಳ ಆಧಾರದ ಮೇಲೆ ಕೇಂದ್ರ ಸರ್ಕಾರವು ಈ ವರ್ಷ 129 ಅಕ್ರಮ ನಕಲಿ ಬೆಟ್ಟಿಂಗ್ ವೆಬ್‌ಸೈಟ್‌ಗಳನ್ನು ನಿರ್ಬಂಧಿಸಿದೆ ಎಂಬ ಸಂಗತಿ ಬೆಳಕಿಗೆ ಬಂದಿದೆ. ಸುದ್ದಿ ಸಂಸ್ಥೆಯ ವರದಿ ಪ್ರಕಾರ, ರಾಜಸ್ಥಾನ ಮತ್ತು ಅಲಹಾಬಾದ್ ಹೈಕೋರ್ಟ್‌ಗಳ ಹೆಸರಿನಲ್ಲಿ ನೀಡಲಾದ ಆ ಆದೇಶಗಳು ನಕಲಿ ಎಂದು ತಿಳಿದುಬಂದಿದ್ದು, ಈ ಸಂಬಂಧ ಪೊಲೀಸರು ತನಿಖೆ ಆರಂಭಿಸಿದ್ದಾರೆ. ದೂರಸಂಪರ್ಕ ಇಲಾಖೆಯು ಜುಲೈ 21 ಮತ್ತು ಸೆಪ್ಟೆಂಬರ್ 2ರಂದು ವೆಬ್‌ಸೈಟ್ ನಿರ್ಬಂಧಿಸುವ ಕುರಿತು ಎರಡು ನಿರ್ದೇಶನಗಳನ್ನು ಹೊರಡಿಸಿತ್ತು. ಈ ಆದೇಶಗಳೊಂದಿಗೆ ರಾಜಸ್ಥಾನ ಮತ್ತು ಉತ್ತರ ಪ್ರದೇಶದ ಹೈಕೋರ್ಟ್‌ಗಳ ಹೆಸರಿನಲ್ಲಿ ಡಜನ್‌ಗಟ್ಟಲೆ ವೆಬ್‌ಸೈಟ್ ತೆಗೆದುಹಾಕುವಂತೆ ಸೂಚಿಸುವ ನ್ಯಾಯಾಲಯದ ನಕಲಿ ಆದೇಶಗಳ ಪ್ರತಿಯನ್ನು ಇ–ಮೇಲ್ ಮೂಲಕ ಲಗತ್ತಿಸಲಾಗಿತ್ತು. ಆದರೆ ನ್ಯಾಯಾಲಯಗಳ ಆನ್‌ಲೈನ್ ದಾಖಲೆಗಳಲ್ಲಿ ಅಂತಹ ಯಾವುದೇ ಆದೇಶಗಳು ಲಭ್ಯವಿಲ್ಲದಿರುವುದು ತನಿಖೆಯಿಂದ ತಿಳಿದುಬಂದಿದೆ. ರಾಜಸ್ಥಾನ ಹೈಕೋರ್ಟ್ ರಿಜಿಸ್ಟ್ರಾರ್ ತಮ್ಮ ಹೆಸರಿನಲ್ಲಿದ್ದ ಆದೇಶವು ನಕಲಿ ಎಂದು ತಿಳಿದ್ದಾರೆ, ಅಲಹಾಬಾದ್ ಹೈಕೋರ್ಟ್ ನ.6 ರಂದು ಈ ಕುರಿತು ಅಧಿಕೃತವಾಗಿ ಪೊಲೀಸ್ ದೂರು ದಾಖಲಿಸಿದೆ.

ಸೈಬರ್ ಅಪರಾಧ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ಇದು ನಕಲಿ ಆದೇಶ ಎಂದು ದೃಢಪಡಿಸಿದ್ದು, ವಂಚನೆ ಮತ್ತು ನಕಲಿ ದಾಖಲೆ ಸೃಷ್ಟಿಸಿದ ಆರೋಪದಡಿ ಅಜ್ಞಾತ ವ್ಯಕ್ತಿಗಳ ವಿರುದ್ಧ ತನಿಖೆ ಮುಂದುವರಿದಿದೆ.

ಸುಪ್ರೀಂಕೋರ್ಟ್ ಮಾರ್ಗಸೂಚಿ, ಸಂವಿಧಾನದ ಚೌಕಟ್ಟಿನಲ್ಲಿ ಸಮುದಾಯದ ಅಭಿವೃದ್ಧಿಗೆ ದುಡಿಯಿರಿ



ಬೆಂಗಳೂರು, ನ.12: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮಗ್ರ ಅಭಿವೃದ್ಧಿ ಸಂಬಂಧ ಎಸ್‌ಸಿ/ಎಸ್‌ಟಿ ಸಮುದಾಯದ ನಾಯಕರು ಹಾಗೂ ಅಧಿಕಾರಿಗಳು ಸುಪ್ರೀಂ ಕೋರ್ಟ್‌ನ ಮಾರ್ಗಸೂಚಿ ಹಾಗೂ ಸಂವಿಧಾನದ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸಬೇಕು. ಹಾಗೂ ಸಮುದಾಯಗಳಿಗೆ ನೀಡುವ ಅನುದಾನದ ಮೊತ್ತ ತಿಳಿಯಬೇಕು ಹಾಗೂ ಸದ್ಬಳಕೆ ಆಗಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ನಡೆದ ಪರಿಶಿಷ್ಟ ಜಾತಿ, ಪಂಗಡಗಳ ಸಮಗ್ರ ಅಭಿವೃದ್ಧಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇದೊಂದು ಪ್ರಮುಖ ಸಭೆಯಾಗಿದೆ. ಐಕ್ಯತೆಯಲ್ಲಿ ಬಲವಿದೆ. ನೀವು ಒಗ್ಗಟ್ಟಿನಿಂದ ಏನನ್ನಾದರೂ ಸಾಧಿಸಬಹುದು. ಜತೆಗೆ ಸರ್ಕಾರದ ಜನರಪ ಕಾರ್ಯಕ್ರಮಗಳ ಯಶಸ್ಸಿಗೂ ಐಕ್ಯತೆಯೇ ಪ್ರಮುಖ ಕಾರಣ ಎಂದರು.

ಎಸ್‌ಸಿ/ಎಸ್‌ಟಿ ಸಮುದಾಯಗಳಿಗೆ ನೀಡುವ ಅನುದಾನ ಸದ್ಬಳಕೆಯಾಗಬೇಕು: ಸಿಎಂ ಡಿ.ಕೆ. ಶಿವಕುಮಾರ್


ಪರಿಶಿಷ್ಟ ಜಾತಿ, ಪಂಗಡಗಳ ಸಮಗ್ರ ಅಭಿವೃದ್ಧಿ ಸಭೆ

ಎಲ್ಲ ಜಾತಿ ಹಾಗೂ ವರ್ಗಗಳ ಬಲ ಮತ್ತು ನಂಬಿಕೆ ಸರ್ಕಾರದೊಂದಿಗೆ ಇರುವುದು ಮುಖ್ಯ. ಎಸ್‌ಸಿ, ಎಸ್‌ಟಿ, ಒಬಿಸಿ, ಅಲ್ಪಸಂಖ್ಯಾತ ಮತ್ತು ಇತರೆ ಸಮುದಾಯಗಳನ್ನು ಬಲಪಡಿಸಬೇಕಿದೆ. ನಿಮ್ಮ ಸಲಹೆಗಳು, ಸೂಚನೆಗಳು ಮತ್ತು ಮಾರ್ಗದರ್ಶನ ಸ್ವೀಕರಿಸಲು ಮುಕ್ತವಾಗಿದ್ದೇನೆ. ಇದು ನಿಮ್ಮ ಸರ್ಕಾರ ಮತ್ತು ನಿಮ್ಮ ಕಾರ್ಯಕ್ರಮವಾಗಿದ್ದು, ಪರಿಶಿಷ್ಟ ಸಮುದಾಯಗಳ ಕಲ್ಯಾಣಕ್ಕಾಗಿ ಶ್ರಮಿಸುವಂತೆ ಕೋರಿದರು. ನಾನು ಸ್ವಾತಂತ್ರ್ಯವನ್ನು ನಂಬುತ್ತೇನೆ. ನಿಮ್ಮೆಲ್ಲರಿಗೂ ಸಂಪೂರ್ಣ ಸ್ವಾತಂತ್ರ್ಯ ಹಾಗೂ ಸಹಕಾರವಿದೆ. ಉತ್ತಮವಾಗಿ ಕೆಲಸ ಮಾಡಿ ಸರ್ಕಾರ ಹಾಗೂ ಪಕ್ಷಕ್ಕೆ ಒಳ್ಳೆಯ ಹೆಸರು ತನ್ನಿ ಎಂದು ಮುಖ್ಯಮಂತ್ರಿ ತಿಳಿಸಿದರು.

ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳಿಗೆ ನೀಡುವ ಅನುದಾನವು ಗೋಚರಿಸಬೇಕು ಮತ್ತು ಅದರಿಂದ ಉತ್ತಮ ಕೆಲಸಗಳು ಹೊರಬರಬೇಕು ಎಂದ ಶಿವಕುಮಾರ್, ಜೊತೆಗೆ ಎಲ್ಲಾ ಜಾತಿ ಹಾಗೂ ವರ್ಗಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎಂದರು. "ಸಂಸ್ಥೆ ಮೊದಲು. ಪಕ್ಷವೇ ಮೊದಲು" ಎಂದ ಅವರು, ಗ್ಯಾರಂಟಿ ಯೋಜನೆಗಳು ಸೇರಿದಂತೆ ಸರ್ಕಾರದ ಜನಪರ ಕಾರ್ಯಕ್ರಮಗಳು ಸರ್ಕಾರದ ಕೀರ್ತಿಯನ್ನು ಹೆಚ್ಚಿಸಬೇಕು ಎಂದರು. ಭಾಗವಹಿಸುವವರು ಸಕಾರಾತ್ಮಕವಾಗಿ ಯೋಚಿಸಿ, ಸಕಾರಾತ್ಮಕವಾಗಿ ಕೆಲಸ ಮಾಡುವಂತೆ ಅವರು ಕರೆ ನೀಡಿದರು.

ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಕ್ಕೆ ಸಂಸತ್ ವಿಶೇಷ ಅಧಿವೇಶನಕ್ಕೆ ಕೇಂದ್ರ ಸಿದ್ಧತೆ

ನವದೆಹಲಿ, ನ.12: ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸುವ ಉದ್ದೇಶದಿಂದ ಸಂಸತ್ತಿನ ವಿಶೇಷ ಅಧಿವೇಶನ ಕರೆಯಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ. ಸಂವಿಧಾನ ತಿದ್ದುಪಡಿ ಮಸೂದೆಗೆ ಅಗತ್ಯವಿರುವ ಬಹುಮತವನ್ನು ಪಡೆಯುವ ವಿಶ್ವಾಸದಲ್ಲಿರುವ ಸರ್ಕಾರ, ಮಸೂದೆ ಪರವಾಗಿ ಅಗತ್ಯಕ್ಕಿಂತ 15ರಿಂದ 18 ಮತಗಳು ಹೆಚ್ಚುವರಿಯಾಗಿ ದೊರೆಯಲಿವೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.



ಅಗತ್ಯಕ್ಕಿಂತ 15ರಿಂದ 18 ಮತ ಹೆಚ್ಚು ಪಡೆಯುವ ವಿಶ್ವಾಸದಲ್ಲಿ ಸರ್ಕಾರ

ಮಹಿಳಾ ಮೀಸಲಾತಿ ಜಾರಿಗೆ ಸಂಬಂಧಿಸಿದ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಲು ಲೋಕಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತದ ಅಗತ್ಯವಿದೆ. ಪ್ರಸ್ತುತ ಲೋಕಸಭೆಯ 543 ಸ್ಥಾನಗಳ ಪೈಕಿ ಮೂರು ಸ್ಥಾನಗಳು ಖಾಲಿ ಇದ್ದು, ಮಸೂದೆ ಅಂಗೀಕಾರಕ್ಕೆ 361 ಮತಗಳ ಅಗತ್ಯವಿದೆ.

ಪ್ರಸ್ತಾವಿತ ಸಂವಿಧಾನ ತಿದ್ದುಪಡಿಯ ಮೂಲಕ ಲೋಕಸಭೆಯ ಒಟ್ಟು ಸ್ಥಾನಗಳ ಸಂಖ್ಯೆಯನ್ನು ಈಗಿನ 543ರಿಂದ ಗರಿಷ್ಠ 850ಕ್ಕೆ ಹೆಚ್ಚಿಸುವ ಉದ್ದೇಶ ಹೊಂದಲಾಗಿದೆ. ಕ್ಷೇತ್ರ ಮರುವಿಂಗಡಣೆ ಮೂಲಕ ಲೋಕಸಭೆಯ ಸ್ಥಾನಗಳನ್ನು ಹೆಚ್ಚಿಸಿ, ಸಂಸತ್ತು ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿ ಕಲ್ಪಿಸುವುದು ಸರ್ಕಾರದ ಉದ್ದೇಶವಾಗಿದೆ. 2029ರ ಲೋಕಸಭಾ ಚುನಾವಣೆಗೆ ಮುನ್ನ ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತರುವ ಗುರಿಯನ್ನು ಕೇಂದ್ರ ಹೊಂದಿದೆ.

ಈ ಮಧ್ಯೆ, ಆಗಸ್ಟ್ 13ರಂದು ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟಿದ್ದ ಮುಂಗಾರು ಅಧಿವೇಶನಕ್ಕೆ ಸಂಸತ್ತಿನ ಅಧಿಕೃತ ಸತ್ರಾವಸಾನ ಇನ್ನೂ ಘೋಷಣೆಯಾಗಿಲ್ಲ. ಹೀಗಾಗಿ, ಹಾಲಿ ಅಧಿವೇಶನದ ಮುಂದುವರಿದ ಭಾಗವಾಗಿ ವಿಶೇಷ ಕಲಾಪ ನಡೆಸುವ ಸಾಧ್ಯತೆಯೂ ಇದೆ. ಹಾಲಿ ಅಧಿವೇಶನವನ್ನು ಮುಂದುವರಿಸಲು ಕನಿಷ್ಠ 2 ದಿನ ಸಾಕಾಗುತ್ತದೆ. ಹೊಸ ಅಧಿವೇಶನ ಕರೆಯಬೇಕಾದರೆ ಕನಿಷ್ಠ 14 ದಿನಗಳ ಮುನ್ಸೂಚನೆ ನೀಡಬೇಕಾಗುತ್ತದೆ. ಮುಂಗಾರು ಅಧಿವೇಶನವನ್ನು ಅಧಿಕೃತವಾಗಿ ಮುಕ್ತಾಯ ಗೊಳಿಸದೆ ಉಳಿಸಿ ಕೊಂಡಿರುವುದು ವಿಶೇಷ ಅಧಿವೇಶನದ ಸಾಧ್ಯತೆ ಕುರಿತು ಚರ್ಚೆಗೆ ಕಾರಣವಾಗಿದೆ. ಈ ಅಧಿವೇಶನ ಸತತ 91 ದಿನಗಳಿಂದ ಸತ್ರಾವಸಾನವಾಗದೆ ಮುಂದುವರಿದಿದ್ದು, 2008ರಲ್ಲಿ ದಾಖಲಾಗಿದ್ದ 87 ದಿನಗಳ ಹಿಂದಿನ ದಾಖಲೆಯನ್ನೂ ಮೀರಿಸಿದೆ.

ಇನ್ನು, ಕ್ಷೇತ್ರ ಮರುವಿಂಗಡಣೆ ವಿಚಾರದಲ್ಲಿ ದಕ್ಷಿಣ ಭಾರತದ ರಾಜ್ಯಗಳಿಂದ ವ್ಯಕ್ತವಾಗಿರುವ ಆತಂಕಗಳನ್ನು ನಿವಾರಿಸಲು ಕೇಂದ್ರ ಸರ್ಕಾರ ರಾಜ್ಯಗಳ ಲೋಕಸಭಾ ಸ್ಥಾನಗಳನ್ನು ಶೇಕಡಾ 50ರಷ್ಟು ಹೆಚ್ಚಿಸುವ ಪ್ರಸ್ತಾವನೆಯನ್ನೂ ಪರಿಶೀಲಿಸುತ್ತಿದೆ. 1971ರ ಜನಗಣತಿಯ ಆಧಾರದ ಮೇಲೆ ರಾಜ್ಯಗಳ ನಡುವಿನ ಸದ್ಯದ ಲೋಕಸಭಾ ಸ್ಥಾನಗಳ ಅನುಪಾತವನ್ನು ಮುಂದುವರಿಸುವ ಪ್ರಸ್ತಾವನೆಯೂ ಹೊಸ ಕರಡಿನಲ್ಲಿ ಸೇರಿದೆ ಎನ್ನಲಾಗಿದೆ.

ಡಿಜಿಟಲ್ ವಂಚನೆಗೆ ಕಡಿವಾಣ ಹಾಕಲು ರಿಸರ್ವ್ ಬ್ಯಾಂಕ್‌ನಿಂದ ಮಾಸ್ಟರ್‌ಪ್ಲಾನ್

ಮುಂಬೈ, ನ.12: ದೇಶದಲ್ಲಿ ಹೆಚ್ಚುತ್ತಿರುವ ಡಿಜಿಟಲ್ ಪಾವತಿ ವಂಚನೆಗಳಿಗೆ (ಡಿಜಿಟಲ್ ಪೇಮೆಂಟ್ ಫ್ರಾಡ್– ಡಿಪಿಎಫ್) ಕಡಿವಾಣ ಹಾಕಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಹತ್ವದ ಹೆಜ್ಜೆಯಿಡಲು ಚಿಂತನೆ ನಡೆಸಿದೆ. 10,000 ರೂ.ಗಳಿಗಿಂತ ಹೆಚ್ಚಿನ ಮೊತ್ತದ ಆನ್‌ಲೈನ್ ಹಣ ವರ್ಗಾವಣೆಗೆ ಒಂದು ಗಂಟೆ ಕಾಯುವಿಕೆ ಅಥವಾ ವಿಳಂಬದ ಅವಧಿಯನ್ನು ಜಾರಿಗೆ ತರುವ ಕುರಿತು ಆರ್‌ಬಿಐ ಪರಿಶೀಲಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಆರ್‌ಬಿಐ ಮೂಲಗಳ ಪ್ರಕಾರ, ದೇಶದ ಬಹುಪಾಲು ದೈನಂದಿನ ಡಿಜಿಟಲ್ ವಹಿವಾಟುಗಳು 10,000 ರೂ.ಗಿಂತ ಕಡಿಮೆ ಮೊತ್ತದ್ದಾಗಿದೆ. ಹೀಗಾಗಿ 10,000 ರೂ. ಮಿತಿಯನ್ನು ನಿಗದಿಪಡಿಸುವುದು ಸೂಕ್ತ ಎಂದು ಕೇಂದ್ರೀಯ ಬ್ಯಾಂಕ್ ಭಾವಿಸಿದೆ.



■ **10,000 ರೂ.ಗಳಿಗಿಂತ ಹೆಚ್ಚಿನ ಆನ್‌ಲೈನ್ ಪಾವತಿಯನ್ನು 1 ಗಂಟೆ ವಿಳಂಬ ಮಾಡಲು ಚಿಂತನೆ**

ಆದರೆ, ಈ ಪ್ರಸ್ತಾವಿತ ಒಂದು ಗಂಟೆಯ ವಿಳಂಬ ನಿಯಮವು ಕೇವಲ ವ್ಯಕ್ತಿಯಿಂದ ವ್ಯಕ್ತಿಗೆ (ಪರ್ಸನ್ ಟು ಪರ್ಸನ್ – ಪಿ2ಪಿ) ಮಾಡುವ ಹಣ ವರ್ಗಾವಣೆಗಳಿಗೆ ಮಾತ್ರ ಅನ್ವಯವಾಗುವ ನಿರೀಕ್ಷೆಯಿದೆ.

ಇದರ ಜೊತೆಗೆ, ಪಿ2ಪಿ ವ್ಯವಹಾರದಲ್ಲಿ 'ವೈಟ್ ಲಿಸ್ಟಿಂಗ್' ಸೌಲಭ್ಯಕ್ಕೂ ಅವಕಾಶ ನೀಡುವ ಸಾಧ್ಯತೆಯಿದೆ. ಅಂದರೆ, ಗ್ರಾಹಕರು ಮೊದಲೇ ಅನುಮೋದಿಸಿದ ಅಥವಾ ನಂಬಿಕಸ್ತ ಫಲಾನುಭವಿಗಳಿಗೆ ಹಣ ಕಳುಹಿಸುವಾಗ ಈ ಒಂದು ಗಂಟೆಯ ಕಾಯುವಿಕೆ ಅವಧಿಯಿಂದ ವಿನಾಯಿತಿ ಸಿಗಲಿದೆ.

ಈ ನಿಯಮದ ಹಿಂದಿನ ಉದ್ದೇಶವೇನು?

ಸೈಬರ್ ವಂಚಕರು ಜನರನ್ನು ಯಾಮಾರಿಸಿ ಅಥವಾ ಬೆದರಿಸಿ ಒಂದೇ ಬಾರಿಗೆ ದೊಡ್ಡ ಮೊತ್ತದ ಹಣವನ್ನು ತಮ್ಮ ಖಾತೆಗಳಿಗೆ ವರ್ಗಾಯಿಸಿಕೊಳ್ಳುವ ಪ್ರಕರಣಗಳು ಹೆಚ್ಚಾಗುತ್ತಿವೆ. ಇಂತಹ ವಂಚನೆಗಳನ್ನು ತಡೆಯಲು ಈ ಒಂದು ಗಂಟೆಯ ಕಾಲಾವಕಾಶವು ಹೆಚ್ಚುವರಿ ಸುರಕ್ಷತಾ ಕವಚವಾಗಿ ಕಾರ್ಯನಿರ್ವಹಿಸಲಿದೆ. ವ್ಯವಹಾರ ಪೂರ್ಣಗೊಳ್ಳುವ ಮುನ್ನವೇ ಗ್ರಾಹಕರಿಗೆ ಅಥವಾ ಬ್ಯಾಂಕ್‌ಗಳಿಗೆ ಅನುಮಾನಾಸ್ಪದ ವ್ಯವಹಾರವನ್ನು ಪತ್ತೆಹಚ್ಚಲು ಮತ್ತು ವಂಚಕರ ಖಾತೆಗೆ ಹಣ ಹೋಗುವುದನ್ನು ತಕ್ಷಣವೇ ತಡೆಯಲು ಇದರಿಂದ ಸಮಯಾವಕಾಶ ಸಿಗಲಿದೆ.

ಅಂತಿಮ ನಿರ್ಧಾರ ಬಾಕಿ

ಈ ವರ್ಷದ ಮಾರ್ಚ್ ತಿಂಗಳಲ್ಲಿ ಆರ್‌ಬಿಐ ಡಿಜಿಟಲ್ ಪಾವತಿ ಸುರಕ್ಷತೆ ಕುರಿತು ಪತ್ರವೊಂದನ್ನು ಬಿಡುಗಡೆ ಮಾಡಿತ್ತು. ಅದರಲ್ಲಿ 10,000 ರೂ. ಮೇಲ್ಪಟ್ಟ ವ್ಯವಹಾರಕ್ಕೆ ಒಂದು ಗಂಟೆ ವಿಳಂಬ ಮಾಡುವ ಪ್ರಮುಖ ಸಲಹೆಯನ್ನು ಮುಂದಿಟ್ಟಿತ್ತು. ಈ ಕರಡು ಸುತ್ತೋಲೆಗೆ ಬ್ಯಾಂಕ್‌ಗಳು ಹಾಗೂ ವಿವಿಧ ವಲಯದ ತಜ್ಞರಿಂದ ನೂರಾರು ಪ್ರತಿಕ್ರಿಯೆಗಳು ಬಂದಿವೆ. ಈ ಎಲ್ಲಾ ಅಭಿಪ್ರಾಯಗಳನ್ನು ಪರಿಶೀಲಿಸಿದ ನಂತರ ಆರ್‌ಬಿಐ ಅಂತಿಮ ರೂಪುರೇಷೆ ಮತ್ತು ಜಾರಿಯ ಕುರಿತು ನಿರ್ಧಾರ ಕೈಗೊಳ್ಳಲಿದೆ.

2000 ರೂ.ಗಿಂತ ಹೆಚ್ಚಿನ ಯುಪಿಐ ಪಾವತಿಗೆ ಎಂಡಿಆರ್ ಶುಲ್ಕ: ಎನ್‌ಪಿಸಿಐನಿಂದ ಶೀಘ್ರ ಅಂತಿಮ ನಿರ್ಧಾರ

ನವದೆಹಲಿ, ನ.12: ಯುಪಿಐ ವ್ಯವಹಾರಗಳಿಗೆ ಸಂಬಂಧಿಸಿದಂತೆ 2,000 ರೂಪಾಯಿಗಿಂತ ಹೆಚ್ಚಿನ ಮೊತ್ತದ ಪಾವತಿಗಳ ಮೇಲೆ ಪ್ರಸ್ತಾಪಿಸಲಾಗಿರುವ ಮರ್ಚೆಂಟ್ ಡಿಸ್ಕೌಂಟ್ ರೇಟ್ (ಎಂಡಿಆರ್) ಶುಲ್ಕಗಳ ಕುರಿತು ನ. 15ರೊಳಗೆ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆಯಿದೆ ಎಂದು ವರದಿಯೊಂದು ತಿಳಿಸಿದೆ.

ಹಬ್ಬದ ಸೀಸನ್ ಮತ್ತು ದೀಪಾವಳಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಅ.15, 2026 ರಿಂದ ಜಾರಿಗೆ ಬರಬೇಕಿದ್ದ ಪರಿಷ್ಕೃತ ಎಂಡಿಆರ್ ಚೌಕಟ್ಟಿನ ಅನುಷ್ಠಾನವನ್ನು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ) ಮುಂದೂಡಿತ್ತು. ದೀಪಾವಳಿಯ ನಂತರ ಪರಿಷ್ಕೃತ ದಿನಾಂಕವನ್ನು ಪ್ರಕಟಿಸುವುದಾಗಿ ಎನ್‌ಪಿಸಿಐ ತಿಳಿಸಿತ್ತು.

ಎನ್‌ಪಿಸಿಐ ಪ್ರಸ್ತಾಪಿಸಿರುವ ಹೊಸ ಚೌಕಟ್ಟಿನ ಪ್ರಕಾರ, 2,000 ರೂ.ಗಿಂತ ಹೆಚ್ಚಿನ ನಿರ್ದಿಷ್ಟ ಪರ್ಸನ್–ಟು–ಮರ್ಚೆಂಟ್ ಯುಪಿಐ ವ್ಯವಹಾರಗಳ ಮೇಲೆ ಶೇ.0.4ರಷ್ಟು ಎಂಡಿಆರ್ ವಿಧಿಸಲು ಪ್ರಸ್ತಾಪಿಸಲಾಗಿದೆ. 75,000 ರೂಪಾಯಿ ಮತ್ತು ಅದಕ್ಕಿಂತ ಹೆಚ್ಚಿನ ಪಾವತಿಗಳಿಗೆ ಗರಿಷ್ಠ 300 ರೂ.ಗಳ ವರೆಗೆ ಎಂಡಿಆರ್ ನಿಗದಿಪಡಿಸಲಾಗಿದೆ.



ಉದಾಹರಣೆಗೆ, 5,000 ರೂ. ವ್ಯವಹಾರಕ್ಕೆ 20 ರೂ. ಹಾಗೂ 50,000 ರೂಪಾಯಿ ವ್ಯವಹಾರಕ್ಕೆ 200 ರೂಪಾಯಿ ಶುಲ್ಕ ಬೀಳಲಿದೆ.

ಆದರೆ ವ್ಯಕ್ತಿಗಳ ನಡುವಿನ ಹಣ ವರ್ಗಾವಣೆಯಾದ ಪರ್ಸನ್–ಟು–ಪರ್ಸನ್ (ಕಿ2ಕಿ) ಯುಪಿಐ ವ್ಯವಹಾರಗಳು ಎಂದಿನಂತೆ ಸಂಪೂರ್ಣ ಉಚಿತವಾಗಿರಲಿವೆ.

ಡಿಜಿಟಲ್ ಪಾವತಿ ವ್ಯವಸ್ಥೆ, ಸೈಬರ್ ಭದ್ರತೆ ಮತ್ತು ಬ್ಯಾಂಕ್‌ಗಳ ಮೂಲಭೂತ ಸೌಕರ್ಯಗಳ ದೀರ್ಘಕಾಲೀನ ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳಲು ಈ ಎಂಡಿಆರ್ ಅಗತ್ಯವಿದೆ ಎಂದು ಕೇಂದ್ರ ಸರ್ಕಾರ ಮತ್ತು ಆರ್‌ಬಿಐ ಸಮರ್ಥಿಸಿಕೊಂಡಿವೆ.

ಮತ್ತೊಂದೆಡೆ, ಈ ಪ್ರಸ್ತಾವನೆಯನ್ನು ವಿರೋಧಿಸಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರ, ಆರ್‌ಬಿಐ ಮತ್ತು ಎನ್‌ಪಿಸಿಐಗೆ ನೋಟಿಸ್ ಜಾರಿಗೊಳಿಸಿದೆ.

ಗ್ರಾಹಕರ ಮೇಲೆ ಹೊರೆಯಿಲ್ಲ

ಈ ಪ್ರಸ್ತಾವಿತ ಎಂಡಿಆರ್ ಶುಲ್ಕಗಳು ನೇರವಾಗಿ ಗ್ರಾಹಕರ ಮೇಲೆ ಯಾವುದೇ ಹೊರೆ ಬೀಳಿಸುವುದಿಲ್ಲ ಎಂದು ಕೇಂದ್ರ ಸರ್ಕಾರ ಮತ್ತು ಎನ್‌ಪಿಸಿಐ ಸ್ಪಷ್ಟಪಡಿಸಿವೆ. 2,000 ರೂಪಾಯಿವರೆಗಿನ ವಹಿವಾಟುಗಳಿಗೆ ಯಾವುದೇ ಎಂಡಿಆರ್ ಇರುವುದಿಲ್ಲ. ಯುಪಿಐ ವ್ಯಾಪಾರಿ ವಹಿವಾಟುಗಳಲ್ಲಿ ಶೇಕಡಾ 96ಕ್ಕಿಂತ ಹೆಚ್ಚು ವ್ಯವಹಾರಗಳು ಈ ಮಿತಿಯ ಒಳಗೆ ಬರುವುದರಿಂದ ಅವುಗಳಿಗೆ ಯಾವುದೇ ಪರಿಣಾಮ ಬೀರುವುದಿಲ್ಲ. ಅಲ್ಲದೆ, ಯುಪಿಐ ಕ್ಯೂಆರ್ ಕೋಡ್ ಮೂಲಕ ತಿಂಗಳಿಗೆ 1 ಲಕ್ಷ ರೂಪಾಯಿವರೆಗೆ ಆದಾಯ ಗಳಿಸುವ ವ್ಯಾಪಾರಿಗಳಿಗೆ ಶುಲ್ಕವಿರುವುದಿಲ್ಲ ಹಾಗೂ ಅಗತ್ಯ ಸೇವೆಗಳ ಶುಲ್ಕವನ್ನು 5 ರೂ.ಗೆ ಮಿತಿಗೊಳಿಸಲಾಗಿದೆ.

ಚುನಾವಣಾ ಮಾದರಿ ಕೆಪಿಎಸ್‌ಸಿ ಪರೀಕ್ಷೆ: ಸಿಎಂ ಡಿ.ಕೆ.ಶಿವಕುಮಾರ್ ಸೂಚನೆ



ಪಾರದರ್ಶಕ, ಅಕ್ರಮರಹಿತ ಪರೀಕ್ಷೆ ನಡೆಸಲು ಸಿದ್ಧತೆ, ಪರೀಕ್ಷಾ ಸಿಬ್ಬಂದಿಗೆ ತರಬೇತಿ

ಬೆಂಗಳೂರು, ನ.12: ರಾಜ್ಯದಲ್ಲಿ 319 ಗಜೆಟೆಡ್ ಪ್ರೊಬೇಷನರ್ ಹುದ್ದೆಗಳಿಗೆ ಭಾನುವಾರ (ನವೆಂಬರ್ 15) ನಡೆಯಲಿರುವ ಪೂರ್ವಭಾವಿ ಪರೀಕ್ಷೆಗೆ ಸಂಬಂಧಿಸಿದಂತೆ ಎಲ್ಲ ಪರೀಕ್ಷಾ ಸಿಬ್ಬಂದಿಗೆ ಜಿಲ್ಲಾಧಿಕಾರಿಗಳು ಚುನಾವಣೆ ಮಾದರಿಯಲ್ಲಿ ತರಬೇತಿ ನಡೆಸಿ, ವರದಿ ಕೊಡುವಂತೆ ಸಿಎಂ ಡಿ.ಕೆ. ಶಿವಕುಮಾರ್ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ನಡೆಸುತ್ತಿರುವ ಪೂರ್ವಭಾವಿ ಪರೀಕ್ಷೆಗಳ ಸಿದ್ಧತೆಯ ಕುರಿತು ಗೃಹಕಚೇರಿ ಕೃಷ್ಣಾದಲ್ಲಿ ಗುರುವಾರ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಪರಿಶೀಲನೆ ನಡೆಸಿ ಮಾಹಿತಿ ಪಡೆದರು.

ಪರೀಕ್ಷೆಯನ್ನು ಅತ್ಯಂತ ಪಾರದರ್ಶಕವಾಗಿ, ಯಾವುದೇ ಅಕ್ರಮಗಳಿಗೆ ಅವಕಾಶವಾಗದಂತೆ ನಡೆಸಬೇಕು. ಪರೀಕ್ಷಾ ಪ್ರಕ್ರಿಯೆಯಲ್ಲಿ ಹಲವಾರು ಸುಧಾರಣೆಗಳನ್ನು ಕೈಗೊಂಡಿದ್ದೇವೆ.

ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮರಾ ಮೂಲಕ ನಿರಂತರ ನಿಗಾ ವಹಿಸಬೇಕು. ಪೊಲೀಸ್ ನೇಮಕಾತಿ ಪರೀಕ್ಷೆಯ ಮಾದರಿಯಲ್ಲಿಯೇ ಸೂಕ್ತ ಭದ್ರತೆ ವ್ಯವಸ್ಥೆ ಕೈಗೊಳ್ಳಬೇಕು.

ಯಾವುದೇ ಕಾರಣಕ್ಕೂ ಅಭ್ಯರ್ಥಿಗಳು ಮೊಬೈಲ್‌ನೊಂದಿಗೆ ಪರೀಕ್ಷಾ ಕೇಂದ್ರ ಪ್ರವೇಶಿಸುವಂತಿಲ್ಲ. ಅಂತಹ ಸಂದರ್ಭದಲ್ಲಿ ಹಿರಿಯ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಸಿದ ಮುಖ್ಯಮಂತ್ರಿಗಳು, ಈ ಬಗ್ಗೆ ಕೆಪಿಎಸ್‌ಸಿ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

ಸುಳ್ಳು ವದಂತಿಗಳಿಗೆ ಕಿವಿಗೊಡಬೇಡಿ

ಈ ಪರೀಕ್ಷೆ ಕುರಿತು ಸುಳ್ಳು ಸುದ್ದಿ ಹರಡುವುದಕ್ಕೆ ಅವಕಾಶ ನೀಡಬಾರದು. ಸಾಮಾಜಿಕ ಜಾಲತಾಣಗಳ ಮೇಲೆ ಪೊಲೀಸ್ ಇಲಾಖೆ ನಿಗಾ ವಹಿಸಬೇಕು ಎಂದು ಸಿಎಂ ಅಧಿಕಾರಿಗಳಿಗೆ ತಿಳಿಸಿದರು. ಪರೀಕ್ಷೆ ಕುರಿತು ಯಾವುದೇ ವದಂತಿ ಹಬ್ಬಿದರೆ ಕೂಡಲೇ ಅಧಿಕಾರಿಗಳ ಗಮನಕ್ಕೆ ತರಬೇಕು. ಅವರು ಈ ಕುರಿತು ಸ್ಪಷ್ಟೀಕರಣ ನೀಡುವರು. ಅಭ್ಯರ್ಥಿಗಳು ಹಾಗೂ ಮಾಧ್ಯಮದವರು ತಮಗೆ ಬಂದ ಮಾಹಿತಿಯನ್ನು ಅಧಿಕೃತ ಮೂಲಗಳಿಂದ ಖಾತರಿಪಡಿಸಿಕೊಳ್ಳುವುದು ಅತಿ ಅಗತ್ಯ ಎಂದು ತಿಳಿಸಿದರು.

ಅಭ್ಯರ್ಥಿಗಳು ಯಾವುದೇ ವದಂತಿ ಗಳಿಗೆ ಕಿವಿಗೊಡದೆ ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯುವಂತೆ ಮುಖ್ಯಮಂತ್ರಿ ಅವರು ಅಭ್ಯರ್ಥಿಗಳಿಗೆ ತಿಳಿಸಿದರು.

ನೇಮಕಾತಿ ಮತ್ತು ಪರೀಕ್ಷೆ ವಿವರ

* 319 ಗೆಜೆಟೆಡ್ ಪ್ರೊಬೆಷನರಿ ಹುದ್ದೆ (ಗ್ರೂಪ್ ಬಿ – 202 ಹಾಗೂ ಗ್ರೂಪ್ 3– 117 ಹುದ್ದೆ), 1.47 ಲಕ್ಷ ಆಕಾಂಕ್ಷಿಗಳು (91,238 ಪುರುಷರು ಮತ್ತು 53,074 ಮಹಿಳೆಯರು)
* ಪರೀಕ್ಷಾ ದಿನಾಂಕ: 15–11–2026 (ಭಾನುವಾರ).
* ಕಲಬುರಗಿ, ರಾಯಚೂರು, ಬಳ್ಳಾರಿ, ಬಾಗಲಕೋಟೆ, ವಿಜಯಪುರ, ಧಾರವಾಡ, ಬೆಳಗಾವಿ, ಉತ್ತರಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡ, ಹಾಸನ, ದಾವಣಗೆರೆ, ತುಮಕೂರು, ಮೈಸೂರು, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಒಟ್ಟು 345 ಪರೀಕ್ಷಾ ಉಪಕೇಂದ್ರಗಳನ್ನು ಸ್ಥಾಪಿಸಲಾಗಿದೆ.
* ಬೆಳಗ್ಗೆ 10ರಿಂದ 12ರವರೆಗೆ ಪತ್ರಿಕೆ–1 (ಸಾಮಾನ್ಯ ಅಧ್ಯಯನ ಮತ್ತು ಮಾನವಿಕ ವಿಷಯಗಳು), ಮಧ್ಯಾಹ್ನ 2ರಿಂದ 4ರವರೆಗೆ ಪತ್ರಿಕೆ–2 (ರಾಜ್ಯಕ್ಕೆ ಸಂಬಂಧಿಸಿದ ಸಾಮಾನ್ಯ ಅಧ್ಯಯನ, ವಿಜ್ಞಾನ ಮತ್ತು ತಂತ್ರಜ್ಞಾನ, ಮಾನಸಿಕ ಸಾಮರ್ಥ್ಯ)
* ಪ್ರತಿ ಪತ್ರಿಕೆಗೆ 100 ಪ್ರಶ್ನೆ, 200 ಅಂಕ.

ಅಕ್ರಮ ತಡೆಗೆ ಸುಧಾರಣಾ ಕ್ರಮಗಳು

ಸಭೆಯಲ್ಲಿ ಪರೀಕ್ಷೆಯ ಪೂರ್ವಸಿದ್ಧತೆ ಕುರಿತು ಮಾಹಿತಿ ನೀಡಿದ ಕೆಪಿಎಸ್‌ಸಿ ಪರೀಕ್ಷಾ ನಿಯಂತ್ರಕ ಎಚ್. ಪ್ರಸನ್ನ ಅವರು ಪರೀಕ್ಷಾ ಅಕ್ರಮ ತಡೆಗೆ ಮೊದಲ ಬಾರಿಗೆ ಜಾರಿಗೆ ತರುತ್ತಿರುವ ಸುಧಾರಣಾ ಕ್ರಮಗಳನ್ನು ವಿವರಿಸಿದ್ದಾರೆ.

* ಉತ್ತರ ಗೊತ್ತಿಲ್ಲದಿದ್ದರೆ 5ನೇ ಆಯ್ಕೆಯನ್ನು ಕಡ್ಡಾಯವಾಗಿ ಗುರುತು ಮಾಡಬೇಕು. ಯಾವುದೇ ಪ್ರಶ್ನೆಗೆ ಉತ್ತರ ಖಾಲಿ ಬಿಡುವಂತಿಲ್ಲ
* ಒಎಂಆರ್ ತ್ರಿಪ್ರತಿಯಲ್ಲಿದ್ದು, ಒಂದು ಪ್ರತಿ ಅಭ್ಯರ್ಥಿಗೆ, ಒಂದು ಕೆಪಿಎಸ್‌ಸಿ ಮೌಲ್ಯಮಾಪನಕ್ಕೆ ಮತ್ತು ಮೂರನೆಯದು ಜಿಲ್ಲಾಧಿಕಾರಿ/ಕೆಪಿಎಸ್‌ಸಿ ಸ್ಟ್ರಾಂಗ್ ರೂಮ್‌ನಲ್ಲಿ ಸುರಕ್ಷಿತವಾಗಿಡಲಾಗುವುದು
* ಎಲ್ಲಾ ಪರೀಕ್ಷಾ ಕೊಠಡಿಗಳಲ್ಲಿ ಸಿಸಿಟಿವಿ ಕ್ಯಾಮರಾ ಮತ್ತು ಮೊಬೈಲ್ ಜಾಮರ್‌ಗಳ ಅಳವಡಿಕೆ
* ಗುರುತಿನ ಚೀಟಿ ಪರಿಶೀಲನೆ, ತಪಾಸಣೆ ಮತ್ತು ಕೊಠಡಿಯ ಹಿಂಭಾಗದಿಂದ ನಿಗಾವಹಿಸಲು ಪ್ರತಿ ಪರೀಕ್ಷಾ ಕೊಠಡಿಗೆ ಇಬ್ಬರು ಮೇಲ್ವಿಚಾರಕರ ನಿಯೋಜನೆ
* ಪಾರದರ್ಶಕತೆಗಾಗಿ ಪರೀಕ್ಷೆ ನಡೆದ ದಿನದಂದೇ ಎಲ್ಲಾ ಸ್ಕ್ಯಾನ್ ಮಾಡಿದ ಓಎಂಆರ್ ಪ್ರತಿಗಳನ್ನು ಕೆಪಿಎಸ್‌ಸಿ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರ ವೀಕ್ಷಣೆಗೆ ಅಪ್ಲೋಡ್ ಮಾಡಲಾಗುವುದು.

ಪಶ್ಚಿಮಘಟ್ಟದ ಹೊಸ ವಿದ್ಯುದ್ದೀಕೃತ ರೈಲು ಮಾರ್ಗಕ್ಕೆ ಶಕ್ತಿ ತುಂಬಿದ ಕೆಪಿಟಿಸಿಎಲ್

ಕಡಿದಾದ ಪ್ರದೇಶಗಳಲ್ಲಿ ಕಾಮಗಾರಿ - 12 ರೈಲ್ವೆ ಟ್ರಾಕ್ಷನ್ ಕೇಂದ್ರಗಳಿಗೆ ಸಮರ್ಪಕ ವಿದ್ಯುತ್ ಮೂಲಸೌಕರ್ಯ: ಕೆ.ಜೆ. ಜಾರ್ಜ್



ಬೆಂಗಳೂರು, ನ.12: ಪಶ್ಚಿಮ ಘಟ್ಟದ ಅತ್ಯಂತ ಸವಾಲಿನ ಸಕಲೇಶಪುರ–ಸುಬ್ರಹ್ಮಣ್ಯ ರೋಡ್ ರೈಲುಮಾರ್ಗ ಹೊಸದಾಗಿ ವಿದ್ಯುದ್ದೀಕರಣಗೊಂಡಿರುವ ಹಿನ್ನೆಲೆಯಲ್ಲಿ, ಈ ಮಾರ್ಗದಲ್ಲಿ ವಿದ್ಯುತ್ ರೈಲುಗಳ ಸಂಚಾರಕ್ಕೆ ಅಗತ್ಯವಾದ ವಿಶ್ವಾಸಾರ್ಹ ಟ್ರಾಕ್ಷನ್ ಪವರ್ ಒದಗಿಸಲು ಒದಗಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಬಲಿಷ್ಠ ಪ್ರಸರಣ ಮೂಲಸೌಕರ್ಯವನ್ನು ಅಭಿವೃದ್ಧಿ ಪಡಿಸಿದೆ ಎಂದು ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ.

ಪಶ್ಚಿಮಘಟ್ಟದಂತಹ ಅತ್ಯಂತ ದುರ್ಗಮ ಪ್ರದೇಶದಲ್ಲಿ ಹೊಸದಾಗಿ ವಿದ್ಯುದ್ದೀಕೃತಗೊಂಡ ರೈಲು ಮಾರ್ಗಕ್ಕೆ ನಿರಂತರ ಮತ್ತು ವಿಶ್ವಾಸಾರ್ಹ ಸೇವೆ ಒದಗಿಸುವುದು ದೊಡ್ಡ ತಾಂತ್ರಿಕ ಜವಾಬ್ದಾರಿ. ಸಿಬ್ಬಂದಿ ಅತ್ಯಂತ ಸವಾಲಿನ ಪರಿಸ್ಥಿತಿಯಲ್ಲೂ ಶ್ರಮಿಸಿ ಅಗತ್ಯ ಪ್ರಸರಣ ಮೂಲ ಸೌಕರ್ಯವನ್ನು ಸಜ್ಜುಗೊಳಿಸಿದ್ದಾರೆ. ಅವರ ತಾಂತ್ರಿಕ ಕೌಶಲ್ಯ, ಬದ್ಧತೆ ಹಾಗೂ ಆಡಳಿತ ಮಂಡಳಿಯ ಸಮನ್ವಯದ ಪ್ರಯತ್ನ ಶ್ಲಾಘನೀಯ ಎಂದು ಸಚಿವ ಕೆ.ಜೆ. ಜಾರ್ಜ್ ಹೇಳಿದ್ದಾರೆ.

ನ.13ರಂದು ಆರಂಭವಾಗಲಿರುವ ಯಶವಂತಪುರ – ಮಂಗಳೂರು – ಮಡಗಾಂವ್ ವಂದೇ ಭಾರತ್ ಎಕ್ಸ್‌ಪ್ರೆಸ್ ಸೇವೆಯೊಂದಿಗೆ, ಪಶ್ಚಿಮ ಘಟ್ಟದ ಹೊಸ ವಿದ್ಯುದ್ದೀಕೃತ ಮಾರ್ಗದಲ್ಲಿ ಮೊದಲ ಬಾರಿಗೆ ವಂದೇಭಾರತ್ ವಿದ್ಯುತ್ ರೈಲು ಸಂಚರಿಸಲಿದೆ. ಈ ಮಾರ್ಗಕ್ಕೆ ಅಗತ್ಯವಾದ ಇಂಧನ ಮೂಲಸೌಕರ್ಯ ಕಾಮಗಾರಿ ಗಳು ಸಮಯಬದ್ಧವಾಗಿ ಅನುಷ್ಠಾನ ಗೊಳ್ಳುವಂತೆ ಖಚಿತ ಪಡಿಸಲು ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ಸಂಬಂಧಪಟ್ಟ ಅಧಿಕಾರಿಗಳ ಜತೆ ಸರಣಿ ಪರಿಶೀಲನಾ ಸಭೆಗಳನ್ನು ನಡೆಸಿದರು. ಅವರ ಮಾರ್ಗದರ್ಶನ ದಲ್ಲಿ ಪ್ರಸರಣ ಜಾಲ ಬಲವರ್ಧನೆ, ಉಪಕೇಂದ್ರಗಳ ಸಾಮರ್ಥ್ಯ ವೃದ್ಧಿ ಹಾಗೂ ರೈಲ್ವೆ ಟ್ರಾಕ್ಷನ್ ಕೇಂದ್ರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗಳಿಗೆ ಆದ್ಯತೆಯ ಮೇರೆಗೆ ವೇಗ ನೀಡಿ, ಅಗತ್ಯ ಕಾಮಗಾರಿಗಳನ್ನು ಹಂತ ಹಂತವಾಗಿ ಪೂರ್ಣಗೊಳಿಸಲಾಗಿದೆ.

■ ಪ್ರಮುಖ ಮೂಲಸೌಕರ್ಯದ ವಿವರ

■ – 12 ಕೆಪಿಟಿಸಿಎಲ್ ಉಪಕೇಂದ್ರಗಳಿಂದ 12 ರೈಲ್ವೆ ಟ್ರಾಕ್ಷನ್ ಉಪಕೇಂದ್ರಗಳಿಗೆ ವಿದ್ಯುತ್ ಸಂಪರ್ಕ

■ – ಸಿದ್ದಾಪುರಕ್ಕೆ 4.5 ಕಿ.ಮೀ. 66 ಕೆವಿ ಪ್ರಸರಣ ಮಾರ್ಗ

■ – ಸಕಲೇಶಪುರ ಆರ್‌ಟಿಎಸ್‌ಎಸ್ ಗೆ 220 ಕೆವಿ ಯುಜಿ ಹಾಗೂ ಓವರ್ ಹೆಡ್ ಟ್ರಾನ್ಸ್‌ಮಿಷನ್ ಕನೆಕ್ಟಿವಿಟಿ

■ – ನೆರಳಕಟ್ಟೆಗೆ 2.760 ಕಿ.ಮೀ. 220 ಕೆವಿ ಭೂ ಗರ್ಭ ಕೇಬಲ್ ಅಳವಡಿಕೆ

■ – ಜೋಕಟ್ಟೆ, ಮುಲ್ಕಿ, ಬಾರ್ಕೂರು ಮತ್ತು ಸೇನಾಪುರಕ್ಕೆ 110 ಕೆವಿ ಟ್ರಾನ್ಸ್‌ಮಿಷನ್

■ – ಅಂಚೆಪಾಳ್ಯ ಹಾಗೂ ಯಾಚೇನಹಳ್ಳಿ ಉಪಕೇಂದ್ರಗಳಲ್ಲಿ 220/66 ಕೆವಿ ಟ್ರಾನ್ಸ್ ಫಾರ್ಮರ್

■ – ಮುರುಡೇಶ್ವರ, ಕುಮಟಾ ಮತ್ತು ಕಾರವಾರ ಆರ್.ಟಿ.ಎಸ್.ಎಸ್‌ಗಳಿಗೆ ಹಾಲಿ ಕೆಪಿಟಿಸಿಎಲ್ ಜಾಲದಿಂದ ವಿದ್ಯುತ್ ಬೆಂಬಲ

■ – ವಂದೇ ಭಾರತ್ ಸಂಚಾರದ ಹಿನ್ನೆಲೆಯಲ್ಲಿ 24/7 ನಿಗಾ ವ್ಯವಸ್ಥೆ

ಅಧಿಕಾರಿಗಳ ಕಾರ್ಯ ಅಭಿನಂದ ನಾರ್ಹ



ಪಶ್ಚಿಮ ಘಟ್ಟದ ಸವಾಲಿನ ಪರಿಸ್ಥಿತಿಯಲ್ಲಿ ವಿಶ್ವಾಸಾರ್ಹ ಟ್ರಾಕ್ಷನ್ ಪವರ್ ಒದಗಿಸಲು ವಿವಿಧ ಹಂತಗಳಲ್ಲಿ ಪ್ರಸರಣ ಮೂಲ ಸೌಕರ್ಯ ವನ್ನು ಅಭಿವೃದ್ಧಿಪಡಿಸಲಾಗಿದೆ. ವಂದೇ ಭಾರತ್ ಸಂಚಾರದ ಸಂದರ್ಭದಲ್ಲಿ ಪ್ರಮುಖ ಉಪಕೇಂದ್ರ ಗಳು ಮತ್ತು ಸಂಪರ್ಕ ಕೇಂದ್ರ ವಿಶೇಷವಾಗಿ ಘಾಟ್ ಪ್ರದೇಶದ ಸವಾಲುಗಳನ್ನು ಎದುರಿಸಿ ತಾಂತ್ರಿಕ ಕಾಮಗಾರಿಗಳನ್ನು ನಿರ್ವಹಿಸಿರುವ ಇಂಜಿನಿಯರ್‌ಗಳು, ಸಿಬ್ಬಂದಿ ಹಾಗೂ ಆಡಳಿತ ಮಂಡಳಿಯ ಪ್ರಯತ್ನ ಅಭಿನಂದನಾರ್ಹದ್ರಗಳಲ್ಲಿ ತಾಂತ್ರಿಕ ಸಿಬ್ಬಂದಿಯನ್ನು ನಿಯೋಜಿಸಿ 24/7 ಮೇಲ್ವಿಚಾರಣೆ ನಡೆಸಲಾಗುವುದು ಎಂದು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.



ನ. 21ರಂದು ನವದೆಹಲಿಯ ಜನಪಥ ರಸ್ತೆಯ ಅಂಬೇಡ್ಕರ್ ಇಂಟರ್ ನ್ಯಾಷನಲ್ ಸಭಾಂಗಣದಲ್ಲಿ ನಡೆಯಲಿರುವ ಹಾರಕೂಡ ಶ್ರೀಚನ್ನಬಸವೇಶ್ವರ ಸಂಸ್ಥಾನ ಹಿರೇಮಠದ ಪೀಠಾಧಿಪತಿ ಕಾರ್ಯಕ್ರಮ ಉದ್ಘಾಟನೆ ಮಾಡಲಿರುವ ಕೇಂದ್ರದ ರೈಲ್ವೆ ಮತ್ತು ಜಲ ಶಕ್ತಿ ಖಾತೆಯ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರಿಗೆ ಮಾಜಿ ಲೋಕಸಭಾ ಸದಸ್ಯ ಡಾ. ಉಮೇಶ್ ಜಾಧವ್ ನವದೆಹಲಿಯಲ್ಲಿ ಆಮಂತ್ರಣ ಪತ್ರಿಕೆ ನೀಡಿ ಸ್ವಾಗತಿಸಿದರು.



ಮಾಜಿ ಸಚಿವ, ಭಾರತೀಯ ಸ್ಕೌಟ್ಸ್ ಅಂಡ್ ಗೈಡ್ಸ್ ಕರ್ನಾಟಕ ಘಟಕದ ಮುಖ್ಯಸ್ಥ ಪಿ ಜಿ ಆರ್ ಸಿಂಧ್ಯ ಅವರ ನೇತೃತ್ವದ ನಿಯೋಗವು ಸಿಎಂ ಡಿ ಕೆ ಶಿವಕುಮಾರ್ ಅವರನ್ನು ಸದಾಶಿವನಗರ ನಿವಾಸದಲ್ಲಿ ಬುಧವಾರ ಭೇಟಿ ಮಾಡಿತು.

ಓನಕೆ ಓಬವ್ವನ ತ್ಯಾಗ–ದೇಶಪ್ರೇಮ ಯುವಜನತೆಗೆ ಸ್ಫೂರ್ತಿ: ಸಚಿವ ಕೆ.ಎಚ್. ಮುನಿಯಪ್ಪ

ಬೆಂಗಳೂರು, ನ.12: ಯಾವುದೇ ಸೈನ್ಯದ ತರಬೇತಿ ಇಲ್ಲದೆ ಕೇವಲ ಒನಕೆಯನ್ನು ಹಿಡಿದು ಶತ್ರುಗಳ ವಿರುದ್ಧ ಹೋರಾಡಿದ ಧೀಮಂತ ಮಹಿಳೆ ಒನಕೆ ಓಬವ್ವ. ಈಕೆಯ ತ್ಯಾಗ ಮತ್ತು ದೇಶಪ್ರೇಮ ಇಂದಿನ ಯುವಜನತೆಗೆ ದೊಡ್ಡ ಸ್ಫೂರ್ತಿಯಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಕೆ.ಎಚ್. ಮುನಿಯಪ್ಪ ಬಣ್ಣಿಸಿದರು.

ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಆಯೋಜಿಸಿದ್ದ ವೀರವನಿತೆ ಒನಕೆ ಓಬವ್ವ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾಮಾನ್ಯ ಕಾವಲುಗಾರನ ಹೆಂಡತಿಯಾಗಿದ್ದರೂ, ಸಮಯ ಸ್ಫೂರ್ತಿ ಮತ್ತು ಧೈರ್ಯದಿಂದ ಚಿತ್ರದುರ್ಗದ ಕೋಟೆಯನ್ನು ಶತ್ರುಗಳಿಂದ ಕಾಪಾಡಿದ ಸಾಹಸಿ. ಹೆಣ್ಣು ಕೇವಲ ಅಬಲೆಯಲ್ಲ, ಸಂಕಷ್ಟದ ಸಮಯದಲ್ಲಿ ನಾಡಿಗಾಗಿ ರಣಚಂಡಿಯಾಗಬಲ್ಲಳು ಎಂಬುದಕ್ಕೆ ವೀರವನಿತೆ ಒನಕೆ ಓಬವ್ವ ಉದಾಹರಣೆ ಎಂದರು.

ದೇಶವು ಸಮಾನತೆಯ ಬದುಕಿಗಾಗಿ ಪುರುಷ ಹಾಗೂ ಮಹಿಳೆಯರಿಗೆ ಸಮಾನವಾದ ಹಕ್ಕು ಇರಬೇಕು ಎಂದು ಬಾಬಾಸಾಹೇಬ್ ಅಂಬೇಡ್ಕರ್ ಹೇಳಿದ್ದಾರೆ. ಹೆಣ್ಣುಮಕ್ಕಳು ಶಿಕ್ಷಣವನ್ನು ಪಡೆದು ಸ್ವಾವಲಂಬಿಗಳಾಗಿ ಬದುಕಬೇಕು ಎಂದು ಕರೆ ನೀಡಿದರು.

ಬೆಟ್ಟಕೋಟೆಯ ರಾಮಕೃಷ್ಣ ಪ್ರೌಢಶಾಲೆಯ ಉಪನ್ಯಾಸಕ ನಾಗರಾಜು, ಒನಕೆ ಓಬವ್ವ ಚರಿತ್ರೆಯ ಕುರಿತು ಸಮಗ್ರ ಮಾಹಿತಿ ನೀಡಿದರು. ಸಮಾಜದ ಗಣ್ಯರಿಗೆ ಸನ್ಮಾನ ಹಾಗೂ ಎಸ್ಸೆಸ್ಸೆಲ್ಸಿ, ಪಿಯುಸಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಎಡಿಸಿ ರಂಗನಾಥ್, ಎಸಿ ಮಂಜುನಾಥ್, ಉಪಕಾರ್ಯದರ್ಶಿ ಶಿವಕುಮಾರ್, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ರಾಜಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಕಲ್ಪನ, ಸಮಾಜದ ಮುಖಂಡರು, ವಿವಿಧ ಸಂಘಟನೆಗಳ ಪ್ರತಿನಿಧಿಗಳು, ಜಿಲ್ಲಾಮಟ್ಟದ ಅಧಿಕಾರಿಗಳು, ಶಾಲಾ ಮಕ್ಕಳು ಉಪಸ್ಥಿತರಿದ್ದರು.



ಬೆಂಗಳೂರಿನಲ್ಲಿ ಗುರುವಾರ ತಿಗಳ ಅಭಿವೃದ್ಧಿ ನಿಗಮದ ವೆಬ್‌ಸೈಟ್ ಹಾಗೂ ನಿಗಮದ ಕಾರ್ಯಕ್ರಮಗಳ ಮಾಹಿತಿ ಒಳಗೊಂಡ ಪುಸ್ತಕ ಬಿಡುಗಡೆಯನ್ನು ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಕೆ.ಎಚ್. ಮುನಿಯಪ್ಪ ಲೋಕಾರ್ಪಣೆಗೊಳಿಸಿದರು. ಈ ಸಂದರ್ಭದಲ್ಲಿ ನಿಗಮದ ಅಧ್ಯಕ್ಷ ಎಲ್.ಎ.ಮಂಜುನಾಥ್, ಹಾಗೂ ಮಾಜಿ ಶಾಸಕರು ಹಾಜರಿದ್ದರು.

■ ಸಂದರ್ಭಕ್ಕೆ ತಕ್ಕಂತೆ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಅಗತ್ಯ

■ ಜಿಲ್ಲಾಧಿಕಾರಿ ಡಾ.ಕೆ.ಎನ್. ಅನುರಾಧ ಮಾತನಾಡಿ, ಒನಕೆ ಓಬವ್ವ ಅವರ ಜೀವನ ಚರಿತ್ರೆ ನಮಗೆ ಒಂದು ಮಹತ್ವದ ಸಂದೇಶವನ್ನು ನೀಡುತ್ತದೆ. ಕೇವಲ ಮಹಿಳೆಯರಿಗೆ ಮಾತ್ರವಲ್ಲ, ಪ್ರತಿಯೊಬ್ಬರಿಗೂ ಸಮಯಪ್ರಜ್ಞೆ, ಧೈರ್ಯ ಮತ್ತು ಸಂದರ್ಭಕ್ಕೆ ತಕ್ಕಂತೆ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಇರಬೇಕು. ಯಾವುದೇ ತುರ್ತು ಪರಿಸ್ಥಿತಿ ಎದುರಾದಾಗ ಗಾಬರಿಯಾಗದೆ, ಚಾತುರ್ಯದಿಂದ ಪರಿಸ್ಥಿತಿಯನ್ನು ಎದುರಿಸಬೇಕು ಎಂಬುದಕ್ಕೆ ಒನಕೆ ಓಬವ್ವ ಅವರ ಜೀವನವೇ ಅತ್ಯುತ್ತಮ ನಿದರ್ಶನ ಎಂದರು.

ಪ್ರಧಾನಿ ದೂರದೃಷ್ಟಿಯಿಂದ ದೇಶದಲ್ಲಿ ಕೈಗಾರಿಕಾ ಕ್ಷೇತ್ರದ ಬೆಳವಣಿಗೆ: ಎಚ್.ಡಿ.ಕುಮಾರಸ್ವಾಮಿ ಶ್ಲಾಘನೆ

ತುಮಕೂರು, ನ.12: ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯಿಂದ ದೇಶದಲ್ಲಿ ಕೈಗಾರಿಕೆ, ವಿದ್ಯುತ್, ಕ್ರಿಟಿಕಲ್ ಮಿನರಲ್ಸ್ ಮತ್ತು ಆಟೋಮೊಬೈಲ್ ಕ್ಷೇತ್ರಗಳು ಬೆಳೆಯುತ್ತಿವೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಜಿಲ್ಲೆಯ ವಸಂತ ನರಸಾಪುರದಲ್ಲಿ ಆದರ್ಶ ಕೆಮಿಕಲ್ ಕಂಪನಿಯ ಸೋಲಾರ್ ಪ್ಯಾನಲ್ ಯೋಜನೆಗೆ ಗುರುವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಕೇಂದ್ರದ ಹಲವು ಯೋಜನೆಗಳ ಸಬ್ಸಿಡಿ ಈ ಕಂಪನಿಗೆ ದೊರಕಿಸುವ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಕೈಗಾರಿಕೆಗಳನ್ನು ತರುವುದು ರಾಜ್ಯದ ಜವಾಬ್ದಾರಿ, ತಮ್ಮ ಕೆಲಸ ಕೇವಲ ಯೋಜನೆಗಳನ್ನು ತರುವುದು ಎಂದು ಹೇಳಿದ ಕುಮಾರಸ್ವಾಮಿ, ಈಗಾಗಲೇ ಸುಮಾರು 11 ಸಾವಿರ ಕೋಟಿ ರೂ. ಮೌಲ್ಯದ ಯೋಜನೆಗಳನ್ನು ಬೇರೆ ಬೇರೆ ರಾಜ್ಯಗಳಿಗೆ ನೀಡಲಾಗಿದೆ ಎಂದರು.

ಡಿಕೆಶಿ ಸಿಎಂ ಆಗಿದ್ದಕ್ಕೆ ಅಸೂಯೆ ಇಲ್ಲ

ಡಿ.ಕೆ. ಶಿವಕುಮಾರ್ ಅವರು ಕಷ್ಟಪಟ್ಟು ಮುಖ್ಯಮಂತ್ರಿಯಾಗಿದ್ದಾರೆ, ಅವರ ಬಗ್ಗೆ ತಮಗೆ ಅಸೂಯೆ ಇಲ್ಲ, ಮುಖ್ಯಮಂತ್ರಿ ಸ್ಥಾನ ಯಾರ ಅಪ್ಪನ ಮನೆ ಆಸ್ತಿಯೂ ಅಲ್ಲ ಎಂದು ಸ್ಪಷ್ಟಪಡಿಸಿದರು. ಸರ್ಕಾರದಲ್ಲಿ ನಡೆಯುತ್ತಿರುವ ಅನ್ಯಾಯ, ಅಕ್ರಮಗಳ ವಿರುದ್ಧ ಧ್ವನಿ ಎತ್ತದಿದ್ದರೆ ಜನರಿಗೆ ಮೋಸ ಮಾಡಿದಂತಾಗುತ್ತದೆ. ಮಂಗಳೂರಿನಲ್ಲಿ 32 ಸಾವಿರ ಕೋಟಿ ಘೋಷಣೆ, ಮಂಡ್ಯದ ಟೆಸ್ಟಿಂಗ್ ಲ್ಯಾಬ್, ರಾಮನಗರದಲ್ಲಿ ಲಂಚ ಪಡೆಯುತ್ತಿದ್ದ ಅಧಿಕಾರಿ ಲೋಕಾಯುಕ್ತ ಬಲೆಗೆ ಬಿದ್ದ ಪ್ರಕರಣಗಳನ್ನು ಪ್ರಸ್ತಾಪಿಸಿ ಭ್ರಷ್ಟಾಚಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಸಚಿವ ಈಶ್ವರ್ ಖಂಡ್ರೆ ಅವರಿಂದ ಮಕ್ಕಳ ಗ್ರಾಮಸಭೆಗೆ ಇಂದು ವಿಧ್ಯುಕ್ತ ಚಾಲನೆ

ಬೆಂಗಳೂರು, ನ.12: ಮಾಜಿ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಜನ್ಮದಿನ –ಮಕ್ಕಳ ದಿನಾಚರಣೆ ಅಂಗವಾಗಿ ನ.13ರಿಂದ 30ರವರೆಗೆ ರಾಜ್ಯದ ವಿವಿಧ ಗ್ರಾ.ಪಂ.ಗಳಲ್ಲಿ ನಡೆಯಲಿರುವ ಮಕ್ಕಳ ಗ್ರಾಮಸಭೆಗೆ ಈಶ್ವರ ಖಂಡ್ರೆ ಶುಕ್ರವಾರ ಬೆಂಗಳೂರಿನಲ್ಲಿ ವಿಧ್ಯುಕ್ತ ಚಾಲನೆ ನೀಡಲಿದ್ದಾರೆ. ಜಕ್ಕೂರು ವಿಮಾನ ನಿಲ್ದಾಣದ ಬಳಿ ಇರುವ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಆವರಣದ ಮಾದರಿ ಪಾರಂಪರಿಕ ಗ್ರಾಮದಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಿರುವ ಈಶ್ವರ ಖಂಡ್ರೆ ಮಕ್ಕಳ ಗ್ರಾಮ ಸಭೆ ಸರಣಿ ಉದ್ಘಾಟಿಸಲಿದ್ದಾರೆ.



ಗ್ರಾ.ಪಂ. ಮಟ್ಟದಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಮಕ್ಕಳ ಗ್ರಾಮ ಸಭೆ ಆಯೋಜಿಸಲಾಗುತ್ತಿದ್ದು, ಹಳ್ಳಿಗಳ ಪರಿಚಯವೇ ಇಲ್ಲದ ನಗರದ ವಿದ್ಯಾರ್ಥಿಗಳಿಗೆ ಪಾರಂಪರಿಕ ಗ್ರಾಮದ ದರ್ಶನ ಮಾಡಿಸುವುದರ ಜೊತೆಗೆ ಗ್ರಾಮ ಆಡಳಿತ ಹೇಗೆ ನಡೆಯುತ್ತದೆ ಎಂಬ ಪರಿಚಯ ಮಾಡಿಸಲಾಗುತ್ತಿದೆ.

ಮಿಗಿಲಾಗಿ ಮಕ್ಕಳ ಹಕ್ಕುಗಳು, ಪೌಷ್ಠಿಕಾಂಶ, ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆಯೂ ಮಕ್ಕಳಿಗೆ ಜಾಗೃತಿ ಮೂಡಿಸಲು ಈ ಗ್ರಾಮ ಸಭೆ ನೆರವಾಗಲಿದೆ. ಹೀಗಾಗಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಕ್ಕಳ ಗ್ರಾಮಸಭೆ ಆಯೋಜಿಸುವಂತೆ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಅಡುಗೆಎಣ್ಣೆ ಮರುಬಳಕೆಗೆ ಕಡಿವಾಣ ಹಾಕಲು ಮೊಬೈಲ್ ಆಪ್

ಮೂರು ತಿಂಗಳಲ್ಲಿ ಬಿಡುಗಡೆ: ಆರೋಗ್ಯ ಸಚಿವ ಯು.ಟಿ. ಖಾದರ್

ಬೆಂಗಳೂರು, ನ.12: ಅಡುಗೆಗೆ ಬಳಸಿದ ಎಣ್ಣೆಯನ್ನು ಮರುಬಳಕೆ ಮಾಡುವುದನ್ನು ತಡೆಯುವ ಉದ್ದೇಶದಿಂದ ಮೂರು ತಿಂಗಳೊಳಗೆ ಹೊಸ ಮೊಬೈಲ್ ಆಪ್ ಬಿಡುಗಡೆ ಮಾಡಲಾಗುವುದು ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಶೇಷವಾಗಿ ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಖರೀದಿಸುವ ಅಡುಗೆ ಎಣ್ಣೆಯ ಬಳಕೆಯ ಮೇಲೆ ನಿಗಾ ಇಡುವುದು ಈ ಆಪ್‌ನ ಉದ್ದೇಶವಾಗಿದೆ. ಅಡುಗೆ ಎಣ್ಣೆಯನ್ನು ಮರುಬಳಕೆ ಮಾಡುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ ಎಂದು ಹೇಳಿದ್ದಾರೆ.



ಮರುಬಳಕೆ ಮಾಡಿದ ಎಣ್ಣೆ ಆರೋಗ್ಯಕ್ಕೆ ಅಪಾಯಕಾರಿ. ಆರೋಗ್ಯ ಸಚಿವನಾಗಿ ಆಸ್ಪತ್ರೆಗಳ ಸಂಖ್ಯೆಯನ್ನು ಕಡಿಮೆ ಮಾಡುವುದು ನನ್ನ ಗುರಿ. ಜನರು ಅನಾರೋಗ್ಯಕ್ಕೆ ತುತ್ತಾಗುವುದನ್ನು ತಡೆಯಬೇಕು, ಇನ್ನು 10 ವರ್ಷಗಳಲ್ಲಿ ರೋಗಿಗಳ ಸಂಖ್ಯೆ ಕಡಿಮೆ ಮಾಡುವುದು, ಜನರ ಆರೋಗ್ಯ ಸುಧಾರಿಸುವುದೇ ನನ್ನ ಗುರಿ ಎಂದು ಹೇಳಿದರು.

ಎಣ್ಣೆ ಖರೀದಿ ಮತ್ತು ಬಳಕೆಗೆ ಸಂಬಂಧಿಸಿದ ದತ್ತಾಂಶವನ್ನು ಸಂಗ್ರಹಿಸಿ, ಅದರ ಮೇಲೆ ನಿಗಾ ಇಡುವುದು ಈ ಆಪ್‌ನ ಉದ್ದೇಶವಾಗಿದೆ. ಪ್ರಾಯೋಗಿಕ ಯೋಜನೆಯನ್ನು ಮೊದಲ ಹಂತದಲ್ಲಿ ಬೆಂಗಳೂರು, ಮೈಸೂರು, ಮಂಗಳೂರು ಮತ್ತು ಹುಬ್ಬಳ್ಳಿ ಸೇರಿದಂತೆ ನಾಲ್ಕು ನಗರಗಳಲ್ಲಿ ಆರಂಭಿಸಲಾಗುತ್ತದೆ ಎಂದರು.

ವಿಶ್ವ ಕನ್ನಡ ಸಮ್ಮೇಳನ: ಶವಪೆಟ್ಟಿಗೆಯ ಮೇಲೆ ಹೂವು ಸುರಿದಂತೆ – ಟಿ.ಎ.ನಾರಾಯಣಗೌಡ

ಬೆಂಗಳೂರು,ನ.12: ರಾಜ್ಯದಲ್ಲಿ ಕನ್ನಡಿಗರ ಬದುಕು ದುಸ್ತರವಾಗಿರುವಾಗ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ವಿಶ್ವ ಕನ್ನಡ ಸಮ್ಮೇಳನ' ನಡೆಸಲು ಮುಂದಾಗಿರುವುದು 'ಶವಪೆಟ್ಟಿಗೆಯ ಮೇಲೆ ಹೂವು ಸುರಿದಂತೆ' ಎಂದು ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕನ್ನಡಿಗರಿಗೆ ಉದ್ಯೋಗ, ಶಿಕ್ಷಣದಲ್ಲಿ ಅನ್ಯಾಯವಾಗುತ್ತಿದ್ದು, ಈ ಬೂಟಾಟಿಕೆಯ ಸಮ್ಮೇಳನ ಕೈಬಿಟ್ಟು ಕನ್ನಡಿಗರ ರಕ್ಷಣೆಗೆ ಕಾಯ್ದೆ ರೂಪಿಸುವಂತೆ ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು ಸರ್ಕಾರದ ನೀತಿಗಳ ವಿರುದ್ಧ ಹರಿಹಾಯ್ದಿದ್ದಾರೆ. ಸಮ್ಮೇಳನದ ನೇತೃತ್ವವನ್ನು ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಅವರಿಗೆ ವಹಿಸಿರುವುದನ್ನು ಕರವೇ ಕಟುವಾಗಿ ಟೀಕಿಸಿದೆ. ತ್ರಿಭಾಷಾ ನೀತಿ ಹಾಗೂ ಕನ್ನಡಿಗರ ಮೇಲೆ ಬಲವಂತದ ಹಿಂದಿ ಹೇರಿಕೆಯ ಪರವಾಗಿರುವ ಮೊಯ್ಲಿ ಸಮ್ಮೇಳನದಲ್ಲಿ ಏನು ಸಂದೇಶ ನೀಡಲಿದ್ದಾರೆ ಎಂದು ಪ್ರಶ್ನಿಸಿದ್ದಾರೆ. ರಾಜ್ಯದಲ್ಲಿ ದ್ವಿಭಾಷಾ ನೀತಿ ಜಾರಿಗೆ ತರುವಲ್ಲಿ ಸರ್ಕಾರ ವಿಫಲವಾಗಿದೆ. ಉತ್ತರದ ರಾಜ್ಯಗಳ ಮಕ್ಕಳು ಎರಡೇ ಭಾಷೆ ಕಲಿತು ತಮ್ಮ ಭವಿಷ್ಯಕ್ಕೆ ಪೂರಕವಾದ ಕೌಶಲ್ಯ ವೃದ್ಧಿಸಿಕೊಳ್ಳುತ್ತಿದ್ದರೆ, ನಮ್ಮ ಮಕ್ಕಳು ಮೂರನೇ ಭಾಷೆಯ ಹೊರೆ ಹೊರಬೇಕಾಗಿದೆ. ಸರ್ಕಾರದ ನೀತಿಗಳನ್ನು ಕನ್ನಡದ್ರೋಹಿಗಳೇ ನಿರ್ಧರಿಸುವಂತಹ ದುಸ್ಥಿತಿ ನಿರ್ಮಾಣವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅನಿಯಂತ್ರಿತ ವಲಸೆಯಿಂದಾಗಿ ಕರ್ನಾಟಕ ಕಸದ ತೊಟ್ಟಿಯಾಗುತ್ತಿದೆ. ರಾಜ್ಯದಲ್ಲಿ ಎಂಜಿನಿಯರಿಂಗ್ ಪದವೀಧರರ ಪೈಕಿ ಕೇವಲ ಶೇ.17ರಷ್ಟು ಮಂದಿಗೆ ಮಾತ್ರ ಉದ್ಯೋಗ ಸಿಗುತ್ತಿದ್ದು, ಉಳಿದ ಶೇ. 83ರಷ್ಟು ಯುವಕರು ನಿರುದ್ಯೋಗಿಗಳಾಗಿ ಬೀದಿ ಅಲೆಯುತ್ತಿದ್ದಾರೆ. ಐಟಿ–ಬಿಟಿ ಸೇರಿದಂತೆ ಖಾಸಗಿ ಸಂಸ್ಥೆಗಳು ಹೊರರಾಜ್ಯದವರಿಂದ ತುಂಬಿಹೋಗಿವೆ. ಸಾರ್ವಜನಿಕ ಹಾಗೂ ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಶೇ.80ರಷ್ಟು ಮೀಸಲಾತಿ ನೀಡುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಹೇಳಿದ್ದ ಸರ್ಕಾರ, ಈಗ ಕಾರ್ಪೊರೇಟ್ ಕುಳಗಳಿಗೆ ಹೆದರಿ ಕಾಯ್ದೆ ಜಾರಿ ಮಾಡದೆ ಹೇಡಿಯಂತೆ ಕುಳಿತಿದೆ. ಹೀಗಿದ್ದ ಮೇಲೆ 2028ರ ಚುನಾವಣೆಯಲ್ಲಿ ಯಾವ ಮುಖ ಹೊತ್ತು ಮತ ಕೇಳುತ್ತೀರಿ ಎಂದು ಪ್ರಶ್ನಿಸಿದ್ದಾರೆ.



ಕಾರ್ಮಿಕ ಇಲಾಖೆ ಖಾಸಗಿ ಸಂಸ್ಥೆಗಳಲ್ಲಿ ಕನ್ನಡಿಗರ ಉದ್ಯೋಗದ ಸಮೀಕ್ಷೆ ನಡೆಸಲು ಮುಂದಾದರೂ ಕಾರ್ಪೊರೇಟ್ ಬೆದರಿಕೆಯಿಂದ ಸರ್ಕಾರ ಅನುಮತಿ ನೀಡಲಿಲ್ಲ. ಕರವೇ ಕಾರ್ಯಕರ್ತರು ಐಟಿ–ಬಿಟಿ ಕಂಪನಿಗಳಿಗೆ ತೆರಳಿ ಲೆಕ್ಕ ಕೇಳಿದರೆ ಮುಖ್ಯಮಂತ್ರಿಗಳು ನಮ್ಮನ್ನೇ 'ಮಾರಲ್ ಪೊಲೀಸಿಂಗ್' ಮಾಡಬೇಡಿ ಎಂದು ಉಪದೇಶಿಸುತ್ತಾರೆ. ಈ ಸರ್ಕಾರವನ್ನು ಜನಪ್ರತಿನಿಧಿಗಳು ನಡೆಸುತ್ತಿದ್ದಾರೆಯೋ ಅಥವಾ ಕಾರ್ಪೊರೇಟ್ ಕಂಪನಿಗಳೋ ಎಂದು ಅವರು ಖಾರವಾಗಿ ಪ್ರಶ್ನಿಸಿದ್ದಾರೆ.

ಕೆಪಿಎಸ್ಸಿ ಭ್ರಷ್ಟಾಚಾರದ ಕೂಪವಾಗಿದ್ದು, ಅದನ್ನು ಎಲ್ಲಾ ರಾಜಕೀಯ ಪಕ್ಷಗಳು ಸೇರಿ ಸರ್ವನಾಶ ಮಾಡಿವೆ. ಪರೀಕ್ಷೆಗಳನ್ನು ನಂಬಿ ಕೊಂಡಿದ್ದ ಸಾವಿರಾರು ಅಭ್ಯರ್ಥಿಗಳ ಬದುಕು ನರಕವಾಗಿದೆ. ಇನ್ನೊಂದೆಡೆ, ಸಾವಿರಾರು ಸರ್ಕಾರಿ ಶಾಲೆಗಳನ್ನು ಮುಚ್ಚಿರುವ ಸರ್ಕಾರ, ಉಳಿದ ಶಾಲೆಗಳನ್ನು ಕನ್ನಡ ವಿರೋಧಿ ಖಾಸಗಿ ಸಂಸ್ಥೆಗಳಿಗೆ ಚಿನ್ನದ ತಟ್ಟೆಯಲ್ಲಿ ಇಟ್ಟು ಕೊಡುತ್ತಿದೆ. ಉತ್ತಮ ಫಲಿತಾಂಶ ನೀಡುತ್ತಿರುವ ಸರ್ಕಾರಿ ಶಿಕ್ಷಕರ ಮೇಲೆಯೇ ಗೂಬೆ ಕೂರಿಸುವ ಕುತಂತ್ರ ನಡೆಯುತ್ತಿದೆ ಎಂದು ಅವರು ಗಂಭೀರ ಆರೋಪ ಮಾಡಿದ್ದಾರೆ.

ಪಕ್ಕದ ಮಹಾರಾಷ್ಟ್ರ ಸರ್ಕಾರ ಮರಾಠಿ ಭಾಷಿಕರ ರಕ್ಷಣೆಗೆ ತೆಗೆದುಕೊಳ್ಳುತ್ತಿರುವ ಕ್ರಮಗಳನ್ನು ನೋಡಿಯಾದರೂ ರಾಜ್ಯ ಸರ್ಕಾರ ಕಲಿಯಬೇಕು. ಕೇವಲ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಸಮ್ಮೇಳನ ಮಾಡುವ ಬದಲು, ಕನ್ನಡಿಗರ ರಕ್ಷಣೆಗೆ ಕಾಯ್ದೆಗಳನ್ನು ತರಬೇಕು. ಕನ್ನಡಿಗರು ಮುಗ್ಧರು ಎಂದು ಭಾವಿಸಬೇಡಿ, ಅನಿಯಂತ್ರಿತ ವಲಸೆ ಹಾಗೂ ಸರ್ಕಾರದ ಕನ್ನಡಿಗ ವಿರೋಧಿ ನೀತಿಗಳ ವಿರುದ್ಧ ಶೀಘ್ರದಲ್ಲೇ ಜನ ದಂಗೆ ಏಳಲಿದ್ದಾರೆ. ಆ ಬೆಂಕಿಯನ್ನು ಆರಿಸುವ ಶಕ್ತಿ ಸರ್ಕಾರಕ್ಕೆ ಇರುವುದಿಲ್ಲ ಎಂದು ಟಿ.ಎ. ನಾರಾಯಣಗೌಡ ಎಚ್ಚರಿಸಿದ್ದಾರೆ.



ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲದ ವಿಧಾನಮಂಡಲ ಅಧಿವೇಶನಕ್ಕೂ ಮುನ್ನ, 2023ರ ವಿಧಾನಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿ, 'ಅಸೋಸಿಯೇಷನ್ "ಆಫ್ ಕರ್ನಾಟಕ ಯುನೈಟೆಡ್ ಕ್ರಿಶ್ಚಿಯನ್ ಫೋರಮ್ ಫಾರ್ ಹ್ಯೂಮನ್ ರೈಟ್ಸ್' ವತಿಯಿಂದ ಗುರುವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಲಾಯಿತು.

ಅಕ್ಕಿ ನಂತರ ಇದೀಗ ಜೋಳದ ಸರದಿ: ಶತಕದ ಗಡಿ ದಾಟಿದ ದರ

ಬೆಂಗಳೂರು, ನ.12: ಉತ್ತರ ಕರ್ನಾಟಕದ ಜನರ ದಿನನಿತ್ಯದ ಪ್ರಧಾನ ಆಹಾರ, ಊಟದ ತಟ್ಟೆಯಲ್ಲಿರುತ್ತಿದ್ದ ಜೋಳದ ಬೆಲೆ ಇದೀಗ ಮಾರುಕಟ್ಟೆಯಲ್ಲಿ ಇತಿಹಾಸದಲ್ಲೇ ಮೊದಲ ಬಾರಿಗೆ ಊಹಿಸಲಾಗದಂತೆ ಗಗನಕ್ಕೇರಿದ್ದು, ಕೆಜಿ ಜೋಳದ ದರ ಶತಕದ ಗಡಿ ದಾಟಿದೆ...!

ಅಕ್ಕಿ ನಂತರ ಇದೀಗ ಜೋಳದ ದರ ಹೆಚ್ಚಾಗುತ್ತಿದೆ. ಜೋಳಕ್ಕೆ ಚಿನ್ನದ ಬೆಲೆ ಬಂದಿದ್ದು, ರೈತರಲ್ಲಿ ಸಂತಸ ತಂದಿದೆ. ಆದರೆ ಗ್ರಾಹಕರಲ್ಲಿ ಕಣ್ಣೀರು ತರಿಸುತ್ತಿದೆ.

ಸತತ ಬರಗಾಲದ ಭೀಕರ ಪರಿಣಾಮವಾಗಿ ಇಳುವರಿ ತೀವ್ರವಾಗಿ ಕುಸಿದಿದ್ದು, ಚಿಲ್ಲರೆ ಮಾರುಕಟ್ಟೆಯಲ್ಲಿ ಬೆಲೆ ಕಿಲೋಗೆ 100ರ ಗಡಿ ದಾಟಿದೆ. ನಿತ್ಯದ ಊಟಕ್ಕೆ ಜೋಳವನ್ನೇ ಹೆಚ್ಚಾಗಿ ನೆಚ್ಚಿಕೊಂಡಿರುವ ಜನಸಾಮಾನ್ಯರು, ಬಡ ಹಾಗೂ ಮಧ್ಯಮ ವರ್ಗದವರ ಜೇಬಿಗೆ ಈ ದಿಢೀರ್ ಬೆಲೆ ಏರಿಕೆ ಭಾರಿ ಕತ್ತರಿ ಹಾಕಿದೆ.

ಪ್ರಮುಖವಾಗಿ ಬಾಗಲಕೋಟೆ ಸೇರಿದಂತೆ ಸುತ್ತಮುತ್ತಲಿನ ಉತ್ತರ ಕರ್ನಾಟಕದ ವಿವಿಧ ಭಾಗಗಳಲ್ಲಿ ಕೇವಲ 15 ದಿನಗಳ ಅಲ್ಪಾವಧಿಯಲ್ಲಿ ಕಿಲೋ ಜೋಳದ ಬೆಲೆ 60 ರಿಂದ ಏಕಾಏಕಿ



110ಕ್ಕೆ ಜಿಗಿದಿದೆ. ಈ ಪರಿಯ ದಿಢೀರ್ ಹಾಗೂ ದುಪ್ಪಟ್ಟು ಏರಿಕೆಯು ಬಡ ಮತ್ತು ಮಧ್ಯಮ ವರ್ಗದ ಗ್ರಾಹಕರ ದೈನಂದಿನ ಕಿರಾಣಿ ವೆಚ್ಚವನ್ನು ಸಂಪೂರ್ಣವಾಗಿ ಬುಡಮೇಲು ಮಾಡಿದೆ. ಅಕ್ಟೋಬರ್ ಅಂತ್ಯದಲ್ಲೇ ಬೆಲೆ ಏರಿಕೆಯ ಸ್ಪಷ್ಟ ಮುನ್ಸೂಚನೆ ಮಾರುಕಟ್ಟೆಯಲ್ಲಿ ಗೋಚರಿಸಿತ್ತು. ತಿಂಗಳ ಮೂರನೇ ವಾರದ ಹೊತ್ತಿಗೆ ಕಲಬುರಗಿ ಮಾರುಕಟ್ಟೆಯಲ್ಲಿ ಉತ್ಕೃಷ್ಟ ಗುಣಮಟ್ಟದ ಮಾಲ್ದಂಡಿ ತಳಿಯ ಜೋಳದ ಸಗಟು ದರವೇ ಕ್ವಿಂಟಾಲ್‌ಗೆ ಬರೋಬ್ಬರಿ 9,200 ತಲುಪಿತ್ತು. ಅಂದರೆ, ಸಗಟು ಮಾರುಕಟ್ಟೆಯಲ್ಲೇ ಇದರ ಮೌಲ್ಯ ಕಿಲೋಗೆ 92ರಷ್ಟಿತ್ತು. ಇದು ಸಾರ್ವಕಾಲಿಕ ದಾಖಲೆಯ ದರವಾಗಿದೆ ಎಂಬುದು ತಜ್ಞರ ಅಭಿಪ್ರಾಯ.

ರಾಜ್ಯದ ವಿವಿಧ ಎಪಿಎಂಸಿ ಮಾರುಕಟ್ಟೆಗಳ ದತ್ತಾಂಶಗಳ ಪ್ರಕಾರ, ಗುಣಮಟ್ಟ ಹಾಗೂ ತಳಿಯ ಆಧಾರದ ಮೇಲೆ ಜೋಳದ ಸಗಟು ಧಾರಣೆ ನಿತ್ಯವೂ ನಿರ್ಧಾರವಾಗುತ್ತಿದೆ.

ಆದರೆ, ಎಪಿಎಂಸಿಗಳಲ್ಲಿ ನಿಗದಿಯಾಗುವ ಈ ಸಗಟು ದರಗಳಿಗೂ ಹಾಗೂ ಚಿಲ್ಲರೆ ದರಗಳಿಗೂ ಭಾರಿ ವ್ಯತ್ಯಾಸವಿರುವುದನ್ನು ಸ್ಪಷ್ಟವಾಗಿ ಕಾಣಬಹುದು. ಸಗಟು ಮಾರುಕಟ್ಟೆಯಿಂದ ಹೊರಬರುವ ಧಾನ್ಯಕ್ಕೆ ಸಾರಿಗೆ ವೆಚ್ಚ, ಕಾರ್ಮಿಕರ ಕೂಲಿ, ಪ್ಯಾಕಿಂಗ್, ಗೋಡೌನ್ ನಿರ್ವಹಣೆ ಹಾಗೂ ಮಧ್ಯವರ್ತಿಗಳ ಲಾಭಾಂಶ ಸೇರಿಕೊಳ್ಳುತ್ತದೆ. ಇವೆಲ್ಲವೂ ಸೇರಿ ಅಂತಿಮವಾಗಿ ಚಿಲ್ಲರೆ ಮಾರುಕಟ್ಟೆಯಲ್ಲಿ ಬೆಲೆ 100–110 ರೂ.ಗಳ ಆಸುಪಾಸು ತಲುಪುತ್ತಿದೆ. ಮಾರುಕಟ್ಟೆ ವ್ಯವಸ್ಥೆಯ ಈ ವೆಚ್ಚಗಳು ಗ್ರಾಹಕರಿಗೆ ಹೊರೆಯಾಗಿವೆ.

ಖಾನಾವಳಿ ಉದ್ಯಮದ ಮೇಲೂ ಪರಿಣಾಮ



ದೈನಂದಿನ ಬಳಕೆಯ ಜೋಳದ ಬೆಲೆ ವಿಪರೀತವಾಗಿ ಹೆಚ್ಚಾಗಿರುವುದರಿಂದ, ಉತ್ತರ ಕರ್ನಾಟಕದಾದ್ಯಂತ ವ್ಯಾಪಿಸಿರುವ ಪ್ರತಿಷ್ಠಿತ ಹಾಗೂ ಸಾಮಾನ್ಯ ಖಾನಾವಳಿ ಉದ್ಯಮದ ಮೇಲೂ ಭಾರಿ ಪೆಟ್ಟುಬಿದ್ದಿದೆ. ಈ ಭಾಗದ ಜನರ ಬಹು ನೆಚ್ಚಿನ ಜೋಳದ ರೊಟ್ಟಿ ಊಟದ ದರ ಖಾನಾವಳಿಗಳಲ್ಲಿ ಶೀಘ್ರದಲ್ಲೇ ದುಬಾರಿಯಾಗುವ ಎಲ್ಲಾ ಲಕ್ಷಣಗಳು ನಿಚ್ಚಳವಾಗಿವೆ. ಕಚ್ಚಾ ಸಾಮಗ್ರಿಗಳ ಬೆಲೆ ದುಪ್ಪಟ್ಟಾಗಿರುವುದರಿಂದ, ಹೋಟೆಲ್ ಮಾಲೀಕರು ಅನಿವಾರ್ಯವಾಗಿ ಊಟದ ದರವನ್ನು ಹೆಚ್ಚಿಸುವ ಒತ್ತಡಕ್ಕೆ ಸಿಲುಕಿದ್ದಾರೆ. ಇದು ನಿತ್ಯ ಖಾನಾವಳಿಗಳನ್ನೇ ಅವಲಂಬಿಸಿರುವ ಕಾರ್ಮಿಕರು ಹಾಗೂ ವಿದ್ಯಾರ್ಥಿಗಳ ಜೇಬಿಗೂ ದೊಡ್ಡ ಮಟ್ಟದ ಕತ್ತರಿ ಹಾಕಲಿದೆ.

ಕಾಂಗ್ರೆಸ್ ಕೋಮುವಾದಿಯಲ್ಲ, ಎಲ್ಲ ವರ್ಗದ ಜನರ ಪಕ್ಷ: ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್

ಬೆಂಗಳೂರು, ನ.12: ಕಾಂಗ್ರೆಸ್ ಪಕ್ಷದಲ್ಲಿ ಕೋಮುವಾದಿಗಳೂ ಇದ್ದಾರೆ ಎಂಬ ಹೇಳಿಕೆಗೆ ಸ್ಪಷ್ಟನೆ ನೀಡಿರುವ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಕಾಂಗ್ರೆಸ್ ಎಲ್ಲಾ ವರ್ಗದ ಜನರ ಪಕ್ಷವಾಗಿದ್ದು, ಅದು ಕೋಮುವಾದಿ ಪಕ್ಷವಲ್ಲ ಎಂದು ಒತ್ತಿ ಹೇಳಿದ್ದಾರೆ.

ಮುಸ್ಲಿಂ ಸಂಘಟನೆಗಳು ಕಾಂಗ್ರೆಸ್ ವಿರುದ್ಧ ಹೋರಾಟ ನಡೆಸುತ್ತಿರುವ ವಿಚಾರ ಕುರಿತು ಮಾತನಾಡಿದ ಅವರು, "ಕಾಂಗ್ರೆಸ್ ಪಕ್ಷದಲ್ಲಿ ಎಲ್ಲರೂ ಇದ್ದಾರೆ – ಸೋಶಿಯಲ್, ಡೆಮಾಕ್ರಟಿಕ್ ಮತ್ತು ಕೋಮುವಾದಿಗಳೂ ಇದ್ದಾರೆ. ಎಲ್ಲರೂ ಇದ್ದಾರೆ," ಎಂದರು.



ಕಾಂಗ್ರೆಸ್ ಧರ್ಮ ಮತ್ತು ಜಾತಿಯನ್ನು ನೋಡುವುದಿಲ್ಲ ಎಂದು ಸ್ಪಷ್ಟಪಡಿಸಿದ ಅವರು, "ಅವರವರ ಅನಿಸಿಕೆಗಳನ್ನು ಹೇಳಬಹುದು. ನಾವು ಎಲ್ಲರ ಅನಿಸಿಕೆಗಳನ್ನು ಆಲಿಸುತ್ತೇವೆ. ಆದರೆ ನಿರ್ಣಯವನ್ನು ಪಕ್ಷವೇ ತೆಗೆದುಕೊಳ್ಳುತ್ತದೆ,". "ನಮ್ಮಲ್ಲಿ ಕೆಲವು ಸದಸ್ಯರು ಕೋಮುವಾದಿಗಳು ಇರಬಹುದು. ಆದರೆ ನಮ್ಮ ಪಕ್ಷವೇ ಕೋಮುವಾದಿಗಳ ಪಕ್ಷ ಅಲ್ಲ. ಬಿಜೆಪಿಯವರಂತೆ ಪಕ್ಷವೇ ಕೋಮುವಾದಿ ಅಲ್ಲ," ಎಂದು ಸ್ಪಷ್ಟಪಡಿಸಿದರು.

ಸುಳ್ಳು ಹೇಳುವವರು ತಮ್ಮ ಪಕ್ಷದಲ್ಲಿ ಇಲ್ಲ ಎಂದು ಹೇಳಿದ ಅವರು, ನಾವು ಕೊಟ್ಟ ಭರವಸೆಗಳನ್ನು ಈಡೇರಿಸುತ್ತೇವೆ ಎಂದು ತಿಳಿಸಿದ್ದಾರೆ. ಜೊತೆಗೆ, ಆಂಟಿ ಕನ್ವರ್ಷನ್ ಬಿಲ್ ಅನ್ನು ಕಾಂಗ್ರೆಸ್ ವಿರೋಧಿಸಿದೆ ಎಂದು ಅವರು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಲೆಫ್ಟಿಸ್ಟ್‌ಗಳು ಮತ್ತು ಕೋಮುವಾದಿಗಳೂ ಇದ್ದಾರೆ ಎಂದು ಅವರು ತಮ್ಮ ಹೇಳಿಕೆಯಲ್ಲಿ ಉಲ್ಲೇಖಿಸಿದರು.

ಶೇ.56 ಮೀಸಲಾತಿ ಹೆಚ್ಚಳವನ್ನು 9ನೇ ಶೆಡ್ಯೂಲ್‌ಗೆ ಸೇರಿಸಲು ವಿ.ಎಸ್. ಉಗ್ರಪ್ಪ ಒತ್ತಾಯ

ಬೆಂಗಳೂರು, ನ.12: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಿಸಿದ್ದೇವೆಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಆದರೆ ಶೇ.56 ಮೀಸಲಾತಿ ಹೆಚ್ಚಳ ವಿಚಾರವನ್ನು ಶೆಡ್ಯೂಲ್ 9 ಗೆ ಸೇರಿಸಿ ತಮಿಳುನಾಡು ಮಾದರಿಯಲ್ಲಿ ಆರ್ಟಿಕಲ್ 15, 16 ಕ್ಕೆ ತಿದ್ದುಪಡಿ ತರುವ ಮೂಲಕ ತಳ ಸಮುದಾಯಗಳ ಶೈಕ್ಷಣಿಕ, ಆರ್ಥಿಕ ಹಾಗೂ ಔದ್ಯೋಗಿಕ ಪ್ರಗತಿಗೆ ಪ್ರಧಾನಿ ನರೇಂದ್ರ ಮೋದಿ ನಾಂದಿ ಹಾಡಬೇಕು ಎಂದು ಮಾಜಿ ಸಂಸದ, ಕರ್ನಾಟಕ ನಾಯಕ ಸಮಾಜದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷ ವಿ.ಎಸ್. ಉಗ್ರಪ್ಪ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರವೇ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳು ಹಾಗೂ ಒಬಿಸಿ ಸಮುದಾಯಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪತ್ರ ಬರೆದಿದೆ. ಆದರೆ ಅವರದೇ ಸರ್ಕಾರ ಕಳೆದ 4 ವರ್ಷಗಳಿಂದ ಇದಕ್ಕೆ ಬೆಲೆ ನೀಡುತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿ ಇದರ ಬಗ್ಗೆ ಸ್ಪಂದಿಸುವ ಕೆಲಸವನ್ನು ಇದುವರೆಗೂ ಮಾಡಿಲ್ಲ. ಇದರ ನಡುವೆ ಕರ್ನಾಟಕ ಹೈಕೋರ್ಟ್ ಈ ಕಾಯ್ದೆಗೆ ಮರಣಶಾಸನ ಬರೆದಿದೆ ಎಂದು ಆಕ್ರೋಶ ಹೊರ ಹಾಕಿದರು.

ರಾಜ್ಯ ಸರ್ಕಾರ ಈಗ ಸುಪ್ರೀಂ ಕೋರ್ಟ್‌ನಲ್ಲಿ ಹೈಕೋರ್ಟ್ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದೆ.

ಹೀಗಾಗಿ ರಾಜ್ಯ ಸರ್ಕಾರಕ್ಕೆ ಅಭಿನಂದಿಸುತ್ತೇನೆ. ಆದರೆ ಇಷ್ಟಕ್ಕೆ ಪ್ರಯತ್ನ ಸಾಲದು, ದಯಮಾಡಿ ಪ್ರಧಾನಿ ನರೇಂದ್ರ ಮೋದಿ ಅವರ



ಬಳಿ ಸರ್ವಪಕ್ಷ ನಿಯೋಗ ಕೊಂಡೊಯ್ಯಬೇಕು ಎಂದು ಆಗ್ರಹಿಸಿದರು.

ಸುದ್ದಿ ಗೋಷ್ಠಿಯಲ್ಲಿ ರಾಯಚೂರು ಗೋಲಪಲ್ಲಿ ಸ್ವಾಮೀಜಿ, ಚಿತ್ರದುರ್ಗದ ಬಂಜಾರ ಸಮುದಾಯದ ಸೇವಾಲಾಲ್ ಸ್ವಾಮೀಜಿ, ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಕಾರ್ಯಾಧ್ಯಕ್ಷರಾದ ಎಂ. ನರಸಿಂಹಯ್ಯ, ಖಜಾಂಚಿ ಈ. ರಾಜಪ್ಪ, ಉಪಾಧ್ಯಕ್ಷ ತಾಯೂರ್ ಪ್ರಕಾಶ್, ಪ್ರಧಾನ ಕಾರ್ಯದರ್ಶಿ ತುಳಸೀರಾಂ, ಕಾರ್ಯದರ್ಶಿ ರಮೇಶ್ ಹಿರೇಜಂಬೂರು, ನಿವೃತ್ತ ಕುಲಪತಿ ಶ್ರೀರಾಮುಲು, ಅಲ್ಪ ಸಂಖ್ಯಾತರ ಮುಖಂಡರಾದ ಸೈಯದ್ ಮೂಸಾ, ಗೋಪಾಲ ಕೃಷ್ಣ ಮುಂತಾದವರು ಉಪಸ್ಥಿತರಿದ್ದರು.

ಮೋದಿಗೆ ಪತ್ರ:

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಾಳಜಿ ಇದ್ದರೆ ಕರ್ನಾಟಕದ 5 ಕೋಟಿ ಜನರ ಭಾವನೆಗಳಿಗೆ ಸ್ಪಂದಿಸುವ ಕೆಲಸವನ್ನು ಪದತಧಾನಿ ನರೇಂದ್ರ ಮೋದಿ ಮಾಡಬೇಕು. ಕರ್ನಾಟಕಕ್ಕೆ ನರೇಂದ್ರ ಮೋದಿ ಆಗಮಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಪ್ರಧಾನಿ ನರೇಂದ್ರ ಮೋದಿ, ಪ್ರತಿಪಕ್ಷ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರಿಗೂ ಪತ್ರ ಬರೆದಿದ್ದೇನೆ. ಈ ತ್ರಿಮೂರ್ತಿಗಳು ಜೊತೆಗೂಡಿ ಕರ್ನಾಟಕ ಮಾತ್ರವಲ್ಲ ಇಡೀ ದೇಶದ ಪರಿಶಿ ಸಮುದಾಯಗಳ ಹಿತ ಕಾಯುವ ಕೆಲಸ ಮಾಡಬೇಕು ಎಂದು ವಿ.ಎಸ್. ಉಗ್ರಪ್ಪ ಒತ್ತಾಯಿಸಿದರು.

ಪೊಲೀಸರ ಕಿರುಕುಳ, ಸ್ಪಂದಿಸದ ಮಾನವ ಹಕ್ಕುಗಳ ಆಯೋಗ, ವಕೀಲರಿಂದ ಮೋಸ, ದಿಕ್ಕಿಲ್ಲದ ಬದುಕು: ಅನಾವರಣಗೊಂಡ ನಾನಾ ಆಯಾಮಗಳು

ಕೈದಿಗಳ ಕುಟುಂಬಗಳ ಹಿರಿಯ ನಾಗರಿಕರ ಸಂಕಷ್ಟಗಳು ಸಾರ್ವಜನಿಕ ಸಭೆಯಲ್ಲಿ ಪ್ರತಿಧ್ವನಿ

ಬೆಂಗಳೂರು, ನ.11: ಸೇಂಟ್ ಜೋಸೆಫ್ ಕಾನೂನು ಕಾಲೇಜಿನ ಕಾನೂನು ನೆರವು ಕೋಶದ ಸಹಯೋಗದಲ್ಲಿ 'ನ್ಯಾಯಕ್ಕಾಗಿ ಕೈದಿಗಳ ಕುಟುಂಬಗಳ ಸಂಘ' – ಎಪಿಎಫ್‌ಜೆ, ಪ್ರಾರಂಭ ಸಂಪನ್ಮೂಲ ಕೇಂದ್ರಗಳು ವಿಚಾರಣೆ ಬಾಕಿ ಇರುವ ಕೈದಿಗಳ ಮನೆಯ ಹಿರಿಯ ನಾಗರಿಕರ ದಯನೀಯ ಪರಿಸ್ಥಿತಿ ಕುರಿತು ನಗರದಲ್ಲಿಂದು ಬಹಿರಂಗ ವಿಚಾರಣೆ ಆಯೋಜಿಸಿತ್ತು.



ಪ್ರೆಸ್ ಕ್ಲಬ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 14ಕ್ಕೂ ಅಧಿಕ ಕುಟುಂಬಗಳ ಹಿರಿಯ ನಾಗರಿಕರು ತಾವು ಅನುಭವಿಸುತ್ತಿರುವ ಸಂಕಷ್ಟ, ಪೊಲೀಸರ ಕಿರುಕುಳ, ವಕೀಲರಿಂದಾಗುತ್ತಿರುವ ಮೋಸ, ಪಿಂಚಣಿ ರದ್ದತಿ, ಆರೋಗ್ಯ ಸಮಸ್ಯೆಗಳು, ದೈಹಿಕ ನ್ಯೂನತೆ, ಆರ್ಥಿಕ ದುಸ್ಥಿತಿ ಮತ್ತಿತರ ಸಮಸ್ಯೆಗಳ ಕುರಿತು ತಮ್ಮ ನೋವು ಹಂಚಿಕೊಂಡರು.

ಪೊಲೀಸರ ನಿರಂತರ ಕಿರುಕುಳದಿಂದ ವಿಚಾರಣಾಧೀನ ಕೈದಿಗಳು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳ ಬಗ್ಗೆಯೂ ಹಿರಿಯ ನಾಗಕರು ಪ್ರಸ್ತಾಪಿಸಿದರು.

ಪೊಲೀಸರ ಕಿರುಕುಳ ಮತ್ತು ದೌರ್ಜನ್ಯ: ಕೈದಿಗಳ ಕುಟುಂಬದ ಹಿರಿಯರಿಗೆ ಹಾಗೂ ವೃದ್ಧರಿಗೆ ಪೊಲೀಸರಿಂದ ನಿರಂತರ ಬೆದರಿಕೆ, ಕೆಟ್ಟ ಭಾಷೆ ಬಳಕೆ ಮತ್ತು ದೈಹಿಕ ಹಲ್ಲೆಗಳಾಗುತ್ತಿರುವುದನ್ನು ಕೆಲವರು ಕಣ್ಣೀರಿಡುತ್ತಾ ವಿವರಿಸಿದರು. ಕೆಲ ಪ್ರಕರಣಗಳಲ್ಲಿ ಕಿರುಕುಳ ತಾಳಲಾರದೆ ವಿಚಾರಣಾಧೀನ ಕೈದಿಗಳು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆಯೂ ಪ್ರಸ್ತಾಪವಾಯಿತು.

ಆರ್ಥಿಕ ಹಾಗೂ ಆರೋಗ್ಯ ಸಮಸ್ಯೆಗಳು: ಮನೆಯ ಮುಖ್ಯಸ್ಥರು ಜೈಲಿನಲ್ಲಿದ್ದಾಗ, 60–70 ವರ್ಷ ವಯಸ್ಸಿನ ವೃದ್ಧ ತಂದೆ–ತಾಯಿ ಅಥವಾ ಅಜ್ಜ–ಅಜ್ಜಿಯರು ಅನಾರೋಗ್ಯದ ನಡುವೆಯೂ ಮನೆ ಕೆಲಸ, ಕಟ್ಟಡ ಕೆಲಸ ಮಾಡಿ ಬದುಕು ಸಾಗಿಸಬೇಕಾದ ದಯನೀಯ ಪರಿಸ್ಥಿತಿ ಇದೆ. ಪಿಂಚಣಿ ಇಲ್ಲದಿರುವುದು, ಔಷಧಿ ಮತ್ತು ವಕೀಲರ ಖರ್ಚಿಗೆ ಹಣವಿಲ್ಲದೆ ಪರದಾಡುತ್ತಿರುವುದು ಕಂಡುಬಂದಿದೆ.

ವಕೀಲರಿಂದ ಹಾಗೂ ವ್ಯವಸ್ಥೆಯಿಂದ ಮೋಸ: ಕಾನೂನು ಹೋರಾಟಕ್ಕೆ ನೆರವಾಗಬೇಕಿದ್ದ ಕೆಲವು ವಕೀಲರು ಹಣ ಪಡೆದು ನ್ಯಾಯಾಲಯಕ್ಕೆ ಪಾವತಿಸದೆ ಮೋಸ ಮಾಡಿರುವುದು, ಮಾನವ ಹಕ್ಕುಗಳ ಆಯೋಗದಿಂದ ಸೂಕ್ತ ಸ್ಪಂದನೆ ಸಿಗದಿರುವುದು ಹಾಗೂ ಸಮಾಜದ ಕಡೆಯಿಂದ ಎದುರಾಗುವ ಅವಮಾನ ಗಳನ್ನು ಹಿರಿಯ ಜೀವಗಳು ಹಂಚಿಕೊಂಡವು.

ನೆರವಿನ ಹಸ್ತ: ಈ ಸಂಘಟನೆಗಳು ಇಲ್ಲಿಯವರೆಗೆ 360ಕ್ಕೂ ಅಧಿಕ ಪ್ರಕರಣಗಳನ್ನು ಗುರುತಿಸಿದ್ದು, ಸಂಕಷ್ಟದಲ್ಲಿರುವ ಕುಟುಂಬಗಳಿಗೆ ಕಾನೂನು ನೆರವು ನೀಡಲು ಮುಂದಾಗಿವೆ. ಈ ಸಭೆಯಲ್ಲಿ ಹಿರಿಯ ಪತ್ರಕರ್ತರು, ಕಾನೂನು ತಜ್ಞರು ಹಾಗೂ ವಿವಿಧ ಸಂಘಟನೆಗಳ ಪ್ರಮುಖರು ಉಪಸ್ಥಿತರಿದ್ದು, ಸಂವಿಧಾನಿಕ ಸಂಸ್ಥೆಗಳು ಹಾಗೂ ಸಮಾಜವು ಇಂತಹ ಕುಟುಂಬಗಳ ನೆರವಿಗೆ ಧಾವಿಸಬೇಕು ಎಂದು ಅಭಿಪ್ರಾಯಪಟ್ಟರು. ಇಂತಹ ಕುಟುಂಬಗಳ ನೆರವಿಗೆ ಸಂವಿಧಾನದ ವಿವಿಧ ಅಂಗ ಸಂಸ್ಥೆಗಳು, ಶಾಸನಬದ್ಧ ಸಂಸ್ಥೆಗಳು, ಮಾಧ್ಯಮ, ನಾಗರಿಕ ಸಮಾಜ ಧಾವಿಸಿದರೆ ಸಂಕಷ್ಟಗಳನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಬಹುದು ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಕಾರ್ಯಕ್ರಮದಲ್ಲಿ ಸೇಂಟ್ ಜೋಸೆಫ್ ಕಾನೂನು ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ರಾಜೇಂದ್ರ, ಎಪಿಎಫ್ಜೆ ಕಾರ್ಯದರ್ಶಿ ಧನುಷ್ ಬಾಬು, ಸಂಚಾಲಕರಾದ ತ್ರಿವೇಣಿ ಖಾನ್, ಚಂದ್ರಶ್ರೀ, ಸೇಂಟ್ ಜೋಸೆಫ್ಸ್ ನೆಲ್ಸನ್, ಪಾರಿವಾಳ ರವಿ ಕುಮಾರ್, ಧ್ಯಾನ್ ಪೊಣ್ಣಚ್ಚ, ರಮೇಶ್ ಅಭಿಮನ್ಯು, ರಾಘವೇಂದ್ರ ತೋಗರ್ಸಿ, ನ. ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೆಟ್ರೋ ಗುಲಾಬಿ ಮಾರ್ಗದ ನಿಲ್ದಾಣಗಳ ಹೆಸರು ಬದಲಾವಣೆಗೆ ಕೇಂದ್ರ ಅನುಮೋದನೆ

ಬೆಂಗಳೂರು, ನ.12: ಇದೇ ಶುಕ್ರವಾರ ಉದ್ಘಾಟನೆಗೊಂಡು, ಶನಿವಾರದಿಂದ (ನವೆಂಬರ್ 14) ಸಾರ್ವಜನಿಕ ಬಳಕೆಗೆ ಮುಕ್ತವಾಗುವ ನಮ್ಮ ಮೆಟ್ರೋ ಗುಲಾಬಿ ಮಾರ್ಗದ ಪ್ರಮುಖ ನಿಲ್ದಾಣಗಳ ಹೆಸರುಗಳನ್ನು ಬದಲಾವಣೆ ಮಾಡಿ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿಯವರು ಶುಕ್ರವಾರ ಬೆಂಗಳೂರಿಗೆ ಭೇಟಿ ನೀಡಿ, ಎಲಿವೇಟೆಡ್ ಕಾರಿಡಾರ್ ಕಾಳೇನ ಅಗ್ರಹಾರದಿಂದ ತಾವರೆಕೆರೆ ವರೆಗಿನ 7.5ಕಿಲೋ ಮೀಟರ್ ಮಾರ್ಗ ಉದ್ಘಾಟಿಸಲಿದ್ದಾರೆ.

ಐಐಎಂಬಿ ಮೆಟ್ರೋ ನಿಲ್ದಾಣದಲ್ಲಿ ಉದ್ಘಾಟನೆಗೆ ಎಲ್ಲ ಸಿದ್ಧತೆ ನಡೆದಿದೆ ಶನಿವಾರ ಪ್ರಯಾಣಿಕರ ಸಂಚಾರಕ್ಕೆ ಮಾರ್ಗ ಮುಕ್ತಗೊಳ್ಳಲಿದೆ.

ಇದೇ ಐಐಎಂಬಿ ನಿಲ್ದಾಣ ಸೇರಿದಂತೆ ಒಟ್ಟು ಮೂರು ನಿಲ್ದಾಣಗಳ ಹೆಸರು ಬದಲಾಯಿಸಿ ಕೇಂದ್ರ ಗೃಹ ಮತ್ತು ನಗರ ವ್ಯವಹಾರಗಳ ಸಚಿವಾಲಯ ಒಪ್ಪಿಗೆ ನೀಡಿದೆ. ಪಿಂಕ್ ಲೈನ್ ಎಲಿವೆಟೆಡ್ ಕೊನೆಗೊಳ್ಳುವ ತಾವರೆಕೆರೆ ಮೆಟ್ರೋ ನಿಲ್ದಾಣಕ್ಕೆ 'ಸುದ್ದಗುಂಟೆಪಾಳ್ಯ' ಜೆ.ಪಿ.ನಗರ 4ನೇ ಹಂತದ ನಿಲ್ದಾಣಕ್ಕೆ ಎನ್.ಎಸ್. ಪಾಳ್ಯ ಮತ್ತು ಐಐಎಂಬಿ ನೆಟ್ರೇ ನಿಲ್ದಾಣವನ್ನು ಬಿಳೇಕಹಳ್ಳಿ–



ಐಐಎಂಬಿ ಎಂದು ಮರುನಾಮಕರಣ ಮಾಡಿದ್ದಾಗಿ ಕೇಂದ್ರ ಸಚಿವಾಲಯ ಬುಧವಾರ ತಿಳಿಸಿದೆ.

ಸ್ಥಳೀಯರು ಈಗಾಗಲೇ ಈ ಮಾರ್ಗದ ಈ ಮೂರು ನಿಲ್ದಾಣಗಳ ಹೆಸರುಗಳನ್ನು ಬದಲಾಯಿಸುವ, ಬೇರೆ ಹೆಸರು ಇಡುವಂತೆ ಒತ್ತಾಯಿಸಿದ್ದರು. ಸ್ಥಳೀಯರ ಒತ್ತಾಯದ ಮೇರೆಗೆ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಕೇಂದ್ರ ಸಚಿವಾಲಯ ಮಾಹಿತಿ ನೀಡಿದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಚಿವ ರಾಮಲಿಂಗಾರೆಡ್ಡಿ, ಶಾಸಕ ಸತೀಶ್ ರೆಡ್ಡಿ ಮತ್ತು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರ ಉಪಸ್ಥಿತಿಯಲ್ಲಿ ಮೆಟ್ರೋ ನಿಲ್ದಾಣಗಳ ಹೆಸರು ಬದಲಾವಣೆ ಮಾಡಲಾಗಿದೆ. ಪ್ರಧಾನಿ ಉದ್ಘಾಟಿಸಲಿರುವ ಈ 7.5 ಕಿ.ಮೀ. ಉದ್ದದ ಮಾರ್ಗದಲ್ಲಿ ಒಟ್ಟು ಆರು ಮೆಟ್ರೊ ನಿಲ್ದಾಣಗಳು ಬರುತ್ತವೆ. ಈ ಮಾರ್ಗವು ಸಂಚಾರ ಮುಕ್ತಗೊಳ್ಳುತ್ತಿದ್ದಂತೆ ಬೆಂಗಳೂರು ಮೆಟ್ರೋ ಜಾಲವು 100 ಕಿಮೀ ದಾಟಲಿದೆ. ಮುಂದೆ ಎರಡನೇ ಹಂತದಲ್ಲಿ 13.5 ಕಿಲೋ ಮೀಟರ್ ಭೂಗತ ಪಿಂಕ್ ಲೈನ್ ಮಾರ್ಗದಲ್ಲಿ ಇದೇ ವರ್ಷಾಂತ್ಯಕ್ಕೆ ಟ್ರಯಲ್ ರನ್ ನಡೆಸಿ, 2027ರ ಆರಂಭಿಕ ತಿಂಗಳಲ್ಲಿ ಉದ್ಘಾಟನೆ ಮಾಡಲು ಪ್ಲ್ಯಾನ್ ಮಾಡಿಕೊಳ್ಳಲಾಗಿದೆ ಎಂದು ಬಿಎಂಆರ್‌ಸಿಎಲ್ ಮೂಲಗಳು ತಿಳಿಸಿವೆ.

ಕರ್ತವ್ಯನಿರತ ಸರ್ಕಾರಿ ಆಸ್ಪತ್ರೆ ವೈದ್ಯರು, ಸಿಬ್ಬಂದಿಗೆ ಕಡ್ಡಾಯಗೊಳಿಸಿ ಆರೋಗ್ಯ ಇಲಾಖೆ ಸೂಚನೆ

ರಾತ್ರಿ ವಾಸ್ತವ್ಯ ಖಾತರಿಗೆ ಕರ್ತವ್ಯ ಆಪ್ ಬಳಸಲು ಆದೇಶ

ಬೆಂಗಳೂರು, ನ.12: ರಾಜ್ಯದ ತಾಲ್ಲೂಕು ಆಸ್ಪತ್ರೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರು ಹಾಗೂ ಇತರೆ ಸಿಬ್ಬಂದಿ ತಾವು ಕರ್ತವ್ಯ ನಿರ್ವಹಿಸುವ ಕೇಂದ್ರದ ವ್ಯಾಪ್ತಿಯಲ್ಲಿಯೇ ವಾಸ್ತವ್ಯ ಹೂಡುವುದನ್ನು ಕಡ್ಡಾಯವಾಗಿ ಖಚಿತಪಡಿಸಿಕೊಳ್ಳಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಹತ್ವದ ಸೂಚನೆ ಹೊರಡಿಸಿದೆ.

ವೈದ್ಯರು ಮತ್ತು ಸಿಬ್ಬಂದಿಯ ರಾತ್ರಿ ವೇಳೆಯ ಹಾಜರಾತಿಯನ್ನು ಕರ್ತವ್ಯ ಆಪ್ ಮೂಲಕ ದಾಖಲಿಸುವುದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸು ವಂತೆ ಆದೇಶಿಸಿದೆ. ಈ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯವು ಸುತ್ತೋಲೆ ಹೊರಡಿಸಿದ್ದು, ರಾಜ್ಯದ ಎಲ್ಲಾ ತಾಲ್ಲೂಕು ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಇತರೆ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ವೈದ್ಯರು ಮತ್ತು ಸಿಬ್ಬಂದಿಗೆ ಈ ಸೂಚನೆ ಅನ್ವಯವಾಗಲಿದೆ.

ಸರ್ಕಾರದ ಆದೇಶದಂತೆ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿ ತಮಗೆ ನಿಯೋಜಿಸಿರುವ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಕೇಂದ್ರ ಸ್ಥಾನದಲ್ಲಿಯೇ ವಾಸವಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಈ ಉದ್ದೇಶದಿಂದ ನ.1ರಿಂದ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ರಾತ್ರಿ ವೇಳೆಯ ಹಾಜರಾತಿಯನ್ನು ಕರ್ತವ್ಯ ಆಪ್ ಮೂಲಕ ದಾಖಲಿಸುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ಹಲವು ಸೂಚನೆಗಳು

ವೈದ್ಯರು ಮತ್ತು ಸಿಬ್ಬಂದಿ ರಾತ್ರಿ ವೇಳೆಯಲ್ಲಿಯೂ ಕೇಂದ್ರ ಸ್ಥಾನದಲ್ಲಿ ಲಭ್ಯವಿರುವುದನ್ನು ಖಚಿತಪಡಿಸಲು ಹಲವು ಕ್ರಮಗಳನ್ನು ಸುತ್ತೋಲೆಯಲ್ಲಿ ಸೂಚಿಸಲಾಗಿದೆ. ಕರ್ತವ್ಯ ಆಪ್ ಮೂಲಕ ರಾತ್ರಿ ವೇಳೆಯ ಹಾಜರಾತಿಯನ್ನು ಕಡ್ಡಾಯವಾಗಿ ದಾಖಲಿಸಬೇಕು. ಕೇಂದ್ರ ಸ್ಥಾನದಲ್ಲಿ ವಾಸವಿರುವುದನ್ನು ದೃಢಪಡಿಸಲು ಸ್ಥಳಾಧಾರಿತ ಹಾಜರಾತಿ ವ್ಯವಸ್ಥೆಯನ್ನು ಬಳಸಬೇಕು. ವೈದ್ಯರು ಮತ್ತು ಸಿಬ್ಬಂದಿಯ ವಾಸ್ತವ್ಯ ಹಾಗೂ ಹಾಜರಾತಿ ವಿವರಗಳನ್ನು ಸಂಬಂಧ ಪಟ್ಟ ಅಧಿಕಾರಿಗಳು ಪರಿಶೀಲಿಸಬೇಕು. ಹಾಜರಾತಿ ದಾಖಲಿಸುವ ಪ್ರಕ್ರಿಯೆಯಲ್ಲಿ ಲೋಪವಾಗದಂತೆ ಮೇಲ್ವಿಚಾರಣೆ ನಡೆಸಬೇಕು ಎಂದು ತಾಕೀತು ಮಾಡಲಾಗಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ತಾಲ್ಲೂಕು ಆರೋಗ್ಯಾಧಿಕಾರಿಗಳು ಹಾಗೂ ಸಂಬಂಧಪಟ್ಟ ಆಡಳಿತಾಧಿಕಾರಿ ಗಳು ಈ ವ್ಯವಸ್ಥೆಯ ಅನುಷ್ಠಾನದ ಜವಾಬ್ದಾರಿ ವಹಿಸಬೇಕು. ವೈದ್ಯರು ಮತ್ತು ಸಿಬ್ಬಂದಿ ಕೇಂದ್ರ ಸ್ಥಾನದಲ್ಲಿಯೇ ವಾಸವಿರುವುದನ್ನು ಖಚಿತಪಡಿಸಿ ಕೊಳ್ಳುವುದರ ಜತೆಗೆ, ರಾತ್ರಿ ವೇಳೆಯ ಹಾಜರಾತಿ ದಾಖಲಿಸುವ ವ್ಯವಸ್ಥೆಯ ಮೇಲ್ವಿಚಾರಣೆ ನಡೆಸಬೇಕು ಎಂದು ಸೂಚಿಸಲಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿ ರಾತ್ರಿ ವೇಳೆಯಲ್ಲಿ ಲಭ್ಯವಿಲ್ಲ ಎಂಬ ಸಾರ್ವಜನಿಕ ದೂರುಗಳಿಗೆ ಕಡಿವಾಣ ಹಾಕುವುದು ಈ ಕ್ರಮದ ಪ್ರಮುಖ ಉದ್ದೇಶವಾಗಿದೆ. ತುರ್ತು ಆರೋಗ್ಯ ಸೇವೆಗಳ ಅಗತ್ಯವಿರುವ ಸಂದರ್ಭದಲ್ಲಿ ಜನರಿಗೆ ಸ್ಥಳೀಯವಾಗಿಯೇ ವೈದ್ಯಕೀಯ ನೆರವು ದೊರೆಯುವಂತೆ ಮಾಡುವುದು ಹಾಗೂ ಸರ್ಕಾರಿ ಆರೋಗ್ಯ ಸೇವೆಗಳ ಹೊಣೆಗಾರಿಕೆಯನ್ನು ಹೆಚ್ಚಿಸುವುದು ಇಲಾಖೆಯ ಆಶಯವಾಗಿದೆ.

ನ. 15 ರಂದು ರಾಜ್ಯಪಾಲೆ ಡಾ.ಸುಧಾ ಯಾದವ್ ಬಳ್ಳಾರಿ ಜಿಲ್ಲಾ ಪ್ರವಾಸ



ಬಳ್ಳಾರಿ, ನ.12: ಕರ್ನಾಟಕದ ರಾಜ್ಯಪಾಲರಾದ ಡಾ. ಸುಧಾ ಯಾದವ್ ಅವರು ನ. 15 ಮತ್ತು 16 ರಂದು ಬಳ್ಳಾರಿ ಜಿಲ್ಲೆಗೆ ಪ್ರವಾಸ ಕೈಗೊಳ್ಳಲಿದ್ದಾರೆ.

ನ. 15 ರಂದು ಸಂಜೆ 06.45 ಗಂಟೆಗೆ ಬಳ್ಳಾರಿಗೆ ಆಗಮಿಸುವರು. ಬಳಿಕ 07.30 ಗಂಟೆಗೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ವಿಶ್ವವಿದ್ಯಾಲಯದ ಸಿಬ್ಬಂದಿಯೊಂದಿಗೆ ಸಂವಾದ ನಡೆಸಿ, ರಾತ್ರಿ ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು.

ನ. 16 ರಂದು ಬೆಳಿಗ್ಗೆ 10.10 ಗಂಟೆಗೆ ಬಳ್ಳಾರಿ ನಗರದ ಕನಕ ದುರ್ಗಮ್ಮ ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆಯಲಿದ್ದಾರೆ.

ನಂತರ ಬೆಳಿಗ್ಗೆ 11 ಗಂಟೆಗೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯಕ್ಕೆ ಆಗಮಿಸಿ, ವಿಶ್ವವಿದ್ಯಾಲಯದಲ್ಲಿ ಡಿಜಿಟಲ್ ಮತ್ತು ಎಲ್.ಎಂ.ಎಸ್ ತರಗತಿ ಕೊಠಡಿಗಳನ್ನು ಉದ್ಘಾಟಿಸಿ, ಸೋಲಾರ್ ಗ್ರಿಡ್ ಅಳವಡಿಕೆಯನ್ನು ಲೋಕಾರ್ಪಣೆಗೊಳಿಸಲಿದ್ದಾರೆ.

ಬಳಿಕ ಬೆಳಿಗ್ಗೆ 11.30 ಗಂಟೆಗೆ ವಿಶ್ವವಿದ್ಯಾಲಯದ ಬಯಲು ರಂಗ ಮಂದಿರದಲ್ಲಿ ಜರುಗಲಿರುವ 14ನೇ ವಾರ್ಷಿಕ ಘಟಿಕೋತ್ಸವದಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 01.30 ಗಂಟೆಗೆ ಘಟಿಕೋತ್ಸವದ ಬಳಿಕ ಬಳ್ಳಾರಿಯಿಂದ ತುಮಕೂರಿಗೆ ಪ್ರಯಾಣ ಬೆಳೆಸಲಿದ್ದಾರೆ.



ಚಿಕ್ಕಮಗಳೂರಿನ ಸಮೀಪವಿರುವ ಈ ಜೌಗು ಪ್ರದೇಶದ ಸರೋವರ ಮತ್ತು ಕೆರೆಗಳಲ್ಲಿ ಚಳಿಗಾಲಕ್ಕೆ ವಲಸೆ ಬರುವ ಮೂರು ವಿಭಿನ್ನ ಜಾತಿಯ ಜಲಪಕ್ಷಿಗಳು ಕಂಡುಬಂದ ದೃಶ್ಯ.

ಉಸಿರಾಟದ ಸಮಸ್ಯೆಯಿಂದ ಬಳಲುತ್ತಿರುವ ಬಾಲಕಿಗೆ ಆಕ್ಸಿಜನ್ ಕಾನ್ಸಂಟ್ರೇಟರ್ ಕೊಡುಗೆ ನೀಡಿದ ಎಚ್‌ಡಿಕೆ



ರಾಮನಗರ, ನ.12: ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ಬಾಲಕಿಯೊಬ್ಬರಿಗೆ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರು 2.50 ಲಕ್ಷ ಮೌಲ್ಯದ ಆಕ್ಸಿಜನ್ ಕಾನ್ಸೆಂಟ್ರೇಟರ್ ಕೊಡಿಸಿದ್ದಾರೆ.

ರಾಮನಗರ ಜಿಲ್ಲೆಯ ಹಾರೋಹಳ್ಳಿ ತಾಲೂಕಿನ ಮರಳವಾಡಿ ಹೋಬಳಿಯ ಸುಂಡಘಟ್ಟ ಗ್ರಾಮದ ರಾಜಲಕ್ಷ್ಮಿ ಚಂದ್ರು ಅವರ ಪುತ್ರಿಯಾದ 14 ವರ್ಷದ ಕುಮಾರಿ ನವ್ಯಶ್ರೀ ಅವರನ್ನು ಗುರುವಾರ ಬೆಳಗ್ಗೆ ಬೆಂಗಳೂರಿನ ಜೆಪಿ ನಗರದ ತಮ್ಮ ನಿವಾಸಕ್ಕೆ ಕರೆಸಿಕೊಂಡ ಸಚಿವರು; ಆ ಬಾಲಕಿಗೆ ಆಕ್ಸಿಜನ್ ಕಾನ್ಸೆಂಟ್ರೇಟರ್ ಅನ್ನು ಹಸ್ತಾಂತರಿಸಿದರು.

ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಬಾಲಕಿಗೆ ಅತ್ಯುತ್ತಮ ಗುಣಮಟ್ಟದ ಆಕ್ಸಿಜನ್ ಕಾನ್ಸಂಟ್ರೇಟರ್ ಅನ್ನು ಬಳಸಬೇಕು ಎಂದು ವೈದ್ಯರು ಸಲಹೆ ಮಾಡಿದರು. ದುಬಾರಿಯಾದ ಈ ಉಪಕರಣವನ್ನು ಖರೀದಿಸಲು ಸಾಧ್ಯವಾಗದೆ ಬಾಲಕಿಯ ಪೋಷಕರು ಸಚಿವ ಕುಮಾರಸ್ವಾಮಿಯವರ ನೆರವನ್ನು ಕೇಳಿದ್ದರು.

ಕಳೆದ ಆಗಸ್ಟ್ 30ರಂದು ಜೆಪಿ ನಗರದ ನಿವಾಸದಲ್ಲಿ ಸಚಿವರನ್ನು ಭೇಟಿಯಾಗಿದ್ದ ಬಾಲಕಿಯ ಪೋಷಕರು ಈ ಬಗ್ಗೆ ಅಳಲನ್ನು ತೋಡಿಕೊಂಡಿದ್ದರು.

ಬಾಲಕಿಯ ಪೋಷಕರ ಮನವಿಗೆ ಓಗೊಟ್ಟ ಕೇಂದ್ರ ಸಚಿವರು, ತಕ್ಷಣವೇ ಮಗುವಿನ ಆರೋಗ್ಯಕ್ಕೆ ಸಂಬಂಧಿಸಿ ವೈದ್ಯರಿಂದ ಮಾಹಿತಿಯನ್ನು ಪಡೆದು ಕೊಂಡರು. ತಮ್ಮ ಸ್ವಂತ ಖರ್ಚಿನಲ್ಲಿ ಬಾಲಕಿಗೆ ಅತ್ಯಗತ್ಯವಾಗಿ ಬೇಕಾಗಿದ್ದ ಇಗೋಜೆನ್ ರೋವ್ 6 ಪೋರ್ಟಬಲ್ ಆಕ್ಸಿಜನ್ ಕಾನ್ಸೆಂಟ್ರೇಟರ್‌ನ್ನು ಖರೀದಿಸಿ ಆಕೆಯ ಪೋಷಕರಿಗೆ ಹಸ್ತಾಂತರಿಸಿದರು.

ತನ್ನ ಮನವಿಗೆ ಸ್ಪಂದಿಸಿದ ಕೇಂದ್ರ ಸಚಿವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದ ಬಾಲಕಿ ನವ್ಯಶ್ರೀ, ನಿಮ್ಮ ಆಶೀರ್ವಾದದಿಂದ ನನ್ನ ಆರೋಗ್ಯ ಚೆನ್ನಾಗಿ ಆಗುತ್ತದೆ ಎಂದು ಬಾವುಕಳಾಗಿ ಹೇಳಿದರು. ಸಂದರ್ಭದಲ್ಲಿ ಸಚಿವರು ಕೂಡ ಭಾವೋದ್ವೇಗಕ್ಕೆ ಒಳಗಾದರು.

ಕೃಷಿ ವಿವಿಯಲ್ಲಿ 75 ಪ್ರೊಫೆಸರ್ ಹುದ್ದೆಗಳಿಗೆ ಕೋಟಿ ಕೋಟಿ ಡೀಲ್ ಆರೋಪ: ತನಿಖೆಗೆ ಆದೇಶಿಸಿದ ಡಿ.ಸಿ

ರಾಯಚೂರು, ನ. 12: ರಾಯಚೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ 75 ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಮತ್ತೊಂದೆಡೆ ಈಶಾನ್ಯ ಪದವಿಧರ ಕ್ಷೇತ್ರದ ಪರಿಷತ್ ಚುನಾವಣೆ ನೀತಿಸಂಹಿತೆ ಮಧ್ಯೆಯೇ ನೇಮಕಾತಿ ಆದೇಶ ಮಾಡಿರುವ ಆರೋಪ ಕೇಳಿಬಂದಿದೆ. ಇದೇ ಕಾರಣಕ್ಕೆ ಇದೀಗ ಜಿಲ್ಲಾಧಿಕಾರಿ ಈ ಕುರಿತು ಸಮಗ್ರ ತನಿಖೆಗೆ ಆದೇಶಿಸಿದ್ದಾರೆ.



ರಾಯಚೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ 75 ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಅಭ್ಯರ್ಥಿಗಳಿಂದ ಹಣ ಪಡೆದು, ವ್ಯವಹಾರ ಮಾಡಿಕೊಂಡವರಿಗೆ ನೇಮಕಾತಿ ಮಾಡಲಾಗಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ವಿರೂಪಾಕ್ಷ ಆರೋಪಿಸಿದ್ದಾರೆ. ಒಬ್ಬೊಬ್ಬ ವಿದ್ಯಾರ್ಥಿಯಿಂದ ಲಕ್ಷಲಕ್ಷ ಪಡೆದು ಕೋಟಿಗಟ್ಟಲೇ ಅವ್ಯವಹಾರ ನಡೆಸಲಾಗಿದೆ ಅನ್ನೋದು ಹೋರಾಟಗಾರರ ಆರೋಪವಾಗಿದೆ.

ಹಣ ಕೊಟ್ಟು ವ್ಯವಹಾರ ಮಾಡಿಕೊಂಡಿರುವವರಿಗೆ ನೇಮಕಾತಿ ನೀಡಲಾಗಿದೆ ಅಂತ ಜೆಡಿಎಸ್ ಜಿಲ್ಲಾಧ್ಯಕ್ಷ ವಿರುಪಾಕ್ಷ ಆರೋಪಿಸಿದ್ದಾರೆ. ಸದ್ಯ ಸಂಚಲನಕ್ಕೆ ಕಾರಣವಾಗಿದೆ. ಇನ್ನು ಈ ಬೆನ್ನಲ್ಲೇ ರಾಯಚೂರು ಕೃಷಿ ವಿವಿ ಆಡಳಿತ ಮಂಡಳಿ ಮತ್ತೊಂದು ಎಡವಟ್ಟ ಮಾಡಿರುವ ಆರೋಪವೂ ಕೇಳಿಬಂದಿದೆ. ಈಶಾನ್ಯ ಪದವೀಧರರ ಕ್ಷೇತ್ರದ ಚುನಾವಣೆ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದ ಸಂದರ್ಭದಲ್ಲಿ ಅಂದರೆ ಅಕ್ಟೋಬರ್ 28ರಂದು ಏಕಾಏಕಿ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಆಡಳಿತ ಮಂಡಳಿ ನೇಮಕಾತಿ ಆದೇಶ ಹೊರಡಿಸಿದೆ ಎಂದು ಆರೋಪಿಸಲಾಗಿದೆ. ಆದೇಶ ಪ್ರತಿಯನ್ನು ಇ–ಮೇಲ್ ಮೂಲಕ ಕಳುಹಿಸಲಾಗಿದ್ದು, ಮತ್ತಷ್ಟು ಸಂಶಯಕ್ಕೆ ಕಾರಣವಾಗಿದೆ. ಇದು ಕೆಪಿಎಸ್ ಹಗರಣವನ್ನ ಮೀರಿಸುವ ಹಗರಣ ಎನ್ನುವ ಆರೋಪ ಕೇಳಿಬಂದಿದೆ.

ಜಿಲ್ಲಾಡಳಿತದ ಅಂಗಳಕ್ಕೆ: ಕೃಷಿ ವಿವಿ ನೇಮಕಾತಿಯಲ್ಲಿ ಅಕ್ರಮ ಆರೋಪ ಬಾರೀ ಸಂಚಲನಕ್ಕೆ ಕಾರಣವಾಗ್ತಿದ್ದಂತೆ, ಜಿಲ್ಲಾ ಉಸ್ತುವಾರಿ ಸಚಿವ ಅಜಯ್ ಸಿಂಗ್ ಹಾಗೂ ಜಿಲ್ಲಾಡಳಿತ ಅಲರ್ಟ್ ಆಗಿದೆ. ಈ ಪ್ರಕರಣ ಇದೀಗ ಜಿಲ್ಲಾಡಳಿತದ ಅಂಗಳ ತಲುಪಿದ್ದು, ರಾಯಚೂರು ಜಿಲ್ಲಾಧಿಕಾರಿ ಪೂವಿತಾ.ಎಸ್? ತನಿಖೆಗೆ ಆದೇಶಿಸಿದ್ದಾರೆ. ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ತನಿಖಾ ತಂಡ ರಚಿಸಿದ್ದಾರೆ. ಸಹಾಯಕ ಆಯುಕ್ತ ನಾಗೇಂದ್ರ ಕುಮಾರ್ ಬಾಬು ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಲಾಗಿದೆ. ನೇಮಕಾತಿ ಪ್ರಕ್ರಿಯೆ ಹಿನ್ನೆಲೆ, ಅನುಸರಿಸಲಾದ ನಿಯಮಗಳು ಮತ್ತು ಕಾರ್ಯವಿಧಾನಗಳು ಹಾಗೂ ನೇಮಕಾತಿಗೆ ಸಂಬಂಧಿಸಿದ ಅನುಮೋದನೆಗಳನ್ನು ಸಮಗ್ರವಾಗಿ ಪರಿಶೀಲಿಸಿ, ತನಿಖಾ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ.

ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಅಜಯ್ ಸಿಂಗ್ ಪ್ರತಿಕ್ರಿಯಿಸಿದ್ದು, ನೇಮಕಾತಿಯಲ್ಲಿ ಅಕ್ರಮ ನಡೆದಿದ್ದರೆ ಜಿಲ್ಲಾಡಳಿತದಿಂದ ತನಿಖೆ ನಡೆಸಲಾಗುತ್ತದೆ. ಚುನಾವಣೆಯ ಮಾದರಿ ನೀತಿಸಂಹಿತೆ ಜಾರಿಯಲ್ಲಿದ್ದ ಸಂದರ್ಭದಲ್ಲಿ ನೇಮಕಾತಿ ಆದೇಶ ಹೊರಡಿಸಿದ್ದರೆ, ಈ ಕುರಿತು ಕೃಷಿ ಇಲಾಖೆ ಕಾರ್ಯದರ್ಶಿಯಿಂದ ಮಾಹಿತಿ ಪಡೆಯಲಾಗುತ್ತದೆ. ನಿಯಮ ಉಲ್ಲಂಘನೆಯಾಗಿರುವುದು ಕಂಡುಬಂದರೆ ನೇಮಕಾತಿ ರದ್ದುಪಡಿಸುವಂತೆ ಪ್ರಸ್ತಾವನೆ ಸಲ್ಲಿಸಲಾಗುತ್ತದೆ ಎಂದು ಸಚಿವ ಡಾ.ಅಜಯ್ ಸಿಂಗ್ ಸ್ಪಷ್ಟಪಡಿಸಿದ್ದಾರೆ.

ಒಟ್ಟಿನಲ್ಲಿ ರಾಯಚೂರು ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ 75 ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಈಗ ತನಿಖೆ ಸುಳಿಗೆ ಸಿಲುಕಿದೆ. ಹಣದ ಡೀಲ್ ಆರೋಪದ ಸತ್ಯಾಸತ್ಯತೆ ಏನು? ಮಾದರಿ ನೀತಿ ಸಂಹಿತೆ ಉಲ್ಲಂಘನೆಯಾಗಿದೆಯೇ ಅನ್ನೋದು ಈಗ ಕುತೂಹಲಕ್ಕೆ ಕಾರಣವಾಗಿದ್ದು, ಸೂಕ್ತ ರೀತಿಯಲ್ಲಿ ತನಿಖೆ ನಡೆಯಬೇಕಿದೆ.

ಸ್ಟಿಂಗ್ ಆಪರೇಷನ್: ವಿಚಾರಣೆ ವೈಖರಿಗೆ ಕೃಪಾ ಆಳ್ವ ಅಸಮಾಧಾನ



ಬೆಂಗಳೂರು, ನ.12: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಸ್ಟಿಂಗ್ ಆಪರೇಷನ್ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರು ನಡೆಸುತ್ತಿರುವ ನಿರಂತರ ವಿಚಾರಣೆಗೆ ಕೃಪಾ ಆಳ್ವ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈಗಾಗಲೇ ಮೂರು ಬಾರಿ ಹೇಳಿಕೆ ದಾಖಲಿಸಿಕೊಂಡಿದ್ದರೂ ಮತ್ತೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿರುವುದಕ್ಕೆ ಸಿಸಿಬಿ ತನಿಖಾಧಿಕಾರಿ ರವಿ ವಿರುದ್ಧ ಅವರು ಗರಂ ಆಗಿದ್ದಾರೆ.

ನನ್ನದು ಯಾವುದೇ ತಪ್ಪಿಲ್ಲದಿದ್ದರೂ ಪದೇಪದೇ ಕರೆಸಿ ಕಿರುಕುಳ ನೀಡುತ್ತಿದ್ದೀರಿ, ಇನ್ನೆಷ್ಟು ಬಾರಿ ಹೇಳಿಕೆ ನೀಡಬೇಕು ಎಂದು ಪ್ರಶ್ನಿಸಿರುವ ಅವರು, ತನಿಖೆಯ ಉದ್ದೇಶವನ್ನು ಸ್ಪಷ್ಟಪಡಿಸುವಂತೆ ಅಧಿಕಾರಿಗಳನ್ನು ಆಗ್ರಹಿಸಿದ್ದಾರೆ.

ಪ್ರಕರಣದಲ್ಲಿ ಕೃಪಾ ಆಳ್ವ ಅವರ ಪಾತ್ರ ಮತ್ತು ಅವರಿಗೆ ತಿಳಿದಿರುವ ಮಾಹಿತಿಯನ್ನು ಕಲೆಹಾಕುವ ನಿಟ್ಟಿನಲ್ಲಿ ಈ ಹಿಂದೆ ಲುಕೌಟ್ ನೋಟಿಸ್ ಜಾರಿಗೊಳಿಸಲಾಗಿತ್ತು, ಆ ಬಳಿಕ ಅವರು ವಿಚಾರಣೆಗೆ ಹಾಜರಾಗಿದ್ದರು. ಆದರೆ, ಸಿಸಿಬಿ ಅಧಿಕಾರಿಗಳ ನಿರಂತರ ವಿಚಾರಣೆಯ ವೈಖರಿಯಿಂದ ಬೇಸತ್ತಿರುವ ಅವರು, "ನನ್ನ ಜೊತೆ ಖಾಸಗಿ ಮಾಧ್ಯಮದ ಪತ್ರಕರ್ತ ಹಾಗೂ ಮತ್ತೊಬ್ಬ ವ್ಯಕ್ತಿ ಬಂದಿದ್ದರು. ಆದರೆ, ಅವರು ವಿಡಿಯೋ ಚಿತ್ರೀಕರಣ ಮಾಡಿದ್ದಾರೆ ಎಂಬ ವಿಷಯವೇ ನನಗೆ ತಿಳಿದಿರಲಿಲ್ಲ" ಎಂದು ಸ್ಪಷ್ಟಪಡಿಸುವ ಮೂಲಕ ಪ್ರಕರಣಕ್ಕೆ ಹೊಸ ತಿರುವು ನೀಡಿದ್ದಾರೆ.

ಸೋನಿಯಾ ಗಾಂಧಿಯವರ ಬದುಕು ಎಲ್ಲರಿಗೂ ಸ್ಫೂರ್ತಿದಾಯಕ: ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ. ನ.12: ಭಾರತೀಯ ರಾಜಕೀಯದಲ್ಲಿ ತಮ್ಮದೇ ಆದ ವಿಶಿಷ್ಟ ನಾಯಕತ್ವದ ಛಾಪು ಮೂಡಿಸಿರುವ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕಿ ಸೋನಿಯಾ ಗಾಂಧಿಯವರ ಜೀವನ ಪಯಣವು ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಬ್ಬರಿಗೂ ಸ್ಫೂರ್ತಿದಾಯಕವಾಗಿದೆ ಎಂದು ದಾವಣಗೆರೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅಭಿಪ್ರಾಯ ಪಟ್ಟಿದ್ದಾರೆ.

ಸೋನಿಯಾ ಗಾಂಧಿಯವರ ಜೀವನ ಪಯಣವನ್ನು ಅನಾವರಣಗೊಳಿಸುವ ಬಿಲಾಂಗಿಂಗ್; ಎ ಜರ್ನಿ ಆಫ್ ಲವ್ ಪುಸ್ತಕವನ್ನು ಓದಿದ ನಂತರ ತಮ್ಮ ಅಭಿಪ್ರಾಯ ಹಂಚಿಕೊಂಡ ಅವರು, ಸೋನಿಯಾ ಗಾಂಧಿಯವರ ಬದುಕು ಕೇವಲ ರಾಜಕೀಯ ನಾಯಕತ್ವದ ಕಥೆಯಲ್ಲ. ಅದು ಪ್ರೀತಿ, ತ್ಯಾಗ, ಸಹನೆ, ಧೈರ್ಯ ಹಾಗೂ ಜನಸೇವೆಯ ಬದ್ಧತೆಯನ್ನು ಪ್ರತಿಬಿಂಬಿಸುವ ಅಪೂರ್ವ ಜೀವನ ಗಾಥೆಯಾಗಿದೆ ಎಂದು ತಿಳಿಸಿದ್ದಾರೆ.

ರಾಜಕೀಯ ಹಾಗೂ ವೈಯಕ್ತಿಕ ಬದುಕಿನಲ್ಲಿ ಎದುರಾದ ಅನೇಕ ಸವಾಲುಗಳ ನಡುವೆಯೂ ಸೋನಿಯಾ ಗಾಂಧಿಯವರು ಪ್ರದರ್ಶಿಸಿದ ದೃಢನಿಶ್ಚಯ, ದೂರದೃಷ್ಟಿ ಮತ್ತು ಜನಪರ ಕಾಳಜಿ ಅನುಕರಣೀಯವಾಗಿದೆ. ಕಠಿಣ ಸಂದರ್ಭಗಳಲ್ಲಿಯೂ ತಮ್ಮ ನಾಯಕತ್ವದ ಸಾಮರ್ಥ್ಯವನ್ನು ಸಾಬೀತುಪಡಿಸಿ, ದೇಶದ ರಾಜಕೀಯದಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ್ದಾರೆ ಎಂದು ಶ್ಲಾಘಿಸಿದ್ದಾರೆ.

ವಿಶೇಷವಾಗಿ ಮಹಿಳೆಯಾಗಿ ಹಲವು ಸವಾಲುಗಳನ್ನು ಎದುರಿಸಿ, ದೇಶದ ರಾಜಕೀಯದಲ್ಲಿ ಪ್ರಭಾವಶಾಲಿ ನಾಯಕತ್ವ ನೀಡಿರುವ ಸೋನಿಯಾ ಗಾಂಧಿಯವರ ಜೀವನ ಪಯಣವು ನನ್ನಂತಹ ಮಹಿಳಾ ಜನಪ್ರತಿನಿಧಿಗಳಿಗೆ ಸದಾ ಸ್ಫೂರ್ತಿಯ ಮೂಲವಾಗಿದೆ. ಅವರ ಧೈರ್ಯ, ತಾಳ್ಮೆ ಹಾಗೂ ಜನಸೇವೆಯ ಬದ್ಧತೆ ಮಹಿಳೆಯರು ಸಾರ್ವಜನಿಕ ಜೀವನದಲ್ಲಿ ಇನ್ನಷ್ಟು ಆತ್ಮವಿಶ್ವಾಸದಿಂದ ಮುನ್ನಡೆಯಲು ಪ್ರೇರಣೆಯಾಗಿದೆ ಎಂದು ಹೇಳಿದ್ದಾರೆ.

ಪ್ರೀತಿ, ಅಗಲಿಕೆ, ಬದುಕಿನ ಏಳುಬೀಳುಗಳು ಹಾಗೂ ತನ್ನತನದ ಹುಡುಕಾಟವನ್ನು ಒಳಗೊಂಡಿರುವ ಈ ಕೃತಿ ಜೀವನದ ಹಲವು ಆಯಾಮಗಳನ್ನು ಪರಿಚಯಿಸಲಿದೆ. ಸೋನಿಯಾ ಗಾಂಧಿಯವರ ವೈಯಕ್ತಿಕ ಅನುಭವಗಳು ಮತ್ತು ರಾಜಕೀಯ ಪಯಣವನ್ನು ತಿಳಿದುಕೊಳ್ಳಲು ಈ ಪುಸ್ತಕವನ್ನು ಓದಬೇಕು. ನಾನು ಕೂಡ ಪುಸ್ತಕ ಓದಿದ್ದೇನೆ ಎಂದು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಉಡಾನ್ ಯೋಜನೆ ಮುಕ್ತಾಯ: 3 ತಿಂಗಳು ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ವಿಮಾನ ಹಾರಾಟ ಇರಲ್ಲ: ನಂಜಯ್ಯನಮಠ

ಶಿವಮೊಗ್ಗ, ನ.12: ಉಡಾನ್ ಯೋಜನೆ ಮುಕ್ತಾಯವಾಗಿರುವುದ ರಿಂದ ಶಿವಮೊಗ್ಗದ ಕುವೆಂಪು ವಿಮಾನ ನಿಲ್ದಾಣದಲ್ಲಿ ಮುಂದಿನ ಮೂರು ತಿಂಗಳು ವಿಮಾನ ಹಾರಾಟ ಇರುವುದಿಲ್ಲ ಎಂದು ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ (ಕೆಎಸ್‌ಐಐಡಿಸಿ) ಅಧ್ಯಕ್ಷ ನಂಜಯ್ಯನ ಮಠ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ.21ರಿಂದ ವಿಮಾನ ಹಾರಾಟ ನಿಲ್ಲಲಿದೆ. 2026ಕ್ಕೆ ಉಡಾನ್ ಯೋಜನೆ ಮುಗಿಯಲಿದೆ. ಅದನ್ನು ಮುಂದುವರಿಸುವಂತೆ ನಮ್ಮ ರಾಜ್ಯದ ಅಧಿಕಾರಿಗಳು ದೆಹಲಿಯಲ್ಲಿ ಅಧಿಕಾರಿಗಳನ್ನು ಭೇಟಿ ಮಾಡಿದ್ದಾರೆ. ನಾನು ಸಹ ದೆಹಲಿಗೆ ಹೋಗಿ ವಿನಂತಿ ಮಾಡಿಕೊಂಡಿದ್ದೇನೆ. ಇದರಿಂದ ಶಿವಮೊಗ್ಗ ವಿಮಾನ ನಿಲ್ದಾಣದಿಂದ ಪುನಃ ವಿಮಾನ ಪ್ರಾರಂಭವಾಗಬೇಕಾದರೆ ಅಂದಾಜು ಕನಿಷ್ಠ ಮೂರು ತಿಂಗಳು ಬೇಕಾಗುತ್ತದೆ. ವಿಮಾನ ನಿಲ್ದಾಣವನ್ನು ಮತ್ತೆ ಸುಸ್ಥಿತಿಗೆ ತರಲು ಪ್ರಯತ್ನಿಸಲಾಗುತ್ತಿದೆ ಎಂದರು.

ವಿಮಾನಯಾನ ಪ್ರಾರಂಭಿಸಲು ನಾನು ಸಂಸದ ರಾಘವೇಂದ್ರ ಅವರನ್ನು ಸಂಪರ್ಕ ಮಾಡಿದ್ದೇನೆ. ಅವರದೇ ಸರ್ಕಾರ ಕೇಂದ್ರದಲ್ಲಿ ಇರುವುದರಿಂದ ಈ ವಿಚಾರವನ್ನು ಅವರ ಪ್ರಯತ್ನಕ್ಕೆ ಬಿಡಲಾಗಿದೆ. ಉಡಾನ್ ಯೋಜನೆ ಜಾರಿ ಮಾಡಲು ವಿನಂತಿಸಿಕೊಂಡಿದ್ದೇನೆ ಎಂದು ಹೇಳಿದರು.

ಉಡಾನ್ ಯೋಜನೆಯಲ್ಲಿ ಶೇ.80ರಷ್ಟು ಕೇಂದ್ರ, ಶೇ.20ರಷ್ಟು ರಾಜ್ಯ ಸರ್ಕಾರ ನೀಡುತ್ತದೆ. ರಾಜ್ಯ ಸರ್ಕಾರದ ಆರ್ಥಿಕ ನೀತಿಗಳ ಅನುಗುಣವಾಗಿ ನಡೆಸಬೇಕಾಗುತ್ತದೆ

ವಿಮಾನ ನಿಲ್ದಾಣದಲ್ಲಿ ಮೂರು ತಿಂಗಳುಗಳ ವಿಮಾನ ಹಾರಾಟ ನಿಲ್ಲಿಸಿದರೂ ಸಹ 80 ಮಂದಿ ನೌಕರರನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗಲಾಗುತ್ತದೆ. ಮೂರು ತಿಂಗಳುಗಳ ನಂತರ ಪುನಃ ವಿಮಾನಯಾನ ಪ್ರಾರಂಭ ವಾಗುವ ನಿರೀಕ್ಷೆ ಇದೆ. ಇವರಿಗೆ ಪ್ರತಿ ತಿಂಗಳು 95 ಲಕ್ಷ ರೂ. ಸಂಬಳ ನೀಡಲಾಗುತ್ತದೆ.

ಉಡಾನ್ ಯೋಜನೆಯಲ್ಲಿ ಶೇ.80ರಷ್ಟು ಕೇಂದ್ರ, ಶೇ.20ರಷ್ಟು ರಾಜ್ಯ ಸರ್ಕಾರ ನೀಡುತ್ತದೆ. ರಾಜ್ಯ ಸರ್ಕಾರದ ಆರ್ಥಿಕ ನೀತಿಗಳ ಅನುಗುಣವಾಗಿ ನಡೆಸಬೇಕಾಗುತ್ತದೆ ಎಂದು ನಂಜಯ್ಯನಮಠ್ ಸ್ಪಷ್ಟಪಡಿಸಿದರು. ನೈಟ್ ಲ್ಯಾಂಡಿಂಗ್ ಸಂಬಂಧ ಈಗಾಗಲೇ ಶೇ.95ರಷ್ಟು ಕಾಮಗಾರಿ ಮುಗಿದಿದೆ. ಇದರಿಂದ ಡಿಜಿಸಿಎ ಅವರು ಬಂದು ನೋಡಿ, ಅವರದ್ದೇ ಆದ ವಿಮಾನದ ಮೂಲಕ ಪರೀಕ್ಷೆ ನಡೆಸಿದ ನಂತರ ವರದಿ ನೀಡುತ್ತಾರೆ. ಅವರು ಕೊಟ್ಟ



ಸರ್ಟಿಫಿಕೇಟ್ ಬಳಿಕ ಲ್ಯಾಂಡಿಂಗ್ಗೆ ಅವಕಾಶ ನೀಡಲಾಗುತ್ತದೆ ಎಂದರು.

ಇದೇ ವೇಳೆ, ಬೆಂಗಳೂರು–ಶಿವಮೊಗ್ಗ ವಿಮಾನ ಹಾರಾಟವು ರಾಜ್ಯ ಸರ್ಕಾರ ವಿಜಿಎಫ್ ಯೋಜನೆಯಡಿ ಬರುತ್ತಿತ್ತು. ಇದಕ್ಕೆ ಹಣ ನೀಡಲು ರಾಜ್ಯ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶಿವಮೊಗ್ಗ ಏರ್ಪೋರ್ಟ್ ನಿರ್ದೇಶಕ ಶಂಮತ್, ಕೆಎಸ್‌ಐಐಡಿಸಿ ಡಿವೈಎಸ್ಪಿ ಚಂದ್ರಶೇಖರ್ ಹಾಜರಿದ್ದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆ, ವಿಶೇಷ ಯೋಜನೆ ರೂಪಿಸಿ ಅನುಷ್ಠಾನಗೊಳಿಸಿ: ಡಿ.ಸಿ ಇಕ್ರಮ್ ಶರೀಫ್



ಕಲಬುರಗಿ, ನ. 12: ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಬಡ, ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಮಕ್ಕಳ ಭವಿಷ್ಯ ರೂಪಿಸುವ ಮಹತ್ತರ ಜವಾಬ್ದಾರಿ ಶಿಕ್ಷಕರ ಮೇಲಿದೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶ ಕೇವಲ ಅಂಕಗಳ ದೃಷ್ಟಿಯಿಂದ ನೋಡದೆ, ಮಕ್ಕಳ ಬದುಕಿನಲ್ಲಿ ಬದಲಾವಣೆ ತರುವ ಉದ್ದೇಶದಿಂದ ಪ್ರತಿಯೊಬ್ಬ ಶಿಕ್ಷಕರು ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಸೂಚಿಸಿದ್ದಾರೆ.

ನಗರದಲ್ಲಿ ಅರವಿನ ಮನೆ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮಾರ್ಗದರ್ಶನದಲ್ಲಿ 2026–27ನೇ ಸಾಲಿನ ಎಸ್.ಎ.–1 (ಜಿಲ್ಲಾ ಮಟ್ಟದ) ಪರೀಕ್ಷೆಯ ಫಲಿತಾಂಶ ವಿಶ್ಲೇಷಣೆ ಹಾಗೂ ಮುಂದಿನ ಶೈಕ್ಷಣಿಕ ಕಾರ್ಯಯೋಜನೆ ಕುರಿತು ಸರ್ಕಾರಿ ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರ ಸಭೆಯಲ್ಲಿ ಮಾತನಾಡಿದರು.

ಸರ್ಕಾರಿ ನೌಕರರಿಗೆ ಮಾಸಿಕ ವೇತನದ ಭದ್ರತೆ ಇದೆ. ಆದರೆ ಸರ್ಕಾರಿ ಶಾಲೆಗಳಿಗೆ ಬರುವ ಬಹುತೇಕ ಮಕ್ಕಳು ಬಡವರು, ನಿರುದ್ಯೋಗಿಗಳು, ಗ್ರಾಮೀಣ ಹಾಗೂ ಅನಕ್ಷರಸ್ಥ ಕುಟುಂಬಗಳ ಹಿನ್ನೆಲೆಯಿಂದ ಬಂದವರಾಗಿರುತ್ತಾರೆ. ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಪಾಲಕರು ಸಾಕಷ್ಟು ಕನಸುಗಳನ್ನು ಕಟ್ಟಿಕೊಂಡಿರುತ್ತಾರೆ. ಆ ಕನಸುಗಳನ್ನು ನನಸು ಮಾಡುವ ಜವಾಬ್ದಾರಿ ಶಿಕ್ಷಕರ ಮೇಲಿದೆ.

ಜಿಲ್ಲಾ ಪಂಚಾಯತ್ ಸಿಇಓ ರಾಹುಲ್ ಸಂಕನೂರ್ ಮಾತನಾಡಿ, ವಿದ್ಯಾರ್ಥಿಗಳ ಕಲಿಕಾ ಮಟ್ಟ ಸುಧಾರಣೆ ಹಾಗೂ ಎಸ್.ಎಸ್.ಎಲ್.ಸಿ. ಫಲಿತಾಂಶ ಹೆಚ್ಚಳಕ್ಕಾಗಿ ಶಾಲಾ ಹಂತದಿಂದಲೇ ನಿರಂತರ ಮೇಲ್ವಿಚಾರಣೆ ಮತ್ತು ಪರಿಣಾಮಕಾರಿ ಕಾರ್ಯಯೋಜನೆ ಅನುಷ್ಠಾನಗೊಳಿಸಬೇಕು ಎಂದರು.

ಡಯಟ್ ಹಾಗೂ ಇತರಉಸ್ತುವಾರಿ ಅಧಿಕಾರಿಗಳು ಕಳೆದ ಒಂದು ವಾರದಲ್ಲಿ ಎಲ್ಲಾ ವಿಷಯಗಳ ವಿದ್ಯಾರ್ಥಿಗಳ ಮನೆಗೆಲಸವನ್ನು ಪರಿಶೀಲಿಸಬೇಕು. ಎಲ್ಲಾ ನೋಡಲ್ ಅಧಿಕಾರಿಗಳು ಪ್ರತಿ ವಾರ ಕಡ್ಡಾಯವಾಗಿ ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಪರಿಶೀಲಿಸಬೇಕು. 15 ದಿನಗಳಿಗೊಮ್ಮೆ ಘಟಕ ಪರೀಕ್ಷೆ ನಡೆಸಬೇಕು. ಈ ಪರೀಕ್ಷೆಗಳ ಫಲಿತಾಂಶ ಹಾಗೂ ಪ್ರಗತಿಯನ್ನು ತಾವು ಖುದ್ದಾಗಿ ಪರಿಶೀಲಿಸುವುದಾಗಿ ತಿಳಿಸಿದರು.

ಪ್ರಗತಿ ಪರಿಶೀಲನೆಗಾಗಿ ಪ್ರತಿ ತಿಂಗಳ ಮೊದಲನೇ ವಾರದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಎರಡನೇ ವಾರದಲ್ಲಿ ನೋಡಲ್ ಅಧಿಕಾರಿಗಳ ಸಭೆ ನಡೆಸಬೇಕು.ಪ್ರತಿದಿನ ಎರಡು ವಿಷಯಗಳಿಗೆ ಮನೆಗೆಲಸ ನೀಡಬೇಕು. ಇದರಲ್ಲಿ ಒಂದು ಭಾಷಾ ವಿಷಯ ಹಾಗೂ ಮತ್ತೊಂದು ಮುಖ್ಯ (ಕೋರ್) ವಿಷಯವಾಗಿರಬೇಕು. ಪ್ರತಿ ವಿಷಯಕ್ಕೆ ಮೂರು ಪ್ರಶ್ನೆಗಳಂತೆ ದಿನಕ್ಕೆ ಒಟ್ಟು ಆರು ಪ್ರಶ್ನೆಗಳನ್ನು ನೀಡಬೇಕು. ಇದರಲ್ಲಿ ಒಂದು ಪ್ರಶ್ನೆಯನ್ನು ಪ್ರಸ್ತುತ ಬೋಧಿಸುತ್ತಿರುವ ಪಾಠದಿಂದ ಹಾಗೂ ಎರಡು ಪ್ರಶ್ನೆಗಳನ್ನು ಹಿಂದಿನ ಪಾಸಿಂಗ್ ಪ್ಯಾಕೇಜ್‌ನಿಂದ ಆಯ್ಕೆ ಮಾಡಬೇಕು ಎಂದು ಸೂಚಿಸಿದರು.

ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಾಲೆಗಳ ಮೇಲ್ವಿಚಾರಣೆಗೆ ನೋಡಲ್ ಅಧಿಕಾರಿಗಳನ್ನು ನಿಯೋಜಿಸುವಂತೆ ಸೂಚಿಸಿದರು. 60 ರಿಂದ 100 ವಿದ್ಯಾರ್ಥಿಗಳಿರುವ ಶಾಲೆಗಳ ಪಟ್ಟಿಯನ್ನು ಸಿದ್ಧಪಡಿಸಬೇಕು.

ಇಂತಹ ಶಾಲೆಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳೇ ನೋಡಲ್ ಅಧಿಕಾರಿಗಳಾಗಿರುತ್ತಾರೆ. 100ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳಿಗೆ ಉಪನಿರ್ದೇಶಕರು (ಆಡಳಿತ) ಹಾಗೂ ಡಯಟ್ ಅಧಿಕಾರಿಗಳು ನೋಡಲ್ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.

ಕಡಿಮೆ ವಿದ್ಯಾರ್ಥಿಗಳಿರುವ ಹಾಗೂ ಫಲಿತಾಂಶ ಕುಸಿತ ಕಂಡಿರುವ ಶಾಲೆಗಳ ಬಗ್ಗೆ ವಿಶೇಷ ಗಮನ ಹರಿಸಬೇಕು. 60ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದು, ಕಳೆದ ಸಾಲಿನ ಮೊದಲ ಪರೀಕ್ಷೆಯಲ್ಲಿ ಶೇ.75ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ಶಾಲೆಗಳಿಗೆ ವಿಶೇಷ ನೋಡಲ್ ಅಧಿಕಾರಿಗಳನ್ನು ನಿಯೋಜಿಸಿ, ಕಲಿಕಾ ಪ್ರಗತಿ ಸುಧಾರಣೆಗೆ ಕ್ರಮಕೈಗೊಳ್ಳಬೇಕು ಎಂದರು.

58 ಕೋಟಿ ರೂ. ವೆಚ್ಚದಲ್ಲಿ ಕಲಬುರಗಿಯಲ್ಲಿ ಹೈಟೆಕ್ ಬಸ್ ನಿಲ್ದಾಣ

ಈಗಿರುವ ಕೇಂದ್ರ ಬಸ್‌ನಿಲ್ದಾಣವನ್ನು ನೆಲ ಸಮಗೊಳಿಸಿ ಹೊಸದಾಗಿ ನಿರ್ಮಾಣ: ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ್



ಕಲಬುರಗಿ, ನ.12: ಇಲ್ಲಿನ ಕೇಂದ್ರ ಬಸ್ ನಿಲ್ದಾಣವನ್ನು ನೆಲಸಮಗೊಳಿಸಿ 58 ಕೋ.ರೂ ವೆಚ್ಚದಲ್ಲಿ ಅತ್ಯಾಧುನಿಕ ಹೊಸ ಬಸ್ ನಿಲ್ದಾಣ ನಿರ್ಮಿಸಲು ಯೋಜನೆ ಹೊಂದಲಾಗಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣ ಕುಮಾರ್ ಎಂ.ವೈ. ಪಾಟೀಲ್ ತಿಳಿಸಿದರು.

ನಿಗಮದ ಕೇಂದ್ರ ಕಚೇರಿಯಲ್ಲಿ ನಿಗಮದ ಅಧ್ಯಕ್ಷರಾಗಿ ಮಾಡಲಾಗಿರುವ ಸಾಧನೆಗಳ ವಿವರಣೆ ನೀಡಲು ಕರೆಯಲಾದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಸ್ ನಿಲ್ದಾಣ ಬಹಳ ಹಳೆಯದಾಗಿದ್ದರಿಂದ ಹೊಸದಾದ ಬಸ್ ನಿಲ್ದಾಣ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ. ಅದರಂತೆ ನಿಗಮದ ಕೇಂದ್ರ ಕಚೇರಿಯನ್ನು 20 ಕೋ.ರೂ ವೆಚ್ಚದಲ್ಲಿ ಹೊಸದಾಗಿ ನಿರ್ಮಿಸಲಾಗುತ್ತಿದ್ದು, ಟೆಂಡರ್ ಸಹ ಕರೆಯಲಾಗಿದೆ. ಕಲಬುರಗಿ ನಗರ ಸಾರಿಗೆ ಬಸ್ ನಿಲ್ದಾಣ ಕಾಮಗಾರಿ ಪೂರ್ಣಕ್ಕೆ ಸಹ ಆದ್ಯತೆ ನೀಡಲಾಗುವುದು ಎಂದು ವಿವರಣೆ ನೀಡಿದರು.

ವರ್ಷದ ಅವಧಿಯಲ್ಲಿ ನಿಗಮದಲ್ಲಿ ಸಾಕಷ್ಟು ಸಾಧನೆಗಳನ್ನು ತೋರ 'ಲಾಗಿದ್ದು, ಪ್ರಮುಖವಾಗಿ ನಿಗಮಕ್ಕೆ ರಾಜ್ಯ ಸರ್ಕಾರ ಹಾಗೂ ಕೆಕೆಆರ್‌ಡಿಬಿ ಅನುದಾನದಲ್ಲಿ 400 ಬಸ್ ಗಳ ಖರೀದಿ ಮಾಡಲಾಗಿದ್ದು, ಅದೇ ತೆರನಾಗಿ 2026–27ನೇ ಸಾಲಿನಲ್ಲಿ ಸರ್ಕಾರದ ಆಯವ್ಯಯದಲ್ಲಿ ನಿಗಮಕ್ಕೆ 200 ಬಸ್ ಗಳ ಹಂಚಿಕೆ ಮಾಡಲಾಗಿದೆ. ಇವುಗಳನ್ನು ಪಡೆಯಲು ಶ್ರಮಿಸಲಾಗುವುದು. ಶೀಘ್ರದಲ್ಲಿ ನಿಗಮಕ್ಕೆ ಸೇರ್ಪಡೆಯಾಗಲಿದೆ. ಈ ಬಸ್‌ಗಳ ಸೇರ್ಪಡೆಯಾದ ನಂತರ ಬಸ್‌ಗಳ ಸಮಸ್ಯೆ ತಕ್ಕ ಮಟ್ಟಿಗೆ ದೂರಾಗಲಿದೆ ಎಂದರು.

ಕಲಬುರಗಿಯ 4 ಕಡೆ ಸ್ಯಾಟಲೈಟ್ ಬಸ್ ನಿಲ್ದಾಣ: ಜನದಟ್ಟಣೆ ತಪ್ಪಿಸಲು ಹಾಗೂ ಪ್ರಯಾಣಿಕರಿಗೆ ಅನುಕೂಲವಾಗಲು ಕಲಬುರಗಿ ಮಹಾನಗರದ ನಾಲ್ಕು ಕಡೆ ಸ್ಯಾಟಲೈಟ್ ಬಸ್ ನಿಲ್ದಾಣಗಳನ್ನು ನಿರ್ಮಿಸಲು ಸಹ ಮುಂದಾಗಿದ್ದು, ಈಗಾಗಲೇ ಗುಲ್ಬರ್ಗ ವಿವಿ ಆವರಣಲ್ಲಿ ಎರಡು ಎಕರೆ ಭೂಮಿ ನೀಡಲು ವಿವಿ ನಿರ್ಧರಿಸಿದೆ. ಅದೇ ತೆರನಾಗಿ ಆಳಂದ ರಸ್ತೆಯಲ್ಲಿ ಕೃಷಿ ಸಂಶೋಧನಾ ಕೇಂದ್ರದ 3 ಎಕರೆ ಭೂಮಿ ನಿಗಮಕ್ಕೆ ಹಾಗೂ ಜೇವರ್ಗಿ ರಸ್ತೆಯಲ್ಲಿ ಬೀಜ ನಿಗಮಕ್ಕೆ ಸೇರಿದ 2 ಎಕರೆ ಭೂಮಿ ಕೇಳಲಾಗಿದೆ. ಮತ್ತು ನೆಹರು ಗಂಜ್‌ನಲ್ಲಿ ಸ್ಯಾಟಲೈಟ್ ಬಸ್ ನಿಲ್ದಾಣಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಅಫಜಲಪುರದಲ್ಲಿನ ತಹಶೀಲ್ದಾರ ಕಚೇರಿ ಮಿನಿ ವಿಧಾನಸೌಧಕ್ಕೆ ಸ್ಥಳಾಂತರವಾದ ನಂತರ ತಹಶೀಲ್ದಾರ ಕಚೇರಿ ಕಟ್ಟಡ ನೆಲಸಮಗೊಳಿಸಿ 20 ಕೋ.ರೂ ವೆಚ್ಚದಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಿಸಲಾಗುವುದು. ಅದೇ ತೆರನಾಗಿ ವಾಡಿಯಲ್ಲಿ 4 ಎಕರೆ ಭೂಮಿಯಲ್ಲಿ ಹೊಸದಾದ ಬಸ್ ನಿಲ್ದಾಣ ಜತೆಗೆ ಗಂಗಾವತಿ, ಕಾರಟಗಿಯಲ್ಲಿ ಕೊಪ್ಪಳ ಜಿಲ್ಲೆಯಲ್ಲಿ 15 ನೂತನ ಬಸ್ ನಿಲ್ದಾಣ, ಮಾನವಿಯಲ್ಲಿ ಎಕ್ಸಪ್ರೆಸ್ ವೇ ಬಸ್ ನಿಲ್ದಾಣ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಎಂದು ಅರುಣ ಕುಮಾರ್ ತಿಳಿಸಿದರು.

ಉತ್ತರ ಪ್ರದೇಶ ಚುನಾವಣೆಗೆ ಓವೈಸಿ–ಚಂದ್ರಶೇಖರ್ ಆಜಾದ್ ಮೈತ್ರಿ

403 ಕ್ಷೇತ್ರಗಳಲ್ಲೂ ಸ್ಪರ್ಧೆಗೆ ನಿರ್ಧಾರ; ಚಂದ್ರಶೇಖರ್ ಆಜಾದ್ ಮುಖ್ಯಮಂತ್ರಿ ಅಭ್ಯರ್ಥಿ



ಲಖನೌ,ನ.12: 2027ರಲ್ಲಿ ನಡೆಯಲಿರುವ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗೆ ಮುನ್ನ ರಾಜಕೀಯ ಸಮೀಕರಣ ಬದಲಾಗುತ್ತಿದೆ. ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಹಾಗೂ ಆಜಾದ್ ಸಮಾಜ ಪಕ್ಷ (ಕಾನ್ಶಿರಾಮ್) ಅಧ್ಯಕ್ಷ, ಸಂಸದ ಚಂದ್ರಶೇಖರ್ ಆಜಾದ್ ಕೈಜೋಡಿಸಿದ್ದು, 'ಸಾಮಾಜಿಕ ಪರಿವರ್ತನ ಮೋರ್ಚಾ' ಹೆಸರಿನಲ್ಲಿ ಹೊಸ ರಾಜಕೀಯ ಮೈತ್ರಿಯನ್ನು ಘೋಷಿಸಿದ್ದಾರೆ.

ಉತ್ತರ ಪ್ರದೇಶದ ಎಲ್ಲ 403 ವಿಧಾನಸಭಾ ಕ್ಷೇತ್ರಗಳಲ್ಲೂ ಮೈತ್ರಿಕೂಟದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ನಿರ್ಧರಿಸಲಾಗಿದ್ದು, ಚಂದ್ರಶೇಖರ್ ಆಜಾದ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸಲಾಗಿದೆ.

ಗುರುವಾರ ಲಖನೌದಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮೈತ್ರಿಯನ್ನು ಪ್ರಕಟಿಸಿದ ಓವೈಸಿ, ಉತ್ತರ ಪ್ರದೇಶದಲ್ಲಿ ಭಾರತೀಯ ಜನತಾ ಪಕ್ಷ ಸತತ ಮೂರನೇ ಬಾರಿಗೆ ಅಧಿಕಾರಕ್ಕೆ ಬರುವುದನ್ನು ತಡೆಯುವುದು ಮೈತ್ರಿಯ ಪ್ರಮುಖ ಗುರಿಯಾಗಿದೆ ಎಂದು ಹೇಳಿದರು. ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಹಾಗೂ ಶೋಷಿತ ಸಮುದಾಯಗಳ ಸಮಸ್ಯೆಗಳಿಗೆ ಆದ್ಯತೆ ನೀಡುವ ಬಲಿಷ್ಠ ರಾಜಕೀಯ ಪರ್ಯಾಯವಾಗಿ ಮೈತ್ರಿ ರೂಪುಗೊಳ್ಳಲಿದೆ ಎಂದು ತಿಳಿಸಿದರು.

ಚಂದ್ರಶೇಖರ್ ಆಜಾದ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸಿದ ಓವೈಸಿ, ಆಜಾದ್ ಮುಖ್ಯಮಂತ್ರಿಯಾದಾಗ ಮಾತ್ರ ತಾವು ಉದ್ದೇಶಿಸಿರುವ ಸಾಮಾಜಿಕ ಬದಲಾವಣೆಯ ಗುರಿಗಳನ್ನು ಸಾಧಿಸಲು ಸಾಧ್ಯವಾಗಲಿದೆ ಎಂದು ಹೇಳಿದರು. ಮೈತ್ರಿಯ ಯಶಸ್ಸು ಉತ್ತರ ಪ್ರದೇಶದ ಜನರ ಯಶಸ್ಸಾಗಲಿದೆ. ರಾಜ್ಯದ ಜನರು ಚಂದ್ರಶೇಖರ್ ಆಜಾದ್ ಅವರೊಂದಿಗೆ ಕೈಜೋಡಿಸಿ ಉತ್ತಮ ಭವಿಷ್ಯ ನಿರ್ಮಾಣಕ್ಕೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ರಾಜ್ಯದ ಯುವಜನರು ನಿರುದ್ಯೋಗ ಸಮಸ್ಯೆಯಿಂದ ಬಳಲುತ್ತಿದ್ದಾರೆ. ರೈತರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಶಿಕ್ಷಣ ವ್ಯವಸ್ಥೆಯ ಸ್ಥಿತಿಯೂ ಹದಗೆಡುತ್ತಿದೆ ಎಂದು ಓವೈಸಿ ಪ್ರಸ್ತಾಪಿಸಿದರು. ಈ ಸಮಸ್ಯೆಗಳನ್ನು ಚುನಾವಣಾ ಪ್ರಚಾರದ ಪ್ರಮುಖ ವಿಷಯಗಳನ್ನಾಗಿ ಮಾಡಿಕೊಂಡು ಭವಿಷ್ಯದ ದೃಷ್ಟಿಯಿಂದ ರಾಜಕೀಯ ನಡೆಸುವುದಾಗಿ ತಿಳಿಸಿದರು. ಹಿಂದುಳಿದವರು ಮತ್ತು ದಲಿತ ಸಮುದಾಯಗಳನ್ನು ಹಲವು ರಾಜಕೀಯ ಪಕ್ಷಗಳು ಕೇವಲ ಮತಬ್ಯಾಂಕ್‌ಗಳಾಗಿ ಬಳಸಿಕೊಂಡಿವೆ ಎಂದು ಆರೋಪಿಸಿದರು.

ಇದೇ ವೇಳೆ, ಮೈತ್ರಿಕೂಟವನ್ನು ಕೇವಲ ಮೂರನೇ ರಾಜಕೀಯ ರಂಗ ಎಂದು ಗುರುತಿಸುವುದಕ್ಕೆ ಚಂದ್ರಶೇಖರ್ ಆಜಾದ್ ಆಕ್ಷೇಪ ವ್ಯಕ್ತಪಡಿಸಿದರು. ಇದು ಮೂರನೇ ರಂಗವಲ್ಲ, ಸಾಮಾಜಿಕ ಬದಲಾವಣೆಗಾಗಿ ರೂಪುಗೊಂಡಿರುವ ಮೊದಲ ರಂಗ ಎಂದು ಬಣ್ಣಿಸಿದರು. ದುರ್ಬಲರು, ಶೋಷಿತರು, ಹಿಂದುಳಿದವರು ಮತ್ತು ಅವಕಾಶ ವಂಚಿತ ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ವೇದಿಕೆಗೆ ಸೇರಿದಂತೆ ಮೈತ್ರಿ ಮತ್ತಷ್ಟು ಬಲಿಷ್ಠವಾಗಲಿದೆ ಎಂದರು. ಬಡತನ ನಿರ್ಮೂಲನೆ, ಸಾಮಾಜಿಕ ನ್ಯಾಯ ಮತ್ತು ಶೋಷಿತ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವುದಾಗಿ ಹಿಂದಿನ ಸರ್ಕಾರಗಳು ನೀಡಿದ್ದ ಭರವಸೆಗಳು ಈಡೇರಿಲ್ಲ ಎಂದು ಆಜಾದ್ ಆರೋಪಿಸಿದರು. ಸರ್ಕಾರಗಳು ಬದಲಾಗಿವೆ, ಜನಪ್ರತಿನಿಧಿಗಳು ಮತ್ತು ಮುಖ್ಯಮಂತ್ರಿಗಳು ಬದಲಾಗಿದ್ದಾರೆ. ಆದರೆ ಬಹುಜನ ಸಮುದಾಯದ ಸ್ಥಿತಿಯಲ್ಲಿ ನಿರೀಕ್ಷಿತ ಬದಲಾವಣೆಯಾಗಿಲ್ಲ. ಇಂದಿಗೂ ಮೂಲಸೌಕರ್ಯಗಳಿಂದ ವಂಚಿತವಾಗಿದೆ ಎಂದು ದೂರಿದರು.

ತಮ್ಮ ವಿರುದ್ಧದ ಪ್ರಕರಣಗಳನ್ನು ಹಿಂಪಡೆಯದ ಸರ್ಕಾರ, ಮುಖ್ಯಮಂತ್ರಿ ವಿರುದ್ಧದ ಪ್ರಕರಣಗಳನ್ನು ಹಿಂಪಡೆದಿದೆ ಎಂದು ಆರೋಪಿಸಿದ ಆಜಾದ್, ತಾವು 16 ತಿಂಗಳು ಜೈಲಿನಲ್ಲಿದ್ದುದನ್ನೂ ಸುದ್ದಿಗೋಷ್ಠಿಯಲ್ಲಿ ಪ್ರಸ್ತಾಪಿಸಿದರು. ಜಾಮೀನು ದೊರೆತ ಬಳಿಕವೂ ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ) ಅಡಿ ಕ್ರಮ ಕೈಗೊಳ್ಳಲಾಗಿತ್ತು ಎಂದು ಹೇಳಿದರು. ಹತ್ರಾಸ್ ಪ್ರಕರಣವನ್ನು ಉಲ್ಲೇಖಿಸಿದ ಅವರು, ದಲಿತರ ಮೇಲಿನ ದೌರ್ಜನ್ಯ ಮತ್ತು ಜಾತಿ ಆಧಾರಿತ ಹಿಂಸಾಚಾರದ ವಿಚಾರವನ್ನೂ ಪ್ರಸ್ತಾಪಿಸಿದರು. ದಲಿತರು ಮತ್ತು ಹಿಂದುಳಿದ ಸಮುದಾಯಗಳ ಜನರ ಹತ್ಯೆ, ಮಹಿಳೆಯರ ಸುರಕ್ಷತೆ, ಶಿಕ್ಷಣದ ಕೊರತೆ, ವಿದ್ಯಾವಂತರ ನಿರುದ್ಯೋಗ, ಕುಡಿಯುವ ನೀರು ಮತ್ತು ವಿದ್ಯುತ್ ಸಮಸ್ಯೆಗಳ ಕುರಿತು ಆಜಾದ್ ಕಳವಳ ವ್ಯಕ್ತಪಡಿಸಿದರು. ಲಖನೌನಲ್ಲಿ ರಾಮಶಂಕರ್ ವಾಲ್ಮೀಕಿ ಅವರ ಹತ್ಯೆಯನ್ನೂ ಉಲ್ಲೇಖಿಸಿದರು. ರಾಜ್ಯದಲ್ಲಿ ಪ್ರತಿದಿನ ಪ್ರತಿಮೆಗಳ ಧ್ವಂಸ ನಡೆಯುತ್ತಿದೆ ಎಂದು ಆರೋಪಿಸಿದ ಅವರು, ಮೀಸಲಾತಿ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲು ಯಾರಾದರೂ ಪ್ರಯತ್ನಿಸಿದರೆ ಅದನ್ನು ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಸೀಟು ಹಂಚಿಕೆ ವಿಚಾರದಲ್ಲಿ ಎರಡೂ ಪಕ್ಷಗಳ ನಡುವೆ ಭಿನ್ನಾಭಿಪ್ರಾಯವಿಲ್ಲ ಎಂದು ಚಂದ್ರಶೇಖರ್ ಆಜಾದ್ ಸ್ಪಷ್ಟಪಡಿಸಿದರು. ರಾಜ್ಯದ ಎಲ್ಲ 403 ಕ್ಷೇತ್ರಗಳಲ್ಲೂ ಒಟ್ಟಾಗಿ ಸ್ಪರ್ಧಿಸಲಿದ್ದೇವೆ ಎಂದು ತಿಳಿಸಿದರು. ಬಿಜೆಪಿ ಸರ್ಕಾರದ ವಿರುದ್ಧದ ಹೋರಾಟದಲ್ಲಿ ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಕೂಡ ಮೈತ್ರಿಕೂಟದೊಂದಿಗೆ ಕೈಜೋಡಿಸಬಹುದು. ಈ ಪಕ್ಷಗಳು ಬರಲು ಬಯಸಿದರೆ ಸ್ವಾಗತಿಸುವುದಾಗಿ ಆಹ್ವಾನ ನೀಡಿದರು. ನವೆಂಬರ್ 26ರಂದು ಬೃಹತ್ ಸಾರ್ವಜನಿಕ ಸಭೆ ಆಯೋಜಿಸಲಾಗುವುದು ಎಂದು ಓವೈಸಿ ಘೋಷಿಸಿದರು. ಈ ಸಭೆಯ ಮೂಲಕ ರಾಜ್ಯದಲ್ಲಿ ಸಾಮಾಜಿಕ ಪರಿವರ್ತನೆಯ ಚಳವಳಿಗೆ ಚಾಲನೆ ನೀಡುವ ಉದ್ದೇಶವಿದೆ ಎಂದು ಹೇಳಿದರು.

ನವಿ ಮುಂಬೈ ದೇಶದ ಅತ್ಯಂತ ಸ್ವಚ್ಛ ನಗರ



ನವದೆಹಲಿ, ನ. 12: ಕೇಂದ್ರ ಗೃಹ ಮತ್ತು ನಗರ ವ್ಯವಹಾರಗಳ ಸಚಿವಾಲಯ ನೀಡುವ ವಾರ್ಷಿಕ ಸ್ವಚ್ಛ ಸರ್ವೇಕ್ಷಣಾ 2025–26 ಶ್ರೇಯಾಂಕದಲ್ಲಿ ಮಹಾರಾಷ್ಟ್ರದ ನವಿ ಮುಂಬೈ ದೇಶದಲ್ಲೇ ಅತ್ಯಂತ ಸ್ವಚ್ಛ ನಗರವಾಗಿ ಹೊರಹೊಮ್ಮಿದೆ. ಗುಜರಾತ್‌ನ ಸೂರತ್ ಮತ್ತು ಆಂಧ್ರಪ್ರದೇಶದ ವಿಜಯವಾಡ ನಗರಗಳು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಗಳನ್ನು ಪಡೆದಿವೆ. ಕರ್ನಾಟಕದ ಬೆಂಗಳೂರು ಮತ್ತು ಮೈಸೂರು ನಗರಗಳು ಸಹ ಸ್ವಚ್ಛತಾ ಶ್ರೇಯಾಂಕದ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿವೆ.

ಕಳೆದ ಎಂಟು ವರ್ಷಗಳಿಂದ ದೇಶದ ಅತ್ಯಂತ ಸ್ವಚ್ಛ ನಗರವಾಗಿ ಅಗ್ರಸ್ಥಾನದಲ್ಲಿದ್ದ ಮಧ್ಯಪ್ರದೇಶದ ಇಂದೋರ್, ಈ ಬಾರಿಯ ಅತ್ಯುತ್ತಮ ನಗರಗಳ ಪಟ್ಟಿಯಲ್ಲಿ ಕಾಣಿಸಿಕೊಳ್ಳದಿರುವುದು ಸಾರ್ವಜನಿಕ ಮತ್ತು ಆಡಳಿತ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ನವದೆಹಲಿಯ ವಿಜ್ಞಾನ ಭವನದಲ್ಲಿ ಬುಧವಾರ ಆಯೋಜಿಸಲಾಗಿದ್ದ ವಿಶೇಷ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಈ ಬಾರಿಯ ಸಮೀಕ್ಷೆಯನ್ನು ಸ್ವಚ್ಛತಾ ಕೀ ನಯೀ ಪಹಲ್– ಬಢಾಯೇಂ ಹಾತ್, ಕರೇಂ ಸಫಾಯಿ ಸಾಥ್ ಎಂಬ ಧ್ಯೇಯವಾಕ್ಯದೊಂದಿಗೆ ನಡೆಸಲಾಗಿತ್ತು.

ಸ್ವಚ್ಛ ನದಿ ತೀರದ ನಗರಗಳಲ್ಲಿ ಮಧ್ಯಪ್ರದೇಶದ ರೇವಾ ಪ್ರಥಮ ಸ್ಥಾನ ಪಡೆದರೆ, ಛತ್ತೀಸ್‌ಗಢದ ಬಿಲಾಸ್‌ಪುರ ಮತ್ತು ಉತ್ತರ ಪ್ರದೇಶದ ವಾರಣಸಿ ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನಗಳನ್ನು ಗಳಿಸಿವೆ. ಸ್ವಚ್ಛ ಕರಾವಳಿ ನಗರಗಳಲ್ಲಿ ಒಡಿಶಾದ ಪುರಿ ನಗರ ಪ್ರಥಮ ಸ್ಥಾನ ಗಳಿಸಿದ್ದು, ಕೇರಳದ ಅಲಪ್ಪುಳ ಮತ್ತು ಮಹಾರಾಷ್ಟ್ರದ ರತ್ನಾಗಿರಿ ಮುಂದಿನ ಸ್ಥಾನಗಳಲ್ಲಿವೆ. ಹಿಮಾಲಯನ್ ನಗರಗಳ ವಿಭಾಗದಲ್ಲಿ ಉತ್ತರಾಖಂಡ್‌ನ ರುದ್ರಪುರ ಪ್ರಥಮ ಸ್ಥಾನ ಪಡೆದರೆ, ಜಮ್ಮು ಎರಡನೇ ಸ್ಥಾನದಲ್ಲಿದೆ.

2016ರಲ್ಲಿ ಕೇವಲ 73 ನಗರಗಳೊಂದಿಗೆ ಆರಂಭಗೊಂಡ ಸ್ವಚ್ಛ ಸರ್ವೇಕ್ಷಣಾ ಅಭಿಯಾನವು 10ನೇ ಆವೃತ್ತಿಗೆ ತಲುಪಿದ್ದು, ಈ ಬಾರಿ ದೇಶಾದ್ಯಂತ 4,751ಕ್ಕೂ ಹೆಚ್ಚು ನಗರಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸಲಾಗಿತ್ತು. ನಗರಗಳ ನೈರ್ಮಲ್ಯ, ತ್ಯಾಜ್ಯ ನಿರ್ವಹಣೆ, ಸಾರ್ವಜನಿಕ ಶೌಚಾಲಯಗಳ ಬಳಕೆ, ಪ್ರವಾಸಿ ತಾಣಗಳು ಮತ್ತು ಪಾರಂಪರಿಕ ಸ್ಥಳಗಳ ಸ್ವಚ್ಛತೆ, ಶಾಲಾ ಹಂತದಲ್ಲಿ ಜಾಗೃತಿ ಹಾಗೂ ಸಾರ್ವಜನಿಕರ ನೇರ ಅಭಿಪ್ರಾಯಗಳನ್ನು ಈ ಬಾರಿಯ ಶ್ರೇಯಾಂಕ ಪಟ್ಟಿಯಲ್ಲಿ ಪ್ರಮುಖವಾಗಿ ಪರಿಗಣಿಸಲಾಗಿದೆ.

ಜಗತ್ತು ಸಮಸ್ಯೆಗಳ ಪರಿಹಾರಕ್ಕಾಗಿ ಭಾರತದತ್ತ ನೋಡುತ್ತಿದೆ: ಭಾಗವತ್



ನಾಗಪುರ,ನ.12: ಜಗತ್ತು ವಿವಿಧ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಭಾರತದತ್ತ ಹೆಚ್ಚು ನಿರೀಕ್ಷೆಯಿಂದ ನೋಡುತ್ತಿದೆ. ಹೀಗಾಗಿ ಭಾರತ ತನ್ನ ಸಾಂಪ್ರದಾಯಿಕ ಜ್ಞಾನ, ಸಮಗ್ರ ಜೀವನದೃಷ್ಟಿ ಹಾಗೂ ಸ್ವಾವಲಂಬನೆಯ ಆಧಾರದ ಮೇಲೆ ಹೊಸ ಅಭಿವೃದ್ಧಿ ಮಾದರಿಯನ್ನು ಜಗತ್ತಿಗೆ ನೀಡಬೇಕು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಮಹಾರಾಷ್ಟ್ರದ ನಾಗ್ಪುರ ಜಿಲ್ಲೆಯ ರಾಮ್‌ಟೇಕ್‌ನಲ್ಲಿ ದತ್ತಾ ಮೇಘೆ ಫೌಂಡೇಶನ್ನ ಪಶುವೈದ್ಯಕೀಯ ಮತ್ತು ಕೃಷಿ ಕಾಲೇಜಿನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಮನುಷ್ಯ, ಪ್ರಾಣಿಗಳು ಮತ್ತು ಪ್ರಕೃತಿಯ ನಡುವಿನ ಪರಸ್ಪರ ಸಂಬಂಧದ ಮಹತ್ವವನ್ನು ವಿವರಿಸಿದರು. ಮನುಷ್ಯ ಪ್ರಕೃತಿಯ ಒಡೆಯನಲ್ಲ, ಬದಲಾಗಿ ಪ್ರಕೃತಿಯ ಒಂದು ಭಾಗವಾಗಿದ್ದಾನೆ. ಮಾನವ ಜೀವನ, ಪ್ರಾಣಿಗಳ ಆರೋಗ್ಯ ಮತ್ತು ಪರಿಸರದ ನಡುವೆ ಸಾಮರಸ್ಯ ಕಾಪಾಡಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು. ಜೀವವೈವಿಧ್ಯ, ಪರಿಸರ ವ್ಯವಸ್ಥೆ, ಪ್ರಾಣಿಗಳ ಆರೋಗ್ಯ ಹಾಗೂ ಪರಿಸರ ಸಂರಕ್ಷಣೆ ಮಾನವನ ಕಲ್ಯಾಣಕ್ಕೆ ಅತ್ಯಗತ್ಯ. ಕೇವಲ ವೈಯಕ್ತಿಕ ಹಿತಾಸಕ್ತಿಗೆ ಆದ್ಯತೆ ನೀಡುವ ಬದಲು ಎಲ್ಲರ ಹಿತವನ್ನು ಗಮನದಲ್ಲಿಟ್ಟುಕೊಂಡು ಜೀವನಶೈಲಿ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಭಿವೃದ್ಧಿ ಎಂದರೆ ಕೇವಲ ಆರ್ಥಿಕ ಪ್ರಗತಿಯಲ್ಲ. ಮನುಷ್ಯರು, ಪ್ರಾಣಿಗಳು ಮತ್ತು ಪ್ರಕೃತಿ ಒಟ್ಟಾಗಿ ಸುಸ್ಥಿತಿಯಲ್ಲಿರುವಂತೆ ಅಭಿವೃದ್ಧಿಯ ಹಾದಿಯನ್ನು ರೂಪಿಸಬೇಕು. ಇದಕ್ಕಾಗಿ ಜನರು ಸ್ವಯಂ ನಿಯಂತ್ರಣ ಮತ್ತು ಸಮತೋಲಿತ ಜೀವನದ ವಿಧಾನವನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಆಧುನಿಕ ಜಗತ್ತು ಈ ಹಿಂದೆ ಮನುಷ್ಯನೇ ಪ್ರಕೃತಿಯ ಒಡೆಯ ಎಂಬ ಭಾವನೆಯೊಂದಿಗೆ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳುತ್ತಿತ್ತು. ಆದರೆ ಈಗ ಎಲ್ಲ ಜೀವಿಗಳು ಪರಸ್ಪರ ಅವಲಂಬಿತವಾಗಿವೆ ಎಂಬ ಸತ್ಯವನ್ನು ಅರಿತುಕೊಳ್ಳುತ್ತಿದೆ ಎಂದು ಭಾಗವತ್ ಅಭಿಪ್ರಾಯಪಟ್ಟರು.

ಸಂಪ್ರದಾಯಿಕ ಜ್ಞಾನ, ಸಮಗ್ರ ಜೀವನದೃಷ್ಟಿ ಆಧರಿಸಿ ಅಭಿವೃದ್ಧಿ ಮಾದರಿ ರೂಪಿಸಲು ಕರೆ

ಮಾನವ, ಪ್ರಾಣಿ ಮತ್ತು ಪರಿಸರದ ಆರೋಗ್ಯವನ್ನು ಒಂದೇ ದೃಷ್ಟಿಕೋನದಲ್ಲಿ ನೋಡುವ 'ಒನ್ ಹೆಲ್ತ್' ಪರಿಕಲ್ಪನೆ ಆಧುನಿಕ ಜಗತ್ತಿಗೆ ಕಳೆದ 20ರಿಂದ 30 ವರ್ಷಗಳಲ್ಲಿ ಪರಿಚಿತವಾಗಿದೆ. ಆದರೆ ಭಾರತದಲ್ಲಿ ಇಂತಹ ಸಮಗ್ರ ದೃಷ್ಟಿಕೋನ ಸಾಂಪ್ರದಾಯಿಕವಾಗಿ ಅಸ್ತಿತ್ವದಲ್ಲಿತ್ತು ಎಂದು ಅವರು ತಿಳಿಸಿದರು. ಯಶಸ್ಸು ಅಥವಾ ಪ್ರಸಿದ್ಧಿ ಗಳಿಸಿದ ಬಳಿಕ ಜನರು ಅಹಂಕಾರ ಬೆಳೆಸಿಕೊಳ್ಳಬಾರದು. ಸಮಾಜದಲ್ಲಿ ಹಿಂದುಳಿದವರನ್ನೂ ನೆನಪಿನಲ್ಲಿಟ್ಟುಕೊಂಡು ಎಲ್ಲರ ಕಲ್ಯಾಣಕ್ಕೆ ಶ್ರಮಿಸಬೇಕು ಎಂದು ಮೋಹನ್ ಭಾಗವತ್ ಕರೆ ನೀಡಿದರು.

ಸರ್ಕಾರ ಕೆಡವಲು ಯತ್ನ: ಶಾಸಕರಿಗೆ ಸಿಎಂ ವಿಜಯ್ ಎಚ್ಚರಿಕೆ



ಚೆನ್ನೈ, ನ. 12: ತಮಿಳುನಾಡಿನ ಆರು ತಿಂಗಳ ಹಳೆಯ ಟಿ.ವಿ.ಕೆ ಪಕ್ಷದ ಸರ್ಕಾರವನ್ನು ಉರುಳಿಸಲು ಹೊಸ ಯತ್ನಗಳು ನಡೆಯುತ್ತಿವೆ ಎಂಬ ಗುಪ್ತಚರ ವರದಿಗಳ ಬೆನ್ನಲ್ಲೇ, ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ತಮ್ಮ ಶಾಸಕರೊಂದಿಗೆ ಬುಧವಾರ ಮಹಾಬಲಿಪುರಂನ ಐಷಾರಾಮಿ ಹೋಟೆಲ್ನಲ್ಲಿ ಮಹತ್ವದ ಸಭೆ ನಡೆಸಿದ್ದಾರೆ. ಸುಮಾರು 2 ಗಂಟೆ 45 ನಿಮಿಷಗಳ ಕಾಲ ನಡೆದ ಈ ಸಭೆಯಲ್ಲಿ ಶಾಸಕರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಚರ್ಚಿಸಿದ ಅವರು, ಯಾವುದೇ ಕಾರಣಕ್ಕೂ ಎದುರಾಳಿಗಳ ಆಮಿಷಗಳಿಗೆ ಬಲಿಯಾಗದಂತೆ ಎಚ್ಚರಿಕೆ ನೀಡಿದ್ದಾರೆ.

ಕಳೆದ ಮೇ 13ರಂದು ವಿಜಯ್ ಸರ್ಕಾರವು ವಿಧಾನಸಭೆಯಲ್ಲಿ ವಿಶ್ವಾಸಮತ ಸಾಬೀತುಪಡಿಸಿತ್ತು. ಇದೀಗ ನವೆಂಬರ್ 13ಕ್ಕೆ ಆರು ತಿಂಗಳು ಪೂರ್ಣಗೊಳ್ಳಲಿದ್ದು, ನಿಯಮಗಳ ಪ್ರಕಾರ ವಿರೋಧ ಪಕ್ಷಗಳು ಮತ್ತೊಮ್ಮೆ ಅವಿಶ್ವಾಸ ನಿರ್ಣಯ ಮಂಡಿಸುವ ಸಾಧ್ಯತೆಯಿದೆ. ದೆಹಲಿಯ ರಾಜಕೀಯ ಶಕ್ತಿಗಳ ಬೆಂಬಲದೊಂದಿಗೆ ಡಿಎಂಕೆ ಹಾಗೂ ಎಐಎಡಿಎಂಕೆ ಪಕ್ಷಗಳು ಆಡಳಿತ ಪಕ್ಷದ ಶಾಸಕರನ್ನು ಸೆಳೆಯಲು ಪ್ರಯತ್ನಿಸುತ್ತಿವೆ ಎಂಬ ಮಾಹಿತಿಯನ್ನು ಶಾಸಕರಿಗೆ ತಿಳಿಸಲಾಗಿದ್ದು, ರಾಜಕೀಯ ಭವಿಷ್ಯವನ್ನು ಹಾಳುಮಾಡಿಕೊಳ್ಳದಂತೆ ಕಟ್ಟುನಿಟ್ಟಿನ ಕಿವಿಮಾತು ಹೇಳಲಾಗಿದೆ.

ಈ ಸಭೆಯಲ್ಲಿ ಮುಖ್ಯಮಂತ್ರಿಗಳು ಬಹುತೇಕ ಶಾಸಕರೊಂದಿಗೆ ಕೇವಲ ಒಂದು ಅಥವಾ ಎರಡು ನಿಮಿಷಗಳ ಕಾಲ ವೈಯಕ್ತಿಕವಾಗಿ ಮಾತುಕತೆ ನಡೆಸಿದರು. ಈ ಪ್ರಕ್ರಿಯೆಯನ್ನು ಶಾಸಕರೊಬ್ಬರು ಬಿಗ್ ಬಾಸ್ ರಿಯಾಲಿಟಿ ಶೋನ ಕನ್ಫೆಷನ್ ಕೋಣೆಗೆ ಹೋಲಿಸಿದ್ದಾರೆ. ನಮ್ಮ ಪ್ರತಿಯೊಂದು ನಡೆಯ ಮೇಲೂ ನಾಯಕರ ತೀವ್ರ ನಿಗಾ ಇದೆ ಎಂಬುದು ಇದರಿಂದ ಸ್ಪಷ್ಟವಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಸಭೆಯ ಬಳಿಕ ಶಾಸಕರಿಗೆ ದೀಪಾವಳಿ ಉಡುಗೊರೆಗಳನ್ನು ನೀಡಿ, ಪಕ್ಷನಿಷ್ಠೆ ತೋರುವಂತೆ ಪ್ರೀತಿಯಿಂದಲೇ ಸೂಚಿಸಲಾಗಿದೆ.

ಇತ್ತೀಚೆಗೆ ಸಾರ್ವಜನಿಕ ವಲಯದಲ್ಲಿ ತೀವ್ರ ವಿವಾದಕ್ಕೀಡಾಗಿದ್ದ ಆಡಳಿತ ಪಕ್ಷದ ಇಬ್ಬರು ಶಾಸಕರಿಗೂ ಇದೇ ಸಭೆಯಲ್ಲಿ ಖಡಕ್ ಎಚ್ಚರಿಕೆ ನೀಡಲಾಗಿದೆ. ಕುಡಿಯುವ ನೀರಿನ ಸಮಸ್ಯೆ ಹೇಳಿಕೊಳ್ಳಲು ಬಂದಿದ್ದ ಸಾರ್ವಜನಿಕರೊಬ್ಬರ ಮೇಲೆ ಹಲ್ಲೆ ನಡೆಸಿದ ಆರೋಪ ಹೊತ್ತಿರುವ ಉಪಸಭಾಪತಿ ಎಂ. ರವಿಶಂಕರ್ ಹಾಗೂ ಜಿಲ್ಲಾಧಿಕಾರಿಯೊಬ್ಬರಿಗೆ ಅಸಭ್ಯ ಸಂದೇಶ ಕಳುಹಿಸಿದ ಆರೋಪ ಎದುರಿಸುತ್ತಿರುವ ಕಲ್ಲಕುರಿಚಿ ಶಾಸಕ ಸಿ. ಅರುಳ್ ವಿಘ್ನೇಶ್ ಅವರಿಗೆ ಶಿಸ್ತುಕ್ರಮದ ಬಿಸಿ ಮುಟ್ಟಿಸಲಾಗಿದೆ ಎಂದು ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

234 ಸದಸ್ಯ ಬಲದ ತಮಿಳುನಾಡು ವಿಧಾನಸಭೆಯಲ್ಲಿ ಆಡಳಿತರೂಢ ಟಿ.ವಿ.ಕೆ 108 ಸ್ಥಾನಗಳನ್ನು ಮಾತ್ರ ಗೆದ್ದಿದ್ದು, ಬಹುಮತಕ್ಕೆ 118 ಸ್ಥಾನಗಳ ಅಗತ್ಯವಿದೆ. ಪ್ರಸ್ತುತ ಕಾಂಗ್ರೆಸ್, ಎಡಪಕ್ಷಗಳು ಹಾಗೂ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರ ನಾಯಕತ್ವದ ವಿರುದ್ಧ ಸಿಡಿದೆದ್ದು ಬಂದಿರುವ 25 ಬಂಡಾಯ ಎಐಎಡಿಎಂಕೆ ಶಾಸಕರ ಬೆಂಬಲದೊಂದಿಗೆ ವಿಜಯ್ ಸರ್ಕಾರ ಅಸ್ತಿತ್ವದಲ್ಲಿದೆ. ಹೀಗಾಗಿ ಅಲ್ಪಮತದ ಸರ್ಕಾರವನ್ನು ಉಳಿಸಿಕೊಳ್ಳಲು ಮೈತ್ರಿ ಶಾಸಕರನ್ನು ಎಚ್ಚರಿಕೆಯಿಂದ ಹಿಡಿದಿಟ್ಟುಕೊಳ್ಳುವುದು ವಿಜಯ್ ಅವರಿಗೆ ಅತ್ಯಂತ ಅನಿವಾರ್ಯವಾಗಿದೆ.

ಶಾಸಕರನ್ನು ಸೆಳೆಯಲು ಡಿಎಂಕೆ ಪಕ್ಷದ ಮಧ್ಯವರ್ತಿಗಳು ತಲಾ 60 ರಿಂದ 70 ಕೋಟಿ ರೂಪಾಯಿಗಳ ಭಾರಿ ಆಮಿಷ ಒಡ್ಡುತ್ತಿದ್ದಾರೆ ಎಂದು ಟಿ.ವಿ.ಕೆ ಸಚಿವ ಸಿ.ಟಿ. ನಿರ್ಮಲ್ ಕುಮಾರ್ ಇತ್ತೀಚೆಗಷ್ಟೇ ಗಂಭೀರ ಆರೋಪ ಮಾಡಿದ್ದರು. ಬಿಜೆಪಿ ಬೆಂಬಲದೊಂದಿಗೆ ಈ ಕುದುರೆ ವ್ಯಾಪಾರ ನಡೆಯುತ್ತಿದೆ ಎನ್ನಲಾಗಿದ್ದು, ಇದನ್ನು ಸಮರ್ಥವಾಗಿ ತಡೆಯಲು ಹಾಗೂ ತಮ್ಮ ಶಾಸಕರು ಪಕ್ಷಾಂತರ ಮಾಡದಂತೆ ತಡೆಯಲು ಸಿಎಂ ವಿಜಯ್ ಈ ಪ್ರತ್ಯೇಕ ಸಭೆಯ ರಾಜಕೀಯ ತಂತ್ರವನ್ನು ಅನುಸರಿಸಿದ್ದಾರೆ.

ಅರವಿಂದ್ ಕೇಜ್ರಿವಾಲ್‌ಗೆ ಕೊಲೆ ಬೆದರಿಕೆ

ಬಿಷ್ಣೋಯ್ ಗ್ಯಾಂಗ್ ಹೆಸರಿನಲ್ಲಿ 7 ಕೋಟಿ ರೂ.ಗೆ ಬೇಡಿಕೆ

ನವದೆಹಲಿ,ನ.12: ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಹಾಗೂ ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಮತ್ತು ಅವರ ಪುತ್ರಿ ಹರ್ಷಿತಾ ಕೇಜ್ರಿವಾಲ್ ಅವರನ್ನು ಹತ್ಯೆ ಮಾಡುವುದಾಗಿ ಬೆದರಿಕೆ ಹಾಕಿ 7 ಕೋಟಿ ರೂಪಾಯಿ ಹಣಕ್ಕೆ ಬೇಡಿಕೆ ಇಟ್ಟಿದ್ದ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಬಂಧಿತನಿಗೂ ಬಿಷ್ಣೋಯ್ ಗ್ಯಾಂಗ್ಗೂ ಯಾವುದೇ ಸಂಬಂಧವಿಲ್ಲ ಎಂದು ಪಂಜಾಬ್ ಪೊಲೀಸ್ ಮೂಲಗಳು ತಿಳಿಸಿವೆ. ದೆಹಲಿಯ ತಿಲಕ್ ನಗರ ಕ್ಷೇತ್ರದ ಆಮ್ ಆದ್ಮಿ ಪಕ್ಷದ ಶಾಸಕ ಜರ್ನೈಲ್ ಸಿಂಗ್ ಅವರಿಗೆ ಅಪರಿಚಿತ ವ್ಯಕ್ತಿಯೊಬ್ಬ ಕರೆ ಮಾಡಿ ಬೆದರಿಕೆ ಹಾಕಿದ್ದ. ತಾನು ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ಸದಸ್ಯನೆಂದು ಪರಿಚಯಿಸಿಕೊಂಡಿದ್ದ ವ್ಯಕ್ತಿ, ಅರವಿಂದ್ ಕೇಜ್ರಿವಾಲ್ ಅವರಿಂದ 7 ಕೋಟಿ ರೂಪಾಯಿ ನೀಡುವಂತೆ ಬೇಡಿಕೆ ಇಟ್ಟಿದ್ದ. ಹಣ ನೀಡದಿದ್ದರೆ ಕೇಜ್ರಿವಾಲ್ ಮತ್ತು ಅವರ ಪುತ್ರಿಯನ್ನು ಹತ್ಯೆ ಮಾಡುವುದಾಗಿ ಬೆದರಿಕೆ ಹಾಕಿದ್ದ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಈ ಸಂಬಂಧ ನವೆಂಬರ್ 6ರಂದು ಶಾಸಕ ಜರ್ನೈಲ್ ಸಿಂಗ್ ಮೊಹಾಲಿ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ಸಲ್ಲಿಸಿದ್ದರು. ಬೆದರಿಕೆ ಕರೆ ಜೊತೆಗೆ ವಾಟ್ಸ್ಆ್ಯಪ್ ಸಂದೇಶಗಳನ್ನೂ ಕಳುಹಿಸಲಾಗಿತ್ತು. ಕೇಜ್ರಿವಾಲ್ ಹಾಗೂ ಅವರ ಕುಟುಂಬದ ಸುರಕ್ಷತೆಯ ದೃಷ್ಟಿಯಿಂದ ಸೂಕ್ತ ಭದ್ರತೆ ಒದಗಿಸುವಂತೆ ಶಾಸಕರು ಪೊಲೀಸರಿಗೆ ಮನವಿ ಮಾಡಿದ್ದರು. ದೂರಿನ ಆಧಾರದ ಮೇಲೆ ಮೊಹಾಲಿ ಪೊಲೀಸರು ಭಾರತೀಯ ನ್ಯಾಯ ಸಂಹಿತೆ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಯ ವಿವಿಧ ಸೆಕ್ಷನ್ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದರು. ಸೈಬರ್ ಕ್ರೈಂ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸುನಿಲ್ ಕುಮಾರ್ ಅವರಿಗೆ ತನಿಖೆಯ ಜವಾಬ್ದಾರಿ ವಹಿಸಲಾಗಿತ್ತು.

ತನಿಖೆ ನಡೆಸಿದ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ. ಈತ ಹರಿಯಾಣದ ರೋಹ್ಟಕ್ನ ನಿವೃತ್ತ ಗುಮಾಸ್ತ ಎಂದು ತಿಳಿದುಬಂದಿದೆ. ಬಂಧಿತನಿಗೂ ಲಾರೆನ್ಸ್ ಬಿಷ್ಣೋಯ್ ಅಥವಾ ಆತನ ಗ್ಯಾಂಗ್‌ಗೂ ಸಂಪರ್ಕವಿಲ್ಲ. ಗ್ಯಾಂಗ್ ಹೆಸರನ್ನು ದುರ್ಬಳಕೆ ಮಾಡಿಕೊಂಡು ಬೆದರಿಕೆ ಹಾಕಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಪಂಜಾಬ್ ಪೊಲೀಸ್ ಮೂಲಗಳು ತಿಳಿಸಿವೆ.

ಏಇಇ ಪರೀಕ್ಷೆ: ಆಧಾರ್ ಇಲ್ಲದ ಎನ್‌ಆರ್‌ಐಗಳಿಗೆ ಪಾಸ್‌ಪೋರ್ಟ್ ಮೂಲಕ ನೋಂದಣಿ

ನವದೆಹಲಿ, ನ. 12: ಜಂಟಿ ಪ್ರವೇಶ ಪರೀಕ್ಷೆ (ಜೆಇಇ) ಮುಖ್ಯ ಪರೀಕ್ಷೆ 2027ರ ಮೊದಲ ಸೆಷನ್‌ಗೆ ಅರ್ಜಿ ಸಲ್ಲಿಸುತ್ತಿರುವ ಅನಿವಾಸಿ ಭಾರತೀಯ (ಎನ್‌ಆರ್‌ಐ) ಅಭ್ಯರ್ಥಿಗಳಿಗೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮಹತ್ವದ ರಿಲೀಫ್ ನೀಡಿದೆ. ಆಧಾರ್ ಕಾರ್ಡ್ ಹೊಂದಿಲ್ಲದ ಎನ್‌ಆರ್‌ಐ ವಿದ್ಯಾರ್ಥಿಗಳು ತಮ್ಮ ಬಳಿ ಇರುವ ಮಾನ್ಯವಾದ (ವ್ಯಾಲಿಡ್) ಭಾರತೀಯ ಪಾಸ್‌ಪೋರ್ಟ್ ಬಳಸಿಯೇ ಅರ್ಜಿ ಸಲ್ಲಿಸಲು ಎನ್‌ಟಿಎ ಪ್ರತ್ಯೇಕ ಅವಕಾಶವನ್ನು ಕಲ್ಪಿಸಿದೆ. ಈ ಕುರಿತು ಪ್ರಕಟಣೆ ಹೊರಡಿಸಿರುವ ಎನ್‌ಟಿಎ, ಅರ್ಹ ಎನ್‌ಆರ್‌ಐ ಅಭ್ಯರ್ಥಿಗಳು ಜೆಇಇ ಮೇನ್ ನೋಂದಣಿ ಪೋರ್ಟಲ್‌ನಲ್ಲಿ ಹೊಸದಾಗಿ ಸೇರಿಸಲಾಗಿರುವ ಆಧಾರ್ ಇಲ್ಲದ ಎನ್‌ಆರ್‌ಐ ಮೂಲಕ ಅರ್ಜಿ ಸಲ್ಲಿಕೆ ಆಯ್ಕೆಯನ್ನು ಆರಿಸಿಕೊಳ್ಳುವ ಮೂಲಕ ತಮ್ಮ ಅರ್ಜಿ ಪ್ರಕ್ರಿಯೆಯನ್ನು ಸುಲಭವಾಗಿ ಪೂರ್ಣಗೊಳಿಸಬಹುದು ಎಂದು ತಿಳಿಸಿದೆ. ಈ ಸೌಲಭ್ಯವು ಎನ್‌ಟಿಎ ಅಧಿಕೃತ ವೆಬ್‌ಸೈಟ್ jeemain.nta.nic.in ನಲ್ಲಿ ಲಭ್ಯವಿದೆ.

ಭಾರತದ ಪ್ರಮುಖ ಗುರುತಿನ ಚೀಟಿಗಳಿಲ್ಲದೆ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಲು ಎನ್‌ಆರ್‌ಐ ವಿದ್ಯಾರ್ಥಿಗಳು ಸಾಕಷ್ಟು ತೊಂದರೆ ಎದುರಿಸುತ್ತಿದ್ದರು. ಈ ಬಗ್ಗೆ ಆತಂಕ ವ್ಯಕ್ತಪಡಿಸಿದ್ದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎನ್‌ಟಿಎ ಈ ಹೊಸ ಮಾರ್ಗವನ್ನು ಒದಗಿಸಿದೆ.

ಕಾರು ಪಾರ್ಕಿಂಗ್ ವಿಚಾರಕ್ಕೆ ನಡೆದ ಜಗಳ ಕೊಲೆಯಲ್ಲಿ ಅಂತ್ಯ



ನವದೆಹಲಿ,ನ.12: ಹರಿಯಾಣದ ಫರೀದಾಬಾದ್‌ನಲ್ಲಿ ಕಾರು ಪಾರ್ಕಿಂಗ್ ವಿಚಾರವಾಗಿ ನಡೆದ ಜಗಳ ಕೊಲೆಯಲ್ಲಿ ಅಂತ್ಯವಾಗಿದ್ದು ಟೆಕ್ ಮಹೀಂದ್ರಾ ಕಂಪನಿಯ ಮಾಜಿ ಹಿರಿಯ ಅಧಿಕಾರಿಯನ್ನು 5 ಸೆಕೆಂಡ್‌ಗಳಲ್ಲಿ 15 ಸುತ್ತು ಗುಂಡು ಹಾರಿಸಿ ಹತ್ಯೆ ಮಾಡಲಾಗಿದೆ.

ಫರೀದಾಬಾದ್‌ನ ಸೆಕ್ಟರ್ 21ಅ ಪ್ರದೇಶದಲ್ಲಿ ಘಟನೆ ನಡೆದಿದೆ. ಹತ್ಯೆಯಾದವರನ್ನು ಪರಂಜಿತ್ ಧನಖರ್ ಎಂದು ಗುರುತಿಸಲಾಗಿದೆ. ಇವರು ಈ ಹಿಂದೆ ಟೆಕ್ ಮಹೀಂದ್ರಾ ಕಂಪನಿಯ ಏಷ್ಯಾ–ಪೆಸಿಫಿಕ್ ಪ್ರಾದೇಶಿಕ ವ್ಯವಹಾರ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. ಬಳಿಕ ಸಿಂಗಾಪುರ ಮೂಲದ ಮತ್ತೊಂದು ಕಂಪನಿಯಲ್ಲಿ ಹಿರಿಯ ಉಪಾಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದರು.

ಅದೇ ಕಟ್ಟಡದಲ್ಲಿ ವಾಸವಾಗಿದ್ದ ಆರೋಪಿ ಮೋನು ಶರ್ಮಾ, ಪಾರ್ಕಿಂಗ್ ವಿಚಾರವಾಗಿ ಮಾತನಾಡುವ ನೆಪದಲ್ಲಿ ಧಂಖರ್ ಅವರನ್ನು ಮನೆಯ ಮೊದಲ ಮಹಡಿಯಿಂದ ಕೆಳಗೆ ಕರೆಸಿಕೊಂಡಿದ್ದಾನೆ. ಈ ವೇಳೆ ಧಂಖರ್ ತಮ್ಮ ಮಗನೊಂದಿಗೆ ಕೆಳಗೆ ಬಂದಿದ್ದಾರೆ.

ಆರಂಭದಲ್ಲಿ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ. ಆರೋಪಿ ಧನಖರ್ ವಿರುದ್ಧ ಕೆಲ ಆರೋಪಗಳನ್ನು ಮಾಡಿದ್ದು, ಧನಖರ್ ಕೈಮುಗಿದು ಪರಿಸ್ಥಿತಿಯನ್ನು ತಿಳಿಗೊಳಿಸಲು ಪ್ರಯತ್ನಿಸಿದ್ದು ದೃಶ್ಯಗಳಲ್ಲಿ ಕಂಡುಬಂದಿದೆ. ಮಾತುಕತೆಯ ವೇಳೆ ಧನಖರ್ ಅವರ ಮಗ ಮಧ್ಯಪ್ರವೇಶಿಸಲು ಮುಂದಾದಾಗ, ಆರೋಪಿ ಆತನನ್ನು ಮುಂದೆ ಬರುವಂತೆ ಸನ್ನೆ ಮಾಡಿದ್ದಾನೆ.

ಬಳಿಕ ದೇವರ ಮೇಲೆ ನಂಬಿಕೆ ಇದೆಯೇ ಎಂದು ಪ್ರಶ್ನಿಸಿ, ತನ್ನ ಬಳಿ ಇದ್ದ ಪಿಸ್ತೂಲ್ ತೆಗೆದು ಧನಖರ್ ಮೇಲೆ ಗುಂಡು ಹಾರಿಸಿದ್ದಾನೆ.

ಗುಂಡಿನ ದಾಳಿಯಿಂದ ತಪ್ಪಿಸಿಕೊಳ್ಳಲು ಧನಖರ್ ಕಟ್ಟಡದ ಮುಖ್ಯ ಗೇಟ್ ಕಡೆಗೆ ಓಡಿದ್ದಾರೆ. ಈ ವೇಳೆ ಆರೋಪಿ ಅವರನ್ನು ಹಿಂಬಾಲಿಸಿ ಮತ್ತೆ ಗುಂಡು ಹಾರಿಸಿದ್ದಾನೆ.

ಸಿಸಿಟಿವಿ ದೃಶ್ಯಾವಳಿಯಲ್ಲಿ ಎರಡನೇ ಬಾರಿ ಗುಂಡು ಹಾರಿಸುವ ದೃಶ್ಯವೂ ಸೆರೆಯಾಗಿದೆ.

ಧನಖರ್ ಮೇಲೆ ಒಟ್ಟು 15ರಿಂದ 16 ಸುತ್ತು ಗುಂಡು ಹಾರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಪೈಕಿ 8ರಿಂದ 9 ಗುಂಡುಗಳು ಧನಖರ್ ಅವರಿಗೆ ತಗುಲಿದ್ದವು. ಗುಂಡಿನ ದಾಳಿಯ ಬಳಿಕ ಆರೋಪಿ ಅವಾಚ್ಯ ಶಬ್ದಗಳಿಂದ ನಿಂದಿಸಿ, 'ಹ್ಯಾಪಿ ದೀಪಾವಳಿ' ಎಂದು ಹೇಳುತ್ತಾ ಸ್ಥಳದಿಂದ ಪರಾರಿಯಾಗಿರುವುದು ಸಿಸಿಟಿವಿಯಲ್ಲಿ ದಾಖಲಾಗಿದೆ.

5 ಸೆಕೆಂಡ್‌ಗಳಲ್ಲಿ 15 ಸುತ್ತು ಗುಂಡು ಹಾರಿಸಿದ ಆರೋಪಿ


ಪಾರ್ಕಿಂಗ್ ವಿಚಾರವಾಗಿ ಹಳೆಯ ವೈಷಮ್ಯ

ಎರಡೂ ಕುಟುಂಬಗಳ ನಡುವೆ ಹಲವು ದಿನಗಳಿಂದ ಪಾರ್ಕಿಂಗ್ ವಿಚಾರವಾಗಿ ವಿವಾದವಿತ್ತು. ಆರೋಪಿಯ ಮಗ ಸಾಕುನಾಯಿಯನ್ನು ಸಾಮಾನ್ಯ ಪಾರ್ಕಿಂಗ್ ಪ್ರದೇಶಕ್ಕೆ ಕರೆತಂದು ಮಲಮೂತ್ರ ವಿಸರ್ಜನೆ ಮಾಡಿಸುತ್ತಿದ್ದ ವಿಚಾರಕ್ಕೂ ಧನಖರ್ ಕುಟುಂಬ ಆಕ್ಷೇಪ ವ್ಯಕ್ತಪಡಿಸಿತ್ತು. ಈ ವಿಚಾರವಾಗಿ ಎರಡೂ ಕುಟುಂಬಗಳ ನಡುವೆ ನಾಲ್ಕೈದು ದಿನಗಳಿಂದ ವಾಗ್ವಾದ ನಡೆದಿತ್ತು. ಧಂಖರ್ ಅವರು ಸಿಂಗಾಪುರದಿಂದ ಭಾರತಕ್ಕೆ ಮರಳಿದ್ದು, ತಮ್ಮ ಸೋದರಳಿಯನ ವಿವಾಹ ಸಮಾರಂಭದಲ್ಲಿ ಪಾಲ್ಗೊಳ್ಳುವ ಉದ್ದೇಶ ಹೊಂದಿದ್ದರು.

ಇದೇ ಸಂದರ್ಭದಲ್ಲಿ ಈ ದುರಂತ ಸಂಭವಿಸಿದೆ. ಘಟನೆ ಬಳಿಕ ಕುಟುಂಬ ಸಮೇತ ಪರಾರಿಯಾಗಿದ್ದ ಆರೋಪಿ ಮೋನು ಶರ್ಮಾನನ್ನು ಫರಿದಾಬಾದ್ ಕ್ರೈಂ ಬ್ರಾಂಚ್ ಪೊಲೀಸರು ಬಂಧಿಸಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಟಿವಿ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದು, ಹತ್ಯೆಯ ಹಿಂದಿನ ಕಾರಣಗಳು ಹಾಗೂ ಘಟನೆಯ ಸಂಪೂರ್ಣ ವಿವರಗಳ ಕುರಿತು ತನಿಖೆ ಮುಂದುವರಿದಿದೆ.

ವಿವಾಹೇತರ ಸಂಬಂಧ ಹಗರಣದ ನಡುವೆ ಎನ್ವಿಡಿಯಾ ಸಿಇಓ ಹುದ್ದೆಗೆ ಜೆನ್ಸನ್ ಹುವಾಂಗ್ ರಾಜೀನಾಮೆ

ಎನ್ವಿಡಿಯಾ ಕಾರ್ಪ್ ಸಹ–ಸಂಸ್ಥಾಪಕ ಜೆನ್ಸನ್ ಹುವಾಂಗ್ ಅವರು ಅಧ್ಯಕ್ಷ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಮಂಡಳಿಯ ಸದಸ್ಯ ಸ್ಥಾನಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ರಾಜೀನಾಮೆ ನೀಡಿದ್ದಾರೆ, AI ಚಿಪ್ ಮೇಕರ್‌ನಲ್ಲಿ ಅವರ 33 ವರ್ಷಗಳ ನಾಯಕತ್ವವನ್ನು ಕೊನೆಗೊಳಿಸಿದ್ದಾರೆ. ಅವರ ವಿವಾಹೇತರ ಸಂಬಂಧದ ಬಗ್ಗೆ ದಿನಗಟ್ಟಲೆ ಹೆಚ್ಚುತ್ತಿರುವ ಒತ್ತಡದ ನಂತರ ರಾಜೀನಾಮೆ ನೀಡಲಾಗಿದೆ ಮತ್ತು ಅವರು ವಿದೇಶಿ ಗುಪ್ತಚರ ಪ್ರಯತ್ನಕ್ಕೆ ಗುರಿಯಾಗಿದ್ದಾರೆ ಎಂದು ವರದಿಯಾಗಿದೆ. ಮುಖ್ಯ ಹಣಕಾಸು ಅಧಿಕಾರಿ ಕೊಲೆಟ್ ಕ್ರೆಸ್ ಮಧ್ಯಂತರ ಸಿಇಒ ಆಗಿರುತ್ತಾರೆ ಮತ್ತು ಮಂಡಳಿಯು ಶಾಶ್ವತ ಉತ್ತರಾಧಿಕಾರಿಯನ್ನು ಹೆಸರಿಸುವವರೆಗೆ ಕಾರ್ಯನಿರ್ವಾಹಕ ಉಪಾಧ್ಯಕ್ಷೆ ಮತ್ತು ಸಿಎಫ್‌ಒ ಆಗಿ ತಮ್ಮ ಪಾತ್ರವನ್ನು ಉಳಿಸಿಕೊಳ್ಳುತ್ತಾರೆ. ಮಂಡಳಿಯು ಶಾಶ್ವತ ಸಿಇಒಗಾಗಿ ಹುಡುಕಾಟವನ್ನು ಪ್ರಾರಂಭಿಸಿದೆ ಮತ್ತು ಆಂತರಿಕ ಮತ್ತು ಬಾಹ್ಯ ಅಭ್ಯರ್ಥಿಗಳನ್ನು



ಪರಿಗಣಿಸುತ್ತದೆ ಎಂದು ಚಿಪ್ ಮೇಕರ್ ಗುರುವಾರ ಹೇಳಿಕೆಯಲ್ಲಿ ತಿಳಿಸಿದೆ. ಎನ್ವಿಡಿಯಾ ಹಾರ್ವೆ ಸಿ. ಜೋನ್ಸ್ ಅವರನ್ನು ಮಂಡಳಿಯ ಮೊದಲ ಅಧ್ಯಕ್ಷರನ್ನಾಗಿ ನೇಮಿಸಿದೆ. ಜೋನ್ಸ್ ಉದ್ಯಮಿ, ತಂತ್ರಜ್ಞಾನ ಕಾರ್ಯನಿರ್ವಾಹಕ ಮತ್ತು ಸಾಹಸೋದ್ಯಮ ಹೂಡಿಕೆದಾರರಾಗಿ ಮೂರು ದಶಕಗಳಿಗೂ ಹೆಚ್ಚು ಕಾಲ ಕಳೆದಿದ್ದಾರೆ ಮತ್ತು ಈ ಹಿಂದೆ ಸಿನಾಪ್ಸಿಸ್‌ನ ಸಿಇಒ ಮತ್ತು ಕಾರ್ಯನಿರ್ವಾಹಕ ಅಧ್ಯಕ್ಷರಾಗಿದ್ದರು. ಸಂಭಾವ್ಯ ರಾಷ್ಟ್ರೀಯ ಭದ್ರತಾ ಕಾಳಜಿಗಳ ಬಗ್ಗೆ ಎನ್ವಿಡಿಯಾ ಸ್ವತಂತ್ರ ತನಿಖೆಯನ್ನು ಪ್ರಾರಂಭಿಸಿದೆ. ತನ್ನ ವ್ಯಾಪಾರ ರಹಸ್ಯಗಳು ಅಥವಾ ಯುಎಸ್ ರಾಷ್ಟ್ರೀಯ ಭದ್ರತೆಗೆ ಧಕ್ಕೆಯಾಗಿದೆ ಎಂದು ನಂಬಲು ಯಾವುದೇ ಕಾರಣವಿಲ್ಲ ಎಂದು ಕಂಪನಿ ಹೇಳುತ್ತದೆ.

ಚೀನಾಕ್ಕೆ ಅಮೇರಿಕದ ಚಿಪ್‌ಗಳ ಮಾರಾಟವನ್ನು ಕಾಂಗ್ರೆಸ್ ನಿರ್ಬಂಧಿಸಬೇಕು ಎಂದು ವಾರೆನ್ ಹೇಳುತ್ತಾರೆ:

ಡೆಮಾಕ್ರಟಿಕ್ ಸೆನೆಟರ್ ಎಲಿಜಬೆತ್ ವಾರೆನ್ ಅವರು, ಏನು ನಡೆದಿದೆ ಎಂಬುದರ ಕುರಿತು ಎನ್ವಿಡಿಯಾ ಇನ್ನೂ ಕಾಂಗ್ರೆಸ್ಗೆ ಉತ್ತರ ನೀಡಬೇಕಿದೆ ಎಂದು ಹೇಳಿದ್ದಾರೆ. ವಾರೆನ್ ಅವರ ಅಭಿಪ್ರಾಯಗಳು ಮಹತ್ವದ್ದಾಗಿವೆ, ಏಕೆಂದರೆ ಅವರು 'ಬ್ಯಾಂಕಿಂಗ್ ಸಮಿತಿ'ಯ ಮುಂದಿನ ಅಧ್ಯಕ್ಷರಾಗುವ ಸಾಧ್ಯತೆಯಿದೆ; ಈ ಸಮಿತಿಯು ರಫ್ತು ನಿಯಂತ್ರಣಗಳ ಮೇಲೆ ಪ್ರಮುಖ ಮೇಲ್ವಿಚಾರಣಾ ಪಾತ್ರವನ್ನು ಹೊಂದಿದೆ. ಲಿಖಿತ ಹೇಳಿಕೆಯಲ್ಲಿ, ಚೀನಾಕ್ಕೆ ಅಮೇರಿಕದ ಚಿಪ್‌ಗಳ ಮಾರಾಟವನ್ನು ನಿರ್ಬಂಧಿಸುವ ಹೊಸ ನಿಯಮಗಳನ್ನು ಕಾಂಗ್ರೆಸ್ ತುರ್ತಾಗಿ ಜಾರಿಗೊಳಿಸಬೇಕು ಎಂದು ಅವರು ತಿಳಿಸಿದ್ದಾರೆ. "

ಎನ್ವಿಡಿಯಾ ಸಿಇಒ ಜೆನ್ಸೆನ್ ಹುವಾಂಗ್ ಅವರ ರಾಜೀನಾಮೆಯ ನಿರ್ಧಾರವು, ನಮ್ಮ ರಾಷ್ಟ್ರೀಯ ಭದ್ರತೆಯನ್ನು ಅಪಾಯಕ್ಕೆ ಒಡ್ಡಿದ ಅಥವಾ ನಮ್ಮ ಕಾನೂನುಗಳನ್ನು ಉಲ್ಲಂಘಿಸಿದ ಜವಾಬ್ದಾರಿಯಿಂದ ಅವರನ್ನು, ಇತರ ಕಾರ್ಯನಿರ್ವಾಹಕರನ್ನು ಅಥವಾ ಒಟ್ಟಾರೆ ಕಂಪನಿಯನ್ನು ಮುಕ್ತಗೊಳಿಸುವುದಿಲ್ಲ" ಎಂದು ವಾರೆನ್ ಹೇಳಿದ್ದಾರೆ.

ಜೆನ್ಸನ್ ಹುವಾಂಗ್ ಅವರ ರಾಜೀನಾಮೆಯಿಂದ ಆರಂಭಿಕ ವ್ಯವಹಾರದಲ್ಲಿ ಎನ್ವಿಡಿಯಾ ಷೇರುಗಳು ಶೇ. 13 ರಷ್ಟು ಕುಸಿದಿವೆ. ಅಂದರೆ ಹುವಾಂಗ್ ಅವರ ವಿವಾಹೇತರ ಸಂಬಂಧಗಳ ಬಗ್ಗೆ ಮೊದಲು ಬಹಿರಂಗಪಡಿಸಿದಾಗ ಈ ವಾರ ಎನ್ವಿಡಿಯಾ 800 ಶತಕೋಟಿ ಡಾಲರ್ ನಷ್ಟ ಅನುಭವಿಸಿದೆ.

ಇರಾನ್ ಜೊತೆ ನಮಗೆ ಒಪ್ಪಂದದ ಅಗತ್ಯವಿಲ್ಲ: ಅಧ್ಯಕ್ಷ ಟ್ರಂಪ್ ಸ್ಪಷ್ಟನೆ

ವಾಷಿಂಗ್ಟನ್: ಅಮೆರಿಕಕ್ಕೆ ಇರಾನ್ ಜೊತೆ "ಒಪ್ಪಂದದ ಅಗತ್ಯವಿಲ್ಲ" ಎಂದು ಅಧ್ಯಕ್ಷ ಟ್ರಂಪ್ ಹೇಳುತ್ತಾರೆ, "ನಮಗೆ ಅವರ ಸಂಕಷ್ಟವಿದೆ" ಎಂದು ಹೇಳಿಕೊಳ್ಳುತ್ತಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಟ್ರಂಪ್ ಹೇಳಿದರು: "ನಮಗೆ ಇರಾನ್ ಜೊತೆ ಒಪ್ಪಂದದ ಅಗತ್ಯವಿಲ್ಲ. ಆ ದಿನಗಳು ಬಹಳ ಹಿಂದೆಯೇ ಕಳೆದಿವೆ. ನಮಗೆ ಅವರ ಹಣ, ನೂರಾರು ಶತಕೋಟಿ ಡಾಲರ್‌ಗಳು ಸಿಕ್ಕಿವೆ ಮತ್ತು ನಮಗೆ ಅವರ ಸಂಕಷ್ಟವಿದೆ."



ಟ್ರಂಪ್ ಇರಾನ್ ಜೊತೆ ಯಾವುದೇ ಒಪ್ಪಂದದ ಅಗತ್ಯವಿಲ್ಲ ಎಂದು ಹೇಳಿದ ನಂತರ ತೈಲ ಬೆಲೆಗಳು ಏರಿಕೆಯಾಗಿವೆ: ಅಮೆರಿಕಕ್ಕೆ ಇರಾನ್ ಜೊತೆ ಒಪ್ಪಂದದ ಅಗತ್ಯವಿಲ್ಲ ಎಂದು ಅಧ್ಯಕ್ಷ ಟ್ರಂಪ್ ಹೇಳಿದ ನಂತರ ತೈಲ ಬೆಲೆಗಳು ಏರಿಕೆಯಾಗಿವೆ. ಬ್ರೆಂಟ್ ಫ್ಯೂಚರ್‌ಗಳು 1331 ಉಒಖ ನಲ್ಲಿ ಬ್ಯಾರಲ್‌ಗೆ $1.14 ಅಥವಾ 1.23 ಪ್ರತಿಶತದಿಂದ $93.90 ಕ್ಕೆ ಏರಿತು. ಅಮೆರಿಕ ವೆಸ್ಟ್ ಟೆಕ್ಸಾಸ್ ಇಂಟರ್‌ಮೀಡಿಯೇಟ್ ಕಚ್ಚಾ ತೈಲ CLc1 70 ಸೆಂಟ್‌ಗಳು ಅಥವಾ 0.81 ಪ್ರತಿಶತದಿಂದ $87.23 ಕ್ಕೆ ಏರಿತು. ಆರಂಭಿಕ ಏಷ್ಯಾದ ವಹಿವಾಟಿನಲ್ಲಿ ಎರಡೂ ಬ್ಯಾರಲ್‌ಗೆ $1 ಕ್ಕಿಂತ ಹೆಚ್ಚು ಕುಸಿದವು ಮತ್ತು ಟ್ರಂಪ್ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಮ್ಮ ಹೇಳಿಕೆ ಹಾಕುವ ಮುಲಕ ಮೊದಲು ಬೆಲೆಗಳು ಸ್ಥಿರವಾಗಿ ಕಡಿಮೆಯಾಗುತ್ತಿದ್ದವು.

ಅಮೆರಿಕದ ದಾಳಿಗೆ ಹತ್ತು ಪಟ್ಟು ಹೆಚ್ಚು ತೀಕ್ಷ್ಣ ಪ್ರತಿಕ್ರಿಯೆ ನೀಡುವುದು ಖಚಿತ: ಇರಾನ್ ತಿರುಗೇಟು

ತೆಹ್ರಾನ್: ಇರಾನ್ ಮೇಲೆ ಭವಿಷ್ಯದಲ್ಲಿ ನಡೆಯುವ ಯಾವುದೇ ದಾಳಿಯು ಹಿಂದಿನ ದಾಳಿಗಳಿಗಿಂತ ಐದು ಪಟ್ಟು ಪ್ರಬಲವಾಗಿರುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ ಬೆನ್ನಲ್ಲೇ, ಅಮೆರಿಕದ ಯಾವುದೇ ಹೊಸದಾಳಿಗೆ 'ಹತ್ತು ಪಟ್ಟು' ಹೆಚ್ಚು ತೀವ್ರವಾಗಿ ಪ್ರತಿಕ್ರಿಯಿಸುವುದಾಗಿ ಇರಾನ್ ಸಶಸ್ತ್ರ ಪಡೆಗಳ ಹಿರಿಯ ವಕ್ತಾರರು ಎಚ್ಚರಿಸಿದ್ದಾರೆ. ಇರಾನ್ ಅಧ್ಯಕ್ಷ ಪೆಜೆಶ್ಕಿಯನ್ ಅವರು, ತಮ್ಮ ದೇಶವು ಒತ್ತಡ ಅಥವಾ ನಿರ್ಬಂಧಗಳಿಗೆ ಮಣಿಯುವುದಿಲ್ಲ ಮತ್ತು ತನ್ನ ಆಂತರಿಕ ಸಾಮರ್ಥ್ಯಗಳನ್ನು ಅವಲಂಬಿಸುವ ಮೂಲಕ ಆರ್ಥಿಕ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲಿದೆ ಎಂದು ಹೇಳಿದ್ದಾರೆ.



ಇದಕ್ಕೂ ಮುನ್ನ, ಇರಾನ್ ಸಂಸತ್ತಿನ ಸ್ಪೀಕರ್ ಮತ್ತು ತೆಹ್ರಾನ್ನ ಪ್ರಮುಖ ಸಂಧಾನಕಾರ ಮೊಹಮ್ಮದ್ ಬಘೇರ್ ಘಲಿಬಾಫ್ ಅವರು 'ಅಲ್ ಜಜೀರಾ'ಗೆ ನೀಡಿದ ಸಂದರ್ಶನದಲ್ಲಿ, ಯುದ್ಧವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಇರಾನ್ ಇತ್ತೀಚೆಗೆ ಸಲ್ಲಿಸಿರುವ ಪ್ರಸ್ತಾವನೆಯ ಬಗ್ಗೆ ವಾಷಿಂಗ್ಟನ್ ನಿರ್ಧಾರ ಕೈಗೊಂಡು ಅದನ್ನು ಘೋಷಿಸಬೇಕು ಎಂದು ಆಗ್ರಹಿಸಿದ್ದಾರೆ. ಇರಾನ್ ತನ್ನ ಬಳಿ ಇರುವ ಯುರೇನಿಯಂ ದಾಸ್ತಾನನ್ನು (ಸಮೃದ್ಧ ಯುರೇನಿಯಂ) ಮೂರನೇ ದೇಶಕ್ಕೆ ವರ್ಗಾಯಿಸಬೇಕೆಂಬ ಅಮೆರಿಕದ ಪ್ರಸ್ತಾವನೆಯನ್ನು ತೆಹ್ರಾನ್ ತಿರಸ್ಕರಿಸಿದ ನಂತರ ಈ ಬೆಳವಣಿಗೆ ನಡೆದಿದೆ. ಹಾರ್ಮುಜ್ ಜಲಸಂಧಿಯಲ್ಲಿ 'ಅನಧಿಕೃತ ಮಾರ್ಗ' ಎಂದು ಇರಾನ್ ಪರಿಗಣಿಸುವ ಪ್ರದೇಶದಲ್ಲಿ ಸಂಚರಿಸುತ್ತಿದ್ದ ಎರಡು ಬೃಹತ್ ತೈಲ ಟ್ಯಾಂಕರ್‌ಗಳು, 'ಭಾರೀ ಸ್ಫೋಟ'ದ ಪರಿಣಾಮವಾಗಿ ಬೆಂಕಿಗೆ ಆಹುತಿಯಾಗಿವೆ ಎಂದು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ತಿಳಿಸಿದೆ.

ದಾಳಿ ನಡೆಸಲು ವಿರೋಧ ಪಕ್ಷದ ಅನುಮೋದನೆ ಅಗತ್ಯವಿಲ್ಲ: ಇಸ್ರೇಲ್ ರಕ್ಷಣಾ ಸಚಿವ

ಟೆಲ್ ಅವಿವ್: ಇಸ್ರೇಲ್ನ ಹಂಗಾಮಿ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಅವರು, ಪ್ರಧಾನಿ ಬೆಂಜಮಿನ್ ನೆತನ್ಯಾಹು ನೇತೃತ್ವದ ಆಡಳಿತ ಮೈತ್ರಿಕೂಟವು ಹೊಸದಾಗಿ ಮಿಲಿಟರಿ ಕಾರ್ಯಾಚರಣೆಗಳನ್ನು ಕೈಗೊಳ್ಳುವ ನಿರ್ಧಾರ ತೆಗೆದುಕೊಳ್ಳಲು ವಿರೋಧ ಪಕ್ಷದ ಅನುಮತಿಯ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಸಂಯಮ ಪಾಲಿಸುವಂತೆ ಕೇಳಿಬರುತ್ತಿರುವ ಒತ್ತಾಯಗಳ ನಡುವೆಯೇ ಅವರು ಈ ಹೇಳಿಕೆ ನೀಡಿದ್ದಾರೆ. 'ಎಕ್ಸ್' (ಫ) ಸಾಮಾಜಿಕ ಜಾಲತಾಣದಲ್ಲಿ ಬರೆದಿರುವ ಕಾಟ್ಜ್, ಇರಾನ್ನ ಹೆಸರನ್ನು ನೇರವಾಗಿ ಪ್ರಸ್ತಾಪಿಸದೆಯೇ, "ಸೈನ್ಯವು ಕಾರ್ಯಾಚರಣೆ ನಡೆಸುವ ಯಾವುದೇ ರಂಗದಲ್ಲಿ ದಾಳಿಗಳನ್ನು ಕೈಗೊಳ್ಳಲು ನಮಗೆ ವಿರೋಧ ಪಕ್ಷದ ಅಥವಾ ಯಾವುದೇ ಕಾನೂನು ಪ್ರಾಧಿಕಾರದ ಅನುಮೋದನೆಯ ಅಗತ್ಯವಿಲ್ಲ" ಎಂದು ತಿಳಿಸಿದ್ದಾರೆ. "ಇಸ್ರೇಲ್‌ನ ಭದ್ರತೆಯು ಸ್ಥಗಿತಗೊಂಡಿಲ್ಲ ಮತ್ತು ಅದು ಸಮಾನಾಂತರವಾಗಿ ನಡೆಯುತ್ತಿರುವ ರಾಜಕೀಯ



ಪ್ರಕ್ರಿಯೆಗಳಿಗಾಗಿ ಕಾಯುತ್ತಿಲ್ಲ" ಎಂದು ಅವರು ಮುಂದುವರಿಸಿದ್ದಾರೆ. ವಿರೋಧ ಪಕ್ಷದ ನಾಯಕ ಗಾಡಿ ಐಸೆನ್ಕೋಟ್ ಅವರು, ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಸಂಯಮ ಪಾಲಿಸುವಂತೆ ಕರೆ ನೀಡಿದ್ದಾರೆ. "ನೇರ ಮತ್ತು ತಕ್ಷಣದ ಬೆದರಿಕೆ" ಇಲ್ಲದೆ ಬಲಪ್ರಯೋಗ ಮಾಡುವುದು "ಇಸ್ರೇಲ್ ಪ್ರಜಾಪ್ರಭುತ್ವ ಮತ್ತು ನಾಗರಿಕರ ನಂಬಿಕೆಯ ಮೇಲೆ ವಿನಾಶಕಾರಿ ಪರಿಣಾಮಗಳನ್ನು" ಬೀರಬಹುದು ಎಂದು ಅವರು ಎಚ್ಚರಿಸಿದ್ದಾರೆ. ಕಳೆದ ತಿಂಗಳು ನಡೆದ ಚುನಾವಣಾ ಪ್ರಚಾರದ ವೇಳೆ, ನೆತನ್ಯಾಹು ಅವರು ಇರಾನ್ ವಿರುದ್ಧದ ಯುದ್ಧವನ್ನು ಪುನರಾರಂಭಿಸುವುದಾಗಿ ಪದೇ ಪದೇ ಬೆದರಿಕೆ ಹಾಕಿದ್ದರು. ರಾಷ್ಟ್ರೀಯ ಭದ್ರತೆಯ ಕುರಿತು ಚರ್ಚಿಸಲು ನೆತನ್ಯಾಹು ಅವರು ಗುರುವಾರ ಐಸೆನ್ಕೋಟ್ ಅವರನ್ನು ಭೇಟಿಯಾಗಲು ಒಪ್ಪಿಕೊಂಡಿದ್ದಾರೆ. ಗಾಜಾದ ನಾಸರ್ ವೈದ್ಯಕೀಯ ಸಂಕೀರ್ಣದ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ವೈದ್ಯರು ಮತ್ತು ಮಗುವೊಬ್ಬರು ಸೇರಿದಂತೆ ಕನಿಷ್ಠ ಆರು ಪ್ಯಾಲೆಸ್ತೀನಿಯನ್ನರು ಸಾವನ್ನಪ್ಪಿದ್ದಾರೆ ಮತ್ತು 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಇಂದಿನ ಮುಂಜಾನೆಯಿಂದೀಚೆಗೆ ಗಾಜಾ ಪಟ್ಟಿಯಾದ್ಯಂತ ಇಸ್ರೇಲ್ ನಡೆಸಿದ ದಾಳಿಗಳಲ್ಲಿ ಕನಿಷ್ಠ ನಾಲ್ವರು ಪ್ಯಾಲೆಸ್ತೀನಿಯನ್ನರು ಮೃತಪಟ್ಟಿದ್ದಾರೆ.

ಕರ್ನಾಟಕದಿಂದ ಹೆಚ್ಚು ಕ್ರೀಡಾಪಟುಗಳು ಒಲಿಂಪಿಕ್ಸ್‌ನಲ್ಲಿ ಪ್ರತಿನಿಧಿಸಬೇಕು ಎಂಬುದೇ ನನ್ನ ಕನಸು: ಗೋವಿಂದರಾಜ್

ಬೆಂಗಳೂರು, ನ.12: ಮುಂಬರುವ ದಿನಗಳಲ್ಲಿ ಕರ್ನಾಟಕದಿಂದ ಹೆಚ್ಚು ಕ್ರೀಡಾಪಟುಗಳು ಒಲಿಂಪಿಕ್ಸ್‌ನಲ್ಲಿ ಪ್ರತಿನಿಧಿಸಬೇಕು ಎಂಬುದೇ ನನ್ನ ಕನಸು. ಇದಕ್ಕೆ ಮಿನಿ ಕರ್ನಾಟಕ ಕ್ರೀಡಾಕೂಟ ಯುವ ಕ್ರೀಡಾಪಟುಗಳ ಪಾಲಿಗೆ ಉತ್ತಮ ವೇದಿಕೆಯಾಗಿದೆ ಎಂದು ಫಿಬಾ ಏಷ್ಯಾ ಅಧ್ಯಕ್ಷರು, ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಡಾ.ಕೆ. ಗೋವಿಂದರಾಜ್ ಹೇಳಿದರು.

ಕರ್ನಾಟಕ ಒಲಿಂಪಿಕ್ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಸರ್ಕಾರ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 5ನೇ ಮಿನಿ ಕರ್ನಾಟಕ ಕ್ರೀಡಾಕೂಟ ನ. 14 ರಿಂದ 21 ರವರೆಗೆ ಕಂಠೀರವ ಸ್ಟೇಡಿಯಂ ಸೇರಿದಂತೆ ಬೆಂಗಳೂರಿನ ವಿವಿಧ ಕ್ರೀಡಾಂಗಣಗಳಲ್ಲಿ ಆಯೋಜಿಸಲಾಗುತ್ತಿದೆ ಎಂದರು.

27 ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ. 2020ರಲ್ಲಿ ಮೊದಲ ಬಾರಿಗೆ ಈ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು. 14 ವಯೋಮಿತಿಯ ಸುಮಾರು 5 ಸಾವಿರ ಕ್ರೀಡಾಪಟುಗಳು ಈ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಡಾ.ಕೆ.ಗೋವಿಂದರಾಜ್ ತಿಳಿಸಿದರು.

ಕ್ರೀಡಾಪಟುಗಳಿಗೆ ಊಟ, ವಸತಿ ಹಾಗೂ ಸಾರಿಗೆ ವ್ಯವಸ್ಥೆ ಮಾಡಲಾಗುತ್ತಿದೆ. ಈ ವಯೋಮಿತಿ ಮಕ್ಕಳಿಗೆ ಇಂತಹ ಕ್ರೀಡಾಕೂಟ ಆಯೋಜಿಸುವ ಮೂಲಕ ತಯಾರು ಮಾಡಿದಾಗ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ಕ್ರೀಡಾಪಟುಗಳನ್ನು ಬೆಳೆಸುವುದಕ್ಕೆ ಮುಖ್ಯವಾಗಿ ನಾಂದಿಯಾಗಲಿದೆ ಎಂದು ಹೇಳಿದರು.

ಯುವ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಸಲುವಾಗಿ ಈ ಮಿನಿ ಕರ್ನಾಟಕ



ಕ್ರೀಡಾಕೂಟವನ್ನು ಆರಂಭಿಸಲಾಯಿತು. ಚಿಕ್ಕ ವಯಸ್ಸಿನಲ್ಲೇ ಪ್ರೋತ್ಸಾಹ ನೀಡುವುದು, ಸ್ಪರ್ಧಾತ್ಮಕತೆಗೆ ಒಗ್ಗಿಕೊಳ್ಳಲು ಈ ಕ್ರೀಡಾಕೂಟ ಸಹಕಾರಿಯಾಗುತ್ತದೆ. ಮುಂದಿನ ದಿನಗಳಲ್ಲಿ ಕರ್ನಾಟಕದ ಕ್ರೀಡಾಪಟುಗಳು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚಬೇಕು ಎಂಬುದೇ ನನ್ನ ಅಭಿಲಾಷೆ. ಭವಿಷ್ಯದ ತಾರೆಯರ ಅನಾವರಣಕ್ಕೆ ಈ ಕೂಡ ಉತ್ತಮ ವೇದಿಕೆಯಾಗಲಿದೆ ಎಂದು ಡಾ.ಗೋವಿಂದರಾಜ್ ಹೇಳಿದರು.

ರಾಜ್ಯ ಸರ್ಕಾರದಿಂದ ಪ್ರೋತ್ಸಾಹ

ಒಲಿಂಪಿಕ್ಸ್ ಗುರಿ ಯೋಜನೆ ಆರಂಭಿಸುವ ಕರ್ನಾಟಕ ಸರ್ಕಾರ ಕ್ರೀಡೆಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿದೆ. ಒಲಿಂಪಿಕ್ಸ್‌ಗೆ ತಯಾರಾಗುವ ಕ್ರೀಡಾಪಟುಗಳಿಗೆ 10 ಲಕ್ಷ ರೂಪಾಯಿ ಪ್ರೋತ್ಸಾಹಧನ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಮೊತ್ತವನ್ನು ಏರಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತರಾದ ಎಂ.ಎನ್.ಅನುಚೇತ್, ಕರ್ನಾಟಕ ರಾಜ್ಯದ ವಿವಿಧ ಕ್ರೀಡಾ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕ್ರೀಡಾಕೂಟದ ವೆಬ್‌ಸೈಟ್ ಬಿಡುಗಡೆ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 5ನೇ ಮಿನಿ ಕರ್ನಾಟಕ ಕ್ರೀಡಾಕೂಟದ ಅಧಿಕೃತ ವೆಬ್‌ಸೈಟ್ https://5thministategames.com ಅನ್ನು ಬಿಡುಗಡೆ ಮಾಡಲಾಯಿತು.

27 ಕ್ರೀಡೆಗಳು

ಮಿನಿ ಕರ್ನಾಟಕ ಕ್ರೀಡಾಕೂಟದಲ್ಲಿ ಅಥ್ಲೆಟಿಕ್ಸ್, ಆರ್ಚರಿ, ಬಾಸ್ಕೆಟ್‌ಬಾಲ್, ಬ್ಯಾಡ್ಮಿಂಟನ್, ಬಾಕ್ಸಿಂಗ್, ಸೈಕ್ಲಿಂಗ್, ಫೆನ್ಸಿಂಗ್, ಕಯಾಕಿಂಗ್ ಮತ್ತು ಕೆನೋಯಿಂಗ್, ಗಾಲ್ಫ್, ಫುಟ್ಬಾಲ್, ಜಿಮ್ನಾಸ್ಟಿಕ್ಸ್, ಹ್ಯಾಂಡ್‌ಬಾಲ್, ಹಾಕಿ, ಜೂಡೋ, ಖೋ–ಖೋ, ಕಬಡ್ಡಿ, ಲಾನ್ ಟೆನ್ನಿಸ್, ವಾಲಿಬಾಲ್, ನೆಟ್‌ಬಾಲ್, ಈಜು, ಟೇಬಲ್ ಟೆನ್ನಿಸ್, ಟೇಕ್ವಾಂಡೋ, ರೈಡಿಂಗ್, ರೈಫಲ್ ಶೂಟಿಂಗ್, ರೆಸ್ಲಿಂಗ್, ವುಶು ಮತ್ತು ವೆಯ್ಟ್ ಲಿಫ್ಟಿಂಗ್ ಕ್ರೀಡೆಗಳನ್ನೊಳಗೊಂಡಿವೆ.

ಏಷ್ಯಾಕಪ್ ಅಫ್ಘಾನಿಸ್ತಾನ ಮಣಿಸಿ ಫೈನಲ್‌ಗೇರಿದ ಭಾರತ

ನವದೆಹಲಿ, ನ.12: ನಾಯಕ ಲಕ್ಷಯ್ ರಾಯ್‌ಚಂದಾನಿ ಮತ್ತು ಆರ್ಯವೀರ್ ಸೆಹ್ವಾಗ್ ಅವರ ಅದ್ಭುತ ಅರ್ಧಶತಕಗಳು ಗುರುವಾರ ನಡೆದ ಎಸಿಸಿ ಪುರುಷರ 19 ವರ್ಷದೊಳಗಿನವರ ಏಷ್ಯಾಕಪ್‌ನ ಸೆಮಿಫೈನಲ್‌ನಲ್ಲಿ ಅಫ್ಘಾನಿಸ್ತಾನವನ್ನು 8 ವಿಕೆಟ್‌ಗಳಿಂದ ಸೋಲಿಸಲು ಭಾರತಕ್ಕೆ ಸಹಾಯ ಮಾಡಿತು. ಇದರೊಂದಿಗೆ, ಭಾರತವು ಪಂದ್ಯಾವಳಿಯ ಫೈನಲ್‌ಗೆ ಸ್ಥಾನ ಪಡೆದುಕೊಂಡಿತು.

ಭಾರತವು ಈಗ ಫೈನಲ್‌ನಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಎದುರಿಸಲಿದೆ. ಪಾಕಿಸ್ತಾನವು ಈ ಹಿಂದೆ ಏಕಪಕ್ಷೀಯ ಸೆಮಿಫೈನಲ್‌ನಲ್ಲಿ ಬಾಂಗ್ಲಾದೇಶವನ್ನು 9 ವಿಕೆಟ್‌ಗಳಿಂದ ಸೋಲಿಸಿ ಫೈನಲ್ ತಲುಪಿತ್ತು. ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನವು ಭಾರತಕ್ಕೆ ಕೇವಲ 228 ರನ್‌ಗಳ ಗುರಿಯನ್ನು ನಿಗದಿಪಡಿಸಿತು.

ಇದನ್ನು ಭಾರತ ತಂಡವು 37ನೇ ಓವರ್‌ನಲ್ಲಿ ಸುಲಭವಾಗಿ ಸಾಧಿಸಿತು.

ಗುರಿಯ ಬೆನ್ನುಹತ್ತಿದ ನಾಯಕ ಲಕ್ಷಯ್ ರಾಯ್‌ಚಂದಾನಿ ಮತ್ತು ಆರ್ಯವೀರ್ ಸೆಹ್ವಾಗ್ ಅದ್ಭುತ ಅರ್ಧಶತಕಗಳನ್ನು ಗಳಿಸಿದರು. ಇಬ್ಬರೂ 117 ರನ್‌ಗಳ ಆರಂಭಿಕ ಪಾಲುದಾರಿಕೆಯನ್ನು ಹಂಚಿಕೊಂಡರು. ಸೆಹ್ವಾಗ್ 57 ಎಸೆತಗಳಲ್ಲಿ ನಾಲ್ಕು ಬೌಂಡರಿ ಮತ್ತು ನಾಲ್ಕು ಸಿಕ್ಸರ್‌ಗಳೊಂದಿಗೆ 51 ರನ್‌ಗಳಿಗೆ ಔಟಾದರು.

ನಂತರ ಲಕ್ಷ್ಯ ಅವರನ್ನು ವಿ.ಕೆ. ವಿನೀತ್ ಸೇರಿಕೊಂಡರು. ವಿನೀತ್ ಮತ್ತು ಲಕ್ಷ್ಯ ಎರಡನೇ ವಿಕೆಟ್‌ಗೆ 77 ರನ್‌ಗಳ ಜೊತೆಯಾಟ ನಡೆಸಿ ಭಾರತದ ಗೆಲುವನ್ನು ಖಚಿತಪಡಿಸಿದರು.

ಆದಾಗ್ಯೂ, ಈ ಅವಧಿಯಲ್ಲಿ ಲಕ್ಷ್ಯ ಶತಕ ಗಳಿಸುವ ಅವಕಾಶದಿಂದ ವಂಚಿತರಾದರು. 90 ಎಸೆತಗಳಲ್ಲಿ 13 ಬೌಂಡರಿ ಮತ್ತು ಒಂದು ಸಿಕ್ಸರ್‌ನೊಂದಿಗೆ 93 ರನ್‌ಗಳಿಗೆ ಔಟಾದರು. ನಾಯಕನ ಔಟಾದ ನಂತರವೂ ವಿನೀತ್ ಚೇತರಿಸಿಕೊಂಡು ಅದ್ಭುತ ಅರ್ಧಶತಕ ಗಳಿಸಿದರು. ಅವರು 62 ಎಸೆತಗಳಲ್ಲಿ ಅಜೇಯ 57 ರನ್ ಗಳಿಸಿ ತಂಡದ ಗೆಲುವನ್ನು ಖಚಿತಪಡಿಸಿದರು.







